ಸಂಪುಟ: 13 Volume ಸಂಚಿಕೆ: 274 Issue ಪುಟಗಳು 08 Pages ಗುರುವಾರ 18 ಡಿಸೆಂಬರ್ 2025 ₹6 PRGINO.120927 (RNINO: KARKAN/2011/48371) BDR/054/2026-2027 www.mallammanudi.in mallammanudi@gmail.com 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಶರೀರ ಕೃಷಿ ಭೂಮಿಯಾಗಿದೆ. ಮನಸ್ಸು ಕೃಷಿಯಾಗಿದೆ. ಪಾಪ ಪುಣ್ಯಗಳು ಬೀಜಗಳಾಗಿವೆ. ಯಾವ ಬೀಜವನ್ನು ಬಿತ್ತುತ್ತಾನೋ ಅದನ್ನು ಕೊಯ್ಯುತ್ತಾನೆ.

–ತುಳಸೀದಾಸರು

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ತಾಯಿ, ಮಗು ಕಾಣೆ: ಪತ್ತೆಗಾಗಿ ಮನವಿ 6 | ಗ್ಯಾರಂಟಿ ಯೋಜನೆ ಉತ್ತಮ ಪ್ರಗತಿ ಸಾಧಿಸಿ 7 | ಕಿತ್ತಾಟದ ಉತ್ತರ ಕರ್ನಾಟಕವಲ್ಲ 8




ಶಾಹೀನ್ ಶಿಕ್ಷಣ ಸಂಸ್ಥೆಯ ಅಬ್ದುಲ್ ಖಾದರ್ ಅವರ ಅನುಪಸ್ಥಿತಿಯಲ್ಲಿ ಅವರ ಸಹೋದ್ಯೋಗಿ ಅವರಿಗೆ ಇಂದಿನ ಮಲ್ಲಮ್ಮ ನುಡಿ ಪತ್ರಿಕೆ ವಿತರಿಸಲಾಯಿತು.

## ಡಿ.21ಕ್ಕೆ ಹೇಮರಡ್ಡಿ ಮಲ್ಲಮ್ಮ ಮಹಿಳಾ ಸ್ವ ಸಹಾಯ ಸಂಘದ ಸಮಾವೇಶ

**ಬೀದರ:** ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಮಹಿಳಾ ಸ್ವ ಸಹಾಯ ಸಂಘದ ದಶಮಾನೋತ್ಸವ ಹಾಗೂ ರೆಡ್ಡಿ ಮಹಿಳಾ ಜಾಗ್ರತಿ ಸಮಾವೇಶ ವನ್ನು ಡಿಸೆಂಬರ್, 21 ರಂದು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಕಲ್ಯಾಣ ಮಂಟಪ ಮನ್ನಳ್ಳಿ ರಸ್ತೆಅಮಲಾಪೊರ, ಬೀದರ್ ಇಲ್ಲಿ ಬೆಳಗ್ಗೆ 10:30 ಕ್ಕೆ ಕಾರ್ಯಕ್ರಮ ಆಯೊಜಿಸಲಾಗಿದೆ ಎಂದು ಸಂಘದ ಅಧ್ಯ–ಕ್ಷೆ ಸಂಗಿತಾರವರು ಪತ್ರಿಕೆಗೆ ಮಾಹಿತಿ ನೀಡಿದ್ದಾರೆ. ಈ ಕಾರ್ಯಕ್ರಮಕ್ಕೆ ಜಿಲ್ಲೆಯ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಅಗಮಿಸಬೇಕು. ಈ ಕಾರ್ಯಕ್ರಮದ ಸದುಪಯೋಗ ಮಹಿಳೆಯರು ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.



## ಬೆಂಗಳೂರಿನಲ್ಲೇ ಐಪಿಎಲ್

**ಮೈಸೂರು:** ಆರ್‌ಸಿಬಿ ಅಭಿಮಾನಿಗಳಿಗೆ ಕೆಎಸ್ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಗುಡ್‌ನ್ಯೂಸ್ ನೀಡಿದ್ದಾರೆ. ಈ ಬಾರಿಯ ಐಪಿಎಲ್ ಉದ್ಘಾಟನಾ ಪಂದ್ಯ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಹೇಳಿದ್ದಾರೆ. ಈ ಕುರಿತು ಮಾತನಾಡಿದ ಅವರು, ಬೆಂಗಳೂರಿನಲ್ಲಿ ಉದ್ಘಾಟನಾ ಐಪಿಎಲ್ ಪಂದ್ಯ ನಡೆಸುವಂತೆ ಈಗಾಗಲೇ ಬಿಸಿಸಿಐ ಜೊತೆ ಮಾತುಕತೆ ನಡೆಸಿದ್ದೇನೆ. ಬಿಸಿಸಿಐ ಸಹ ಈ ಬಗ್ಗೆ ಮಾತುಕತೆ ನಡೆಸುತ್ತಿದೆ. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಈಗಾಗಲೇ ಪಂದ್ಯಾವಳಿ ನಡೆಸಲು ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಐಪಿಎಲ್, ಅಂತಾರಾಷ್ಟ್ರೀಯ ಸೇರಿದಂತೆ ಎಲ್ಲಾ ಮಾದರಿಯ ಪಂದ್ಯಗಳು ನಡೆಯುತ್ತವೆ ಎಂದಿದ್ದಾರೆ.

## ಕೊಲೆ ಕೇಸ್: ಸಾಕ್ಷಿಗಳ ವಿಚಾರಣೆ

**ಬೆಂಗಳೂರು:** ನಟ ದರ್ಶನ್ ವಿರುದ್ಧದ ಕೊಲೆ ಪ್ರಕರಣದಲ್ಲಿ ಸಾಕ್ಷಿಗಳ ವಿಚಾರಣೆ (ಕ್ರಾಸ್ ಎಕ್ಸಾಮಿನೇಷನ್) ಬೆಂಗಳೂರಿನ 57ನೇ ಸಿಸಿಎಚ್ ನ್ಯಾಯಾಲಯದಲ್ಲಿ ಡಿ. 17ರಿಂದ ಆರಂಭವಾಗಿದೆ. ಕ್ರಾಸ್ ಎಕ್ಸಾಮಿನೇಷನ್ ವೇಳೆ ಮೊದಲಿಗೆ ವಿಚಾರಣೆ ಎದುರಿಸಿದ್ದು ರೇಣುಕಾಸ್ವಾಮಿಯ ತಾಯಿ ರತ್ನಪ್ರಭಾ. ಡಿ. 17ರಂದು ಮಧ್ಯಾಹ್ನ 4.30ಕ್ಕೆ ಶುರುವಾದ ವಿಚಾರಣೆಯ ವೇಳೆ ರತ್ನಪ್ರಭಾ ಅವರನ್ನು ಇದೇ ಪ್ರಕರಣದ ಆರೋಪಿಯಾಗಿರುವ ಪವಿತ್ರಾ ಗೌಡ ಅವರ ಪರ ವಕೀಲರಾದ ಬಾಲನ್ ಅವರು ವಿಚಾರಣೆಗೊಳಪಡಿಸಿದ್ದಾರೆ.

## ಪ್ರತ್ಯೇಕ ರಾಜ್ಯಕ್ಕೆ ರಾಜು ಕಾಗೆ ಬೇಡಿಕೆ

**ಬೆಳಗಾವಿ:** ಉತ್ತರ ಕರ್ನಾಟಕಕ್ಕೆ ಪ್ರತ್ಯೇಕ ರಾಜ್ಯ ಸ್ಥಾನಮಾನ ನೀಡುವಂತೆ ಒತ್ತಾಯಿಸಿ ಚರ್ಚೆಗೆ ಗ್ರಾಸವಾಗಿದ್ದ ಕಾಗವಾಡ ಶಾಸಕ ರಾಜು ಕಾಗೆ ಚಳಿಗಾಲದ ಅಧಿವೇಶನದಲ್ಲಿ ಮತ್ತೊಮ್ಮೆ ತಮ್ಮ ಬೇಡಿಕೆಯನ್ನು ಪುನರುಚ್ಚರಿಸಿದ್ದಾರೆ.

ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ನಡೆದ ಚರ್ಚೆಯ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಶಾಸಕ ರಾಜು ಕಾಗೆ, ಸರ್ಕಾರಗಳಿಂದ ದೀರ್ಘಕಾಲದ ನಿರ್ಲಕ್ಷ್ಯ ಮತ್ತು ತಾರತಮ್ಯವನ್ನು ಆರೋಪಿಸಿ ಪ್ರತ್ಯೇಕ ರಾಜ್ಯ ಸ್ಥಾನಮಾನಕ್ಕಾಗಿ ಒತ್ತಾಯಿಸುವುದನ್ನು ಮುಂದುವರಿಸುವುದಾಗಿ ತಿಳಿಸಿದ್ದಾರೆ.

ಈ ಪ್ರದೇಶಕ್ಕೆ ಪ್ರತ್ಯೇಕ ರಾಜ್ಯ ಸ್ಥಾನಮಾನವನ್ನು ಪರಿಗಣಿಸುವಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಇಬ್ಬರಿಗೂ ಈಗಾಗಲೇ ಪತ್ರ ಬರೆದಿದ್ದೇನೆ. ಕೆಲವು ಮಾಧ್ಯಮ ಸಂಸ್ಥೆಗಳು ಮತ್ತು ಕನ್ನಡ ಪರ ಸಂಘಟನೆಗಳು ನನ್ನನ್ನು ಟೀಕಿಸಿವೆ. ಆದರೆ ಇನ್ನು ಕೆಲವರು ನನ್ನ ನಿಲುವನ್ನು ಬೆಂಬಲಿಸಿದ್ದಾರೆ ಎಂದು ಪ್ರತಿಪಾದಿಸಿದ್ದಾರೆ.



## ಬೌದ್ಧ ಬಿಕ್ಕುಗಳಿಗೆ ತಿಂಗಳ ವೇತನ

**ಬೆಳಗಾವಿ:** ರಾಜ್ಯ ಬೌದ್ಧ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೌದ್ಧ ಭಿಕ್ಕುಗಳಿಗೆ ಮುಜರಾಯಿ ಇಲಾಖೆ ವತಿಯಿಂದ ತತಕ್ಷಣದಿಂದಲೇ ಅನ್ವಯವಾಗುವಂತೆ ಅಲ್ಪಸಂಖ್ಯಾತ ಇಲಾಖೆ ವತಿಯಿಂದ ತಿಂಗಳ ವೇತನವನ್ನು ನೀಡಲಾಗುವುದು ಎಂದು ಸಚಿವ ರಾಮಲಿಂಗಾರೆಡ್ಡಿ ವಿಧಾನಪರಿಷತ್‌ನಲ್ಲಿ ಪ್ರಕಟಿಸಿದ್ದಾರೆ.



ಪ್ರಶ್ನೋತ್ತರ ವೇಳೆ ಶಿವಕುಮಾರ್.ಕೆ ಅವರು ಕೇಳಿದ ಪ್ರಶ್ನೆಗೆ ವಕ್ಫ್ ಮತ್ತು ಅಲಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಅಹಮದ್ ಅವರ ಪರವಾಗಿ ಉತ್ತರಿಸಿದ ರಾಮಲಿಂಗಾರೆಡ್ಡಿ ಅವರು, ರಾಜ್ಯದ ನಾನಾ ಕಡೆ ಬೌದ್ಧ ಕೇಂದ್ರಗಳಲ್ಲಿ ಬೌದ್ಧ ಭಿಕ್ಕುಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಕೆಲವು ಕಡೆ ಕೆಲವರಿಗೆ ದೈನಂದಿನ ಜೀವನ ನಿರ್ವಹಣೆ ಮಾಡುವುದು ಕಷ್ಟಕರವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಹೀಗಾಗಿ ಇಲಾಖೆ ವತಿಯಿಂದಲೇ ಅವರಿಗೆ ಮಾಸಿಕ ವೇತನ ನೀಡುವುದಾಗಿ ತಿಳಿಸಿದ್ದಾರೆ. ಈ ಬಗ್ಗೆ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ ತತಕ್ಷಣದಿಂದಲೇ ಜಾರಿಯಾಗುವಂತೆ ವೇತನ ನೀಡಲಾಗುವುದು. ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ವತಿಯಿಂದ ನೊಂದಾಯಿತ ಜೈನ ಬಸದೀಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮುಖ್ಯ ಅರ್ಚಕರಿಗೆ 6000, ಸಹಾಯಕ ಅರ್ಚಕರಿಗೆ 5000 ರೂ. ಇದೇ ರೀತಿ ಮಸೀದಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪೇಶ್, ಇಮಾಮ್ ಮತ್ತು ಮುಯಿಜೀನ್ ಅವರುಗಳಿಗೆ ಕ್ರಮವಾಗಿ ಕ್ರಮವಾಗಿ 6 ಸಾವಿರ ಹಾಗೂ 5000 ನೀಡುತ್ತಿದ್ದೇವೆ ಎಂದಿದ್ದಾರೆ.

# ಅವರ್ ಬಿಟ್ ಇವರ್‍ಯಾರ್..?

## ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಸಿಎಂ ಗುಡುಗು | ರಾಜ್ಯಕಾಂಗ್ರೆಸ್‌ಗೆ ಟೀಕಿಸಿದ ಬಿಜೆಪಿ

• ಮಲ್ಲಮ್ಮ ನುಡಿ ವಾರ್ತೆ ಬೆಳಗಾವಿ/ಬೆಂಗಳೂರು

ಕೇಂದ್ರ ಸರ್ಕಾರದ ಮಲತಾಯಧೋರಣೆ ವಿರುದ್ಧ ರಾಜ್ಯಕಾಂಗ್ರೆಸ್ ನಾಯಕರು ದನಿ ಎತ್ತಿದ್ದು, ಇದಕ್ಕೆ ಪ್ರತಿಯಾಗಿ ರಾಜ್ಯ ಬಿಜೆಪಿಯ ಧುರೀಣರೂ ಕಾಂಗ್ರೆಸ್ ಸರ್ಕಾರದ ವಿರುದ್ಧ ಅಧಿವೇಶನದಲ್ಲೇ ಪ್ರತಿಭಟಿಸಿದ್ದಾರೆ. ಕೇಂದ್ರ ಸಕಾಲಕ್ಕೆ ರಾಜ್ಯಕ್ಕೆ ಬರಬೇಕಾದ ಅನುದಾನ ಬಿಡುಗಡೆ ಮಾಡುತ್ತಿಲ್ಲ ಎಂದು ಕಾಂಗ್ರೆಸ್ ದೂರಿದೆ. ಬಿಡುಗಡೆಯಾದಯಾದ ಅನುದಾನ ಅಭಿವೃದ್ಧಿ ಮಾಡದೆ ಕುರ್ಚಿ ಕಿತ್ತಾಟದಲ್ಲಿ ಸರ್ಕಾರ ಮುಳುಗಿದೆ ಎಂದು ಬಿಜೆಪಿ ತಿರುಗೇಟು ನೀಡಿದೆ.

**ಬಡವರ ನೆರವಿಗಿಲ್ಲ:** ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಬಡವರಿಗೆ, ನಿರುದ್ಯೋಗಿಗಳಿಗೆ ಅನುಕೂಲವಾಗುವ ಯಾವ ಕೆಲಸಗಳನ್ನೂ ಮಾಡುವುದಿಲ್ಲ. ದೇಶದಲ್ಲಿ ಹಣದುಬ್ಬರ ಮತ್ತು ಬೆಲೆ ಏರಿಕೆ ಹೆಚ್ಚಾಗಿದೆ. ಅದನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

**ಸದನಕ್ಕೆ ತಪ್ಪು ಮಾಹಿತಿ:** ಬಳಿಕ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಕಳೆದ ಮೂರು ದಿನಗಳಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಸದನದಲ್ಲಿ ಕಾಣುತ್ತಿಲ್ಲ. ಗೃಹಲಕ್ಷ್ಮಿ ಹಣವನ್ನು ಫಲಾನುಭವಿಗಳಿಗೆ ಪಾವತಿ ಮಾಡಿರುವ ವಿಚಾರದಲ್ಲಿ ಸದನದಲ್ಲಿ ತಪ್ಪು ಮಾಹಿತಿ ಕೊಟ್ಟಿದ್ದಾರೆ ಎಂದು ಟೀಕಿಸಿದ್ದಾರೆ.




### ನಿರಂತರ ಬೆದರಿಸುವ ಬಿಜೆಪಿ

ಕಾಂಗ್ರೆಸ್ ನಾಯಕರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿ, ಬೆದರಿಸುವ ಪ್ರಯತ್ನವನ್ನು ಬಿಜೆಪಿ ಸರ್ಕಾರ ನಿರಂತರವಾಗಿ ಮಾಡಿದೆ. ಇಂತಹ ದ್ವೇಷ ರಾಜಕಾರಣದ ವಿರುದ್ಧ ಕಾಂಗ್ರೆಸ್ ಸದನದ ಒಳಗೆ ಮತ್ತು ಹೊರಗೆ ಹೋರಾಟ ನಡೆಸಲಿದೆ. ಕೈಕಟ್ಟಿ ಕೂರುವುದಿಲ್ಲ. ಕಾಂಗ್ರೆಸ್ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಇತಿಹಾಸ ಇದೆ ಎಂದಿದ್ದಾರೆ ಸಿಎಂ.

### ತಾಯಂದಿರ ಪರವಾಗಿ ಧ್ವನಿ

ರಾಜ್ಯದ 1 ಕೋಟಿ 24 ಲಕ್ಷ ತಾಯಂದಿರ ಪರವಾಗಿ ಗೃಹಲಕ್ಷ್ಮಿ ವಿಚಾರದಲ್ಲಿ ಧ್ವನಿ ಎತ್ತಿದ್ದೇವೆ ಎಂದಿದ್ದಾರೆ ಶಾಸಕ ಮಹೇಶ್ ಟೆಂಗಿನಕಾಯಿ. ಮಹಿಳೆಯರಿಗೆ ಕೊಡಿಸಬೇಕಾದ ದುಡ್ಡಿನ ವಿಚಾರದಲ್ಲಿ ಧ್ವನಿ ಎತ್ತಿದ್ದೇವೆ. ಮೊನ್ನೆ ಸಚಿವರು 1.24 ಕೋಟಿ ಎಂದಿದ್ದರು. ಈಗ 1.26 ಕೋಟಿ ಎನ್ನುತ್ತಾರೆ. 2 ಲಕ್ಷ ವ್ಯತ್ಯಾಸ ಬರುತ್ತಿದೆ ಎಂದು ಆಕ್ಷೇಪಿಸಿದ್ದಾರೆ.

ಸುಳ್ಳು ಹೇಳುವ ಉದ್ದೇಶ ಸಚಿವರಿಗಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಗೃಹಲಕ್ಷ್ಮಿ ಹಣವನ್ನು ಚುನಾವಣೆಯ ಹಿಂದಿನ ದಿನ ಫಲಾನುಭವಿಗಳಿಗೆ ಖಾತೆಗೆ ಜಮೆ ಮಾಡುತ್ತಾರೆ. ಅದೇ ರೀತಿ ಅಧಿವೇಶನದ ಕೊನೆಯ ದಿನ ಉತ್ತರ ಕೊಡುತ್ತಾರೆ. ಫಲಾನುಭವಿಗಳಿಗೆ ಗೃಹಲಕ್ಷ್ಮಿಯ ಹಣವೂ ಬರುವುದಿಲ್ಲ. ಸದನದಲ್ಲಿ ನಮಗೆ ಉತ್ತರವೂ ಬರುವುದಿಲ್ಲ

–ಸುರೇಶ್‌ಕುಮಾರ್, ಮಾಜಿ ಸಚಿವ

### ಕ್ಷಮೆಗಾಗಿ ಬಿಜೆಪಿ ಪಟ್ಟು

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಸದನಕ್ಕೆ ಆಗಮಿಸಿ ನೀಡಿರುವ ಉತ್ತರದ ಬಗ್ಗೆ ಸ್ಪಷ್ಟನೆ ನೀಡಬೇಕು ಎಂದು ಪಟ್ಟುಹಿಡಿದು ಬಿಜೆಪಿ ಸದಸ್ಯರು ಆಗ್ರಹಿಸಿದರಲ್ಲದೆ ಧರಣಿ ನಡೆಸಲು ಮುಂದಾದರು. ಆಡಳಿತ ಮತ್ತು ಬಿಜೆಪಿ ಶಾಸಕರ ನಡುವೆ ಮಾತಿನ ಚಕಮಕಿ ನಡೆಯಿತು. ನಿಂಬಾಳ್ಕರ್ ಪರ ಡಿಕೆಶಿ, ಪ್ರಿಯಾಂಕ್ ಖರ್ಗೆ ಸಮರ್ಥಿಸಿದರು. ವಿಯಷ ಎಲ್ಲೆಮಿರಿದ್ದರಿಂದ ಸಚಿವೆ ಕ್ಷಮೆ ಯಾಚಿಸಿದ್ದಾರೆ.

## ಎಸ್ಸೆಸ್ಸೆಲ್ಸಿ ಪರೀಕ್ಷೆಯಿಂದ ಹೊರಗೆ..?

**ಕಲಬುರಗಿ:** ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಈ ಬಾರಿ 40 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಗುಳೆ, ಗೈರು, ಡ್ರಾಪೌಟ್‌ನಿಂದ ಪರೀಕ್ಷೆಯಿಂದ ಹೊರಗುಳಿಯವ ಪರಿಸ್ಥಿತಿ ನಿರ್ಮಾಣವಾಗಿದೆ. 40 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳ ನೋಂದಣಿಯೇ ಇಲ್ಲ. ರಾಜ್ಯದಲ್ಲಿ 2025–26ರಲ್ಲಿದ್ದಂತೆ ಒಟ್ಟು 84,0196 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿಗೆ ನೋಂದಣಿ ಮಾಡಿಕೊಂಡಿದ್ದಾರೆ. ಇದರಲ್ಲಿ 79,97,62 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ. 40,434 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಳ್ಳದಿರುವುದರಿಂದ ಇವರೆಲ್ಲಾ ಪರೀಕ್ಷೆಯಿಂದ ಹೊರಗುಳಿಯವಂತಾಗಿದ್ದು, ಶಿಕ್ಷಕರು, ಮುಖ್ಯ ಶಿಕ್ಷಕರು ಸಹ ಏನೂ ಮಾಡದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.




## 2997 ಬೋಧಕ ಹುದ್ದೆಗಳು ಖಾಲಿ

**ಬೆಳಗಾವಿ:** ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ 32 ಸಾರ್ವಜನಿಕ ವಿಶ್ವವಿದ್ಯಾಲಯಗಳು ಕಾರ್ಯ ನಿರ್ವಹಿಸುತ್ತಿದ್ದು, 2997 ಬೋಧಕ ಹಾಗೂ 6295 ಬೋಧ–ಕೇತರ ಹುದ್ದೆಗಳು ಖಾಲಿ ಇವೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಪಿ ಸುಧಾಕರ್ ತಿಳಿಸಿದ್ದಾರೆ.



ಈ ಕುರಿತು ಮಾಹಿತಿ ಹಂಚಿಕೊಂಡಿರುವ ಸಿ.ಟಿ.ರವಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ವಿಷಯವನ್ನು ಒಳಗೊಂಡಂತೆ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡುವಂತೆ ಸರ್ಕಾರದಿಂದ ಡಿಸಿಎಂ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿ ರಚಿಸಲಾಗಿದೆ ಎಂದಿದ್ದಾರೆ.

## ಸದನದಲ್ಲಿ ಉ.ಕ ಸಮಸ್ಯೆಗೆ ಶಾಸಕ ದನಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ನಮ್ಮ ಭಾಗದಲ್ಲಿ ಆಸ್ಪತ್ರೆಗಳಿವೆ. ವೈದ್ಯರಿಲ್ಲ, ಶಾಲೆಗಳಲ್ಲಿ ಶಿಕ್ಷಕರಿಲ್ಲ. ಸರ್ಕಾರ ಪ್ರತಿ ವರ್ಷ ಬೆಳಗಾವಿಯಲ್ಲಿ ನಡೆಸುವ ಚಳಿಗಾಲದ ಅಧಿವೇಶನದಲ್ಲಿ ಕೇವಲ ಚರ್ಚೆ ನಡೆಯುತ್ತವೆ ಹೊರತು ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ಜೆಡಿಎಸ್ ಶಾಸಕ ಶರಣಗೌಡ ಕಂದಕೂರ ತಿಳಿಸಿದ್ದಾರೆ.

ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಮೇಲಿನ ಚರ್ಚೆ ವೇಳೆ ಮಾತನಾಡಿದ ಶಾಸಕ, ಈ ಭಾಗದ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ, ಉ.ಕ ಭಾಗಕ್ಕಾಗಿಯೇ ಪ್ರತ್ಯೇಕ ಬಜೆಟ್ ಮಂಡಿಸಿ. ನಮಗೆ ಒಂದು ರೂ.ಅನುದಾನ ಕೊಡಬೇಡಿ ಆದರೆ ಬಜೆಟ್ ಮೂಲಕ ಆರೋಗ್ಯ, ಶಿಕ್ಷಣ, ಮೂಲಸೌಕರ್ಯ ಹಾಗೂ ನೀರಾವರಿಗೆ ಆದ್ಯತೆ ಕೊಡಿ ಎಂಬ ಬೇಡಿಕೆ ಇಟ್ಟಿದ್ದಾರೆ. ಚರ್ಚೆ ಆರಂಭದಿಂದಲೂ ಕಲ್ಯಾಣ ಮತ್ತು ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟ ಶಾಸಕ ಕಂದಕೂರ, ಮುಖ್ಯಮಂತ್ರಿಗಳೇ ದಯವಿಟ್ಟು ನಮ್ಮ ಜನರ ಸಮಸ್ಯೆ ಆಲಿಸಿ, ಇಲ್ಲದಿದ್ದರೆ ಇಲ್ಲಿ ನಡೆಯುವ ಎಲ್ಲ ಚರ್ಚೆಗಳು ವ್ಯರ್ಥವಾಗುತ್ತವೆ ಎಂದಿದ್ದಾರೆ.



### ಒದೂ ಈಡೇರದ ಸಿಎಂ ಭರವಸೆ

2023ರ ಈ ಸದನದಲ್ಲಿ ಸಿಎಂ ನೀಡಿದ ಒಂದೂ ಭರವಸೆ ಈಡೇರಿಲ್ಲ. ಈ ಭಾಗದ ಪ್ರಾದೇಶಿಕ ಅಸಮತೋಲನೆ ನಿರ್ವಹಣೆಗೆ ಡಾ.ನಂಜುಡಪ್ಪವರದಿ ಅನುಷ್ಠಾನ ಹಳ್ಳಹಿಡಿದಿದೆ. ಬೆಳಗಾವಿಯಲ್ಲಿ 500 ಎಕರೆ ಪ್ರದೇಶದಲ್ಲಿ ಕೈಗಾರಿಕೆ ಕ್ಲಸ್ಟರ್ ಸ್ಥಾಪನೆಯಾಗಿಲ್ಲ. ರಾಯಚೂರಿನಲ್ಲಿ ಹತ್ತಿ ಬೆಳೆ ಆಧಾರಿತ ಕೈಗಾರಿಕೆಗೆ ಒತ್ತು ನೀಡುವು ಭರವಸೆ ಇನ್ನೂ ಭರವಸೆಯಾಗಿಯೇ ಉಳಿದಿದೆ. ಉ.ಕದ ಸಮಗ್ರ ಅಭಿವೃದ್ಧಿಗೆ ಪ್ರವಾಸೋದ್ಯಮಕ್ಕೆ ಒತ್ತು ಕೊಡುವುದಾಗಿ ಹೇಳಿದ್ದರು ಅದೂ ಆಗಲಿಲ್ಲ. ಇನ್ನೂ ಉಕ ಭಾಗದ ಮೂಲಸೌಕರ್ಯಕ್ಕೆ 4 ಸಾವಿರ ಕೋಟಿ ಮತ್ತು ರಸ್ತೆಗಳ ಅಭಿವೃದ್ಧಿಗೆ 2 ಸಾವಿರ ಕೋಟಿ ಕೊಡುತ್ತೇವೆ ಎಂದಿದ್ದರು. ಒಂದು ನಯಾಪೈಸೆ ಕೊಟ್ಟಿಲ್ಲ. ಇವೆಲ್ಲವಕ್ಕೂ ಸಿಎಂ ಉತ್ತರ ಕೊಡಬೇಕು ಎಂದು ಶಾಸಕ ಕಂದಕೂರ ಆಗ್ರಹಿಸಿದ್ದಾರೆ.

ಈ ಭಾಗದ ಯುವಕರಿಗೆ ನೌಕರಿ ಇಲ್ಲ..! ರಾಜ್ಯದಲ್ಲಿ 2.20 ಲಕ್ಷ ಹುದ್ದೆಗಳು ಖಾಲಿ ಇದ್ದು ಸರ್ಕಾರ ಕೇವಲ 24 ಸಾವಿರ ಹುದ್ದೆ ಭರ್ತಿಗೆ ಮುಂದಾಗಿದೆ. ಈ ಭಾಗದ ಯುವಕರಿಗೆ ನೌಕರಿ ಸಿಗುತ್ತಿಲ್ಲ. ಬಚಾವತ್ ಆಯೋಗದ ಪ್ರಕಾರ ನಮಗೆ ಕೃಷ್ಣ ಮೇಲ್ದಂಡೆ ಯೋಜನೆಯಡಿ ನೀರು ಬಳಕೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕಳೆದ ವರ್ಷ ತುಂಗಭದ್ರಾ ಡ್ಯಾಂನ ಗೇಟ್ ಒಡೆದು ಸಾವಿರಾರು ಎಕರೆ ಬೆಳೆಹಾಳಾಗಿದೆ. ಆ ರೈತರಿಗೆ ಇದುವರೆಗೂ ಪರಿಹಾರ ಸಿಕ್ಕಿಲ್ಲ

–ಶರಣಗೌಡ ಕಂದಕೂರ, ಶಾಸಕ

## ನಿರಂತರ ಹೋರಾಟ

• ಮಲ್ಲಮ್ಮ ನುಡಿ ವಾರ್ತೆ ಬೆಳಗಾವಿ

ಕೇಂದ್ರ ಸರ್ಕಾರದ ಜನವಿರೋಧಿ, ಸರ್ವಾಧಿಕಾರಿ ಧೋರಣೆಯ ವಿರುದ್ಧ ಕಾಂಗ್ರೆಸ್ ಪಕ್ಷದ ಹೋರಾಟ ನಿರಂತರವಾಗಿ ಮುಂದುವರೆಯಲಿದೆ ಎಂದು ರಾಜ್ಯದ ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವ ಈಶ್ವರ್ ಖಂಡ್ರೆ ಹೇಳಿದ್ದಾರೆ.

ಬೆಳಗಾವಿಯಲ್ಲಿ ನಡೆದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, 'ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವರ ವಿರುದ್ಧ ಕೇಂದ್ರ ಸರ್ಕಾರ ರಾಜಕೀಯ ದ್ವೇಷದಿಂದ ಸುಳ್ಳು ಪ್ರಕರಣಗಳನ್ನು ದಾಖಲಿಸಿತ್ತು. ಆದರೆ ಈಗ ನ್ಯಾಯಾಲಯದಲ್ಲೇ ಈ ಪ್ರಕರಣಗಳು ಸುಳ್ಳು ಎಂಬುದು ಸಾಬೀತಾಗಿದೆ. ಸತ್ಯದ ಮುಂದೆ ಸುಳ್ಳು ನಿಲ್ಲುವುದಿಲ್ಲ ಎಂಬುದು ಮತ್ತೆ ಮತ್ತೊಮ್ಮೆ ಸಾಬೀತಾಗಿದೆ' ಎಂದು ತಿಳಿಸಿದ್ದಾರೆ. ಕೇಂದ್ರ ಸರ್ಕಾರ ವೋಟ್ ಚೋರಿಯ ಮೂಲಕ ಪ್ರಜಾಪ್ರಭುತ್ವಕ್ಕೆ ಗಂಭೀರ ಧಕ್ಕೆ ತಂದಿದೆ. ಸಂವಿಧಾನಾತ್ಮಕ ಸಂಸ್ಥೆಗಳನ್ನೇ ದುರ್ಬಳಕೆ ಮಾಡಿಕೊಂಡು ಜನಾದೇಶವನ್ನು ಮರೆಮಾಡುವ ಕೆಲಸ ನಡೆಯುತ್ತಿದೆ ಎಂದು ಆರೋಪಿಸಿದ್ದಾರೆ.

## ಮಟ್ಕಾ, ಇಸ್ಪೀಟ್ ದಂಧೆಗೆ ತಡೆ ಎಂದು..?

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಯಾವುದೇ ಭಯವಿಲ್ಲದೆ ಮಟ್ಕಾ ಮತ್ತು ಇಸ್ಪೀಟ್ ಜೂಜಾಟ ದಂಧೆ ರಾಜಾರೋಷವಾಗಿ ನಡೆಯುತ್ತಿದೆ. ಆದರೂ.. ಸಂಬಂಧಪಟ್ಟ ಪಟ್ಟಧಿಕಾರಿಗಳು ಮೌನವಾಗಿದ್ದಾರೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ. ಇಸ್ಪೀಟ್ ಜೂಜಾಟ, ಮಟ್ಕಾದಿಂದ ಸ್ಥಳೀಯರು ನೆಮ್ಮದಿ ಕಳೆದುಕೊಳ್ಳುವಂತಾಗಿದೆ. ಓಪನ್ ಮತ್ತು ಕ್ಲೋಸ್ ನಂಬರ್ ಮೂಲಕ ಅದೃಷ್ಟ ಪರೀಕ್ಷೆ ಮಾಡಿಕೊಳ್ಳುವ ಮಟ್ಕಾ ದಂಧೆಯ ಹೆಟ್ರೈಕ್ ಬುಕ್ಕಿಗಳು ಕಲ್ಯಾಣಿ ಡೇ ಮತ್ತು ಕಲ್ಯಾಣಿ ನೈಟ್ ಮೂಲಕ ಹಗಲು–ರಾತ್ರಿ, ಮಿಲನ್ ಡೇ ಮತ್ತು ಮುಸ್ಸಂಜೆಯ ಸಮಯದಲ್ಲಿ ಆಡುವ ಆಟ. ಹೀಗೆ ಮಟ್ಕಾ ಬುಕ್ಕಿ ಮಾಡಿಕೊಳ್ಳಲಾಗುತ್ತಿದ್ದು, ಜನರು ದುಡಿದ ಹಣವನ್ನೆಲ್ಲ ಇದಕ್ಕೆ ಸುರಿದು ಈ ಚಟದಿಂದ ಹೊರಬರಲಾಗದೆ ಸಾಲ ಮಾಡಿಕೊಂಡು ತೀವ್ರ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. 10ರೂ. ಕೊಟ್ಟು ಯಾವುದಾರೂ ಎರಡು ನಂಬರ್ ಆಯ್ಕೆ ಮಾಡುತ್ತಾರೆ. ಅದೇ ನಂಬರ್ ಅದೃಷ್ಟ ಸಂಖ್ಯೆಯಾಗಿ ಬಂದರೆ 900 ರೂ. ಬರುತ್ತದೆ ಎನ್ನುವ ಆಸೆ ಜನರದ್ದಾಗಿದೆ. ಇದರಲ್ಲಿ ವಿದ್ಯಾರ್ಥಿಗಳು, ಯುವಕರು, ಬಡ ಕುಟುಂಬ ಸೇರಿಕೊಂಡು ಜೀವನ ಹಾಳು ಮಾಡಿಕೊಳ್ಳುತ್ತಿರುವುದು ದುರಂತ ಎಂಬುದು ಚಿಂತಕರವಾದ. ಮಟ್ಕಾ ಬುಕ್ಕಿಗೆ ಪೊಲೀಸ್ ಒನ್ ಟೈಮ್ ಹಿಡಿದರೆ ಸಣ್ಣ ದಾಖಲೆ ಮಾಡಿಕೊಂಡು ಒಂದು ದಿನದಲ್ಲಿ ಬೆಲ್ ಪಡೆದುಕೊಳ್ಳುತ್ತಾರೆ. ಇವರಿಗೆ ಭಯ ಇಲ್ಲದಂತಾಗಿದೆ. ಈಗಲಾದರೂ ಇದರ ಬಗ್ಗೆ ಸಂಬಂಧಪಟ್ಟ ಮೇಲಧಿಕಾರಿಗಳು ಬುಕ್ಕಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತಾರಾ? ಎಂಬುದು ಜನತೆಯ ಪ್ರಶ್ನೆಯಾಗಿದೆ.



**ಪ್ರತಿಸಲವೂ ಸಚಿವೆ ಲಕ್ಷ್ಮಿ ಹೆಬ್ಬಾರ್ ಕರ್ ಅಧಿವೇಶನಕ್ಕೆ ಬರಲ್ಲ. ಅವರೇನು ಚಂದ್ರ ಲೋಕದಲ್ಲಿದ್ದಾರೆಯೆ?: ಅರ್. ಅಶೋಕ್**



ಬಸವಕಲ್ಯಾಣ :– ಇಲ್ಲಿನ ರಥ ಮೈದಾನದ ಸಭಾಭವನದಲ್ಲಿ ಜಮಾತೆ ಇಸ್ಲಾಂ ಹಿಂದ್ ತಾಲೂಕು ಸಂಘಟನೆಯಿಂದ ಅಯೋಜಿಸಿದ 10 ನೇಯ ವಾರ್ಷಿಕ ಸಾರ್ವಜನಿಕ ಕುರ್ ಆನ್ ಪ್ರವಚನ ದಲ್ಲಿ ಪಾಲ್ಗೊಂಡಿರುವ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಸೋಮಶೇಖರ್ ಬಿರಾದಾರ ಚಿದ್ರಿ. ಪದವಿ ತರ ಮುಖ್ಯ ಗುರುಗಳ ಸಂಘದ ಅದ್ಯಕ್ಷರಾದ ಶಿವರಾಜ ಕಪ್ಲಾ ಪೂರೆ ಅವರಿಗೆ ಮಂಗಳೂರಿನ ಖ್ಯಾತ ಪ್ರವಚನಕಾರರಾದ ಮೊಹಮ್ಮದ್ ಕುಂಣಟಿಜಜಜಿಟಿಜಜ ಅವರು ಕುರ್ ಆನ್ ಧರ್ಮ ಗ್ರಂಥ ನೀಡಿ ಸನ್ಮಾನಿಸಲಾಯಿತು. ತಾಲೂಕ ಪ್ರಾ. ಶಾ. ಶಿ. ಸ. ಅಧ್ಯಕ್ಷರಾದ್ ಸಂತೋಷ್ ಕುಮಾರ್ ಅಕ್ಕಣ್ಣ. ಶಿಕ್ಷಕ ಖೈರೂಲ್ ಮುಬೀನ್ ಕಾಣಬಹುದು. (ಮಲ್ಲಮ್ಮ ನುಡಿ ಚಿತ್ರ).

# ವಿದ್ಯಾರ್ಥಿಗಳು ಗುರಿ ತಕ್ಕಂತೆ ಶ್ರಮ ಪಡಬೇಕು– ಜಿ.ಪಂ.ಸಿಇಒ.



**ಮಲ್ಲಮ್ಮ ನುಡಿ ವಾರ್ತೆ**

**ಬಸವಕಲ್ಯಾಣ:** ವಿದ್ಯಾರ್ಥಿಗಳು ಜೀವನದಲ್ಲಿ ಒಂದು ಗುರಿ ಇಟ್ಟು–ಕೊಂಡು ಅದಕ್ಕೆ ತಕ್ಕಂತೆ ಪರಿಶ್ರಮ ಪಟ್ಟಾಗ ಮಾತ್ರ ನಿಮ್ಮ ಗುರಿ ಮುಟ್ಟಲು ಸಾಧ್ಯ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಡಾ.ಗಿರೀಶ ಬಿ ಬದೋಲೆ ಹೇಳಿದರು.

ತಾಲ್ಲೂಕಿನ ನಾರಾಯಣಪೂರ ಗ್ರಾಮದ ಸಮೀಪ ಇರುವ ಜವಹಾರ ನವೋದಯ ವಿದ್ಯಾಲಯದಲ್ಲಿ ನರೇಗಾ ಯೋಜನೆಯಡಿ ನಿರ್ಮಾಣಗೊಂಡ ವಿವಿಧ ಕಾಮಗಾರಿಗಳನ್ನು ಉದ್ಘಾಟಿಸಿ ಅವರು ಮಾತನಾಡಿ ಇಲ್ಲಿನ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಬೇಡಿಕೆಯಂತೆ ನಮ್ಮ ತಾಪಂ. ಮತ್ತು ನರೇಗಾ ಸಿಬ್ಬಂದಿಗಳು ಬಹಳ ಉತ್ತಮವಾಗಿ ಕೆಲಸ ಮಾಡಿಕೊಟ್ಟಿದ್ದಾರೆ ಎಂದು ಸಂತೋಷವ್ಯಕ್ತಿಪಡಿಸುತ್ತ ಇನ್ನೂಕೆಲ ಬೇಡಿಕೆಗಳು ವಿದ್ಯಾರ್ಥಿಗಳು ಇಟ್ಟಿದ್ದಾರೆ ಅವು ಕೂಡ ಶೀಘ್ರದಲ್ಲಿ ಕೆಕೆಆರ್‌ಡಿಬಿ ಯಿಂದ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು.

ಬಹಳ ವಿದ್ಯಾರ್ಥಿಗಳಿಗೆ ಇಂಥಹ ಶಾಲೆಯಲ್ಲಿ ಕಲಿಯುವ ಅವಕಾಶ ಸಿಗುವುದಿಲ್ಲ, ಇಲ್ಲಿ ಪ್ರವೇಶ ಪಡೆದು ವಿದ್ಯಾರ್ಥಿಗಳು ಪುಣ್ಯ ವಂತರು. ಹೀಗಾಗಿ ನಿಮ್ಮ ಭವಿಷ್ಯ ನಿರ್ಮಿಸುವ ಪ್ರಮುಖ ಘಟ್ಟವಾದ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ ಕೆಎಎಸ್, ಐಎಎಸ್, ಐಪಿಎಸ್ ಅಂಥಹ ಪರೀಕ್ಷೆಗಳು ಬರೆದು ಉನ್ನತ ಹುದ್ದೆಗೆ ಆಯ್ಕೆ ಆಗುವ ಮೂಲಕ ಕಲಿತ ಶಾಲೆಗೆ ಮತ್ತು ಗ್ರಾಮಕ್ಕೆ ಒಳ್ಳೆ ಹೆಸರು ತಂದು ಕೊಡಬೇಕು ಎಂದರು. ಶಿಕ್ಷಕರು ವಿದ್ಯಾರ್ಥಿಗಳನ್ನು ಕೇವಲ ಪಾಠಕ್ಕೆ ಮಾತ್ರ ಸೀಮಿತ ಮಾಡದೆ, ಅವರಲ್ಲಿನ ಪ್ರತಿಭೆಯನ್ನು ಗುರುತಿ ಅದಕ್ಕೆ ತಕ್ಕಂತೆ ಪ್ರೋತ್ಸಾಹ ನೀಡಬೇಕು ಅದಕ್ಕೆ ಬೇಕಾದ ಸಹಕಾರ ನೀಡಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ತಾ.ಪಂ.ಕಾ.ನಿ.ಅ.ರಮೇಶ ಸುಲ್ಪಿ. ತಾ.ಪಂ.ಸ.ನಿ.(ಉ.ಖಾ) ಮಹ್ಮದ್ ಸಲೀಂ. ಗ್ರಾ.ಪಂ ಅಧ್ಯಕ್ಷೆ ವೇಂಕಮ್ಮಾ ಇಸ್ಲಾಂಪೂರೆ, ಉಪಾಧ್ಯಕ್ಷರಾದ ಚೇತನ ಕಾಡೆ, ನವೋದಯ ಶಾಲೆಯ ಪ್ರಾಚಾರ್ಯ ಶ್ರೀಲತಾ, ಪಿಡಿಒ ಕವೀತಾ ಶೃಂಗೇರಿ, ಗ್ರಾ.ಪಂ.ಕಾ.ದ. ಅಶೋಕ ಉಚ್ಚೇಕರ್, ಟಿಸಿ ಶಿವರಾಜ ಪಾಟೀಲ್, ಟಿಐಇಸಿ ಸಂಯೋಜಕ ವೀರಾರೆಡ್ಡಿ, ಟಿ.ಎ.ರವಿ ಕೋರಳೆ, ಮಾಣಿಕ ಧುಮನಸೂರೆ, ಬಿಸಿ ಸಂತೋಷ, ಡಿಇಒ ರಾಚಯ್ಯಾ ಸ್ವಾಮಿ, ಸೇರಿದಂತೆ ಶಾಲಾ ಸಿಬ್ಬಂದಿ, ವಿದ್ಯಾರ್ಥಿಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ಭವ್ಯ ಸ್ವಾಗತ :**

ತಾಲ್ಲೂಕಿನ ನಾರಾಯಣಪೂರ ಗ್ರಾಮದ ಸಮೀಪ ಇರುವ ಜವಹಾರ ನವೋದಯ ವಿದ್ಯಾಲಯಕ್ಕೆ ಜಿ.ಪಂ. ಮು.ಕಾ.ನಿ.ಅ.ಡಾ.ಗಿರೀಶ ಬಧೋಲೆ ಅವರು ಭೇಟಿ ನೀಡಿದಾಗ ಸ್ಕೌಟ್ಸ್‌ಗೈಡ್ಸ್ ವಿದ್ಯಾರ್ಥಿಗಳಿಂದ ಪ್ರವೇಶ ದ್ವಾರ ದಿಂದ ಕಾರ್ಯಕ್ರಮದ ವೇದಿಕೆ ವರೆಗೆ ಭವ್ಯವಾಗಿ ಸ್ವಾಗತ ಮಾಡಿಕೊಳ್ಳಲಾಯಿತು.

# ಪ್ರತಿಯೊಬ್ಬ ಮಗುವಿಗೂ ಕೆಟ್ಟ ಸ್ಪರ್ಶ, ಉತ್ತಮ ಸ್ಪರ್ಶಗಳ ಬಗ್ಗೆ ಅರಿವು ಮುಖ್ಯ : ರಾಠೋಡ್



**ಮಲ್ಲಮ್ಮ ನುಡಿ ವಾರ್ತೆಕುಕನೂರು :** ತಾಲೂಕಿನ ಮಂಗಳೂರು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜನಲ್ಲಿ ಸೋಮವಾರ (ಡಿ.15) ವಿಸ್ತಾರ ಸಂಸ್ಥೆಯ ಸಂಯೋಜಕರಿಂದ ಪೋಕ್ಸೋ ಕಾಯ್ದೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು.ವಿಸ್ತಾರ ಸಂಸ್ಥೆಯ ಸಂಯೋಜಕಿ ಜಯಶ್ರೀ ಮಾತನಾಡಿ, '18 ವರ್ಷದೊಳಗಿನ ಪ್ರತಿಯೊಬ್ಬ ಮಗುವಿಗೂ ಈ ಕಾಯಿದೆ ಅನ್ವಯಿಸುತ್ತದೆ, ಹೆಣ್ಣುಮಕ್ಕಳಿಗೆ ಕೆಟ್ಟ ಸ್ಪರ್ಶ, ಉತ್ತಮ ಸ್ಪರ್ಶ ಇವುಗಳ ಬಗ್ಗೆ ಜಾಗ್ರತೆ ಇರಬೇಕು ಎಂದು ಮಕ್ಕಳಿಗೆ ತಿಳಿ ಹೇಳಿದರು.ಸಂಯೋಜಕ ಹಾಗೂ ತರಬೇತುದಾರ ಅಲಿಸಾಬ ಮಾತನಾಡಿ, 'ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ತಿಂಡಿ–ನಿಸು ಹಾಗೂ ಬಹುಮಾನಗಳ ಆಮಿಷ ತೋರಿಸಿ ಕೆಲವರು ಸಲುಗೆಯಿಂದ ನಡೆದುಕೊಳ್ಳುತ್ತಾರೆ. ಮಕ್ಕಳಿಗೆ ಇದರ ಬಗ್ಗೆ ಅರಿವು ಇರುವುದಿಲ್ಲ. ಹಾಗಾಗಿ ಮಕ್ಕಳು ಯಾರಾದರೂ ತಿನಿಸು ಕೊಟ್ಟರೆ ತಿನ್ನಬಾರದು. ಮಕ್ಕಳ ಅನುಮತಿ ಇಲ್ಲದೇ ದೇಹದ ಯಾವುದೇ ಭಾಗವನ್ನು ಸಹ ಮುಟ್ಟುವಂತಿಲ್ಲ. ಒಂದು ವೇಳೆ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯಗಳು ನಡೆದ ಪಕ್ಷದಲ್ಲಿ ಜಿಲ್ಲಾ ಮಕ್ಕಳ ರಕ್ಷ ಣಾ ಘಟಕ್ಕೆ ತಿಳಿಸಿದರೆ, ಅಂತವರ ವಿರುದ್ಧ ಕ್ರಮಕೈಗೊಳ್ಳುತ್ತಾರೆ ಎಂದು ತಿಳಿಸಿದರು.ಸಂಯೋಜಕರಿಂದ ಮಕ್ಕಳ ಜೊತೆಗೆ ಸಂವಾದಈ ವೇಳೆಯಲ್ಲಿ ಕಾಲೇಜು ಮಕ್ಕಳ ಹಾಗೂ ಉಪನ್ಯಾಸಕರ ಜೊತೆ ಬಹಳಷ್ಟು ಪ್ರಶ್ನೋತ್ತರಗಳು ನಡೆದು, ಸಂವಾದ ಮಾಡಲಾಯಿತು.ಈ ಸಂದರ್ಭದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರು, ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ವಿಸ್ತಾರ ಸಂಸ್ಥೆಯ ಕನಸು ಕಿಶೋರಿ ಸಂಘಟನೆಯ ಮಂಜುಳಾ, ಅಶ್ವಿನಿ ಅವರು ಭಾಗವಹಿಸಿದ್ದರು.

# ಸನ ರೈಸ್ ಮಹಿಳಾ ಪದವಿ ಮಹಾವಿದ್ಯಾಲಯ ದಲ್ಲಿ ಪದವಿ ಪರೀಕ್ಷೆಗಳು ಪ್ರಾರಂಭ



**ಮಲ್ಮನ ನುಡಿ ವಾರ್ತೆ ಮಸ್ಕಿ :** ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವ ವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪದವಿ ಕಾಲೇಜುಗಳ 1.3& 5 ಸೇಮಿಸ್ಟರ್ ಗಳ ಪರೀಕ್ಷೆಗಳು ಪ್ರಾರಂಭ ಗೊಂಡಿವೆ.

ಉಪನ್ಯಾಸಕರಾದ ಶ್ರೀಕಾಂತ ಎಚ್ ಆಂತರಿಕ ಮೇಲ್ವಿಚಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ .ಬಾಹ್ಯ ಮೇಲ್ವಿಚಾರಕರು,ಮೂರ್ತುಂಜಯ್ಯಹುಲ್ಲೂರು,ಸರಸ್ವತಿ,ಅಶ್ವಿನಿ,ಪ್ರತಿಭಾ.ಗಂಗಮ್ಮ,ಸರಸ್ವತಿ ರವರು ಕಾರ್ಯನಿರ್ವಹಿಸುತ್ತಿದ್ದಾರೆ. ಎಂದು ಕಾಲೇಜಿನ ಪ್ರಾಚಾರ್ಯರಾದ ಸಿದ್ದಪ್ಪ ಉದ್ಭಾಳ್ ರವರು ತಿಳಿಸಿದರು.

# ಮೇಥಿ ಮೇಳಕುಂದಾದಲ್ಲಿ ಮಕ್ಕಳ ಗ್ರಾಮ ಸಭೆ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತನ್ನಿ



**ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:** ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವ ಪ್ರಯತ್ನ ಮಾಡಬೇಕು ಎಂದು ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಬನ್ನಾಳೆ ಹೇಳಿದರು.ತಾಲೂಕಿನ ಮೇಥಿ ಮೇಳಕುಂದಾ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಿಲ್ಲಾ ಮತ್ತು ತಾಲೂಕು ಪಂಚಾಯತಿ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಮಕ್ಕಳ ಗ್ರಾಮ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.ಯಾವೊಂದು ಮಗು ಕೂಡ ಶಿಕ್ಷಣದಿಂದ ವಂಚಿತರಾಗಬಾರದು. ಹೋಟೆಲ್, ಬೇಕರಿ, ಪಾನಿಪುರಿ ಅಂಗಡಿ ಸೇರಿ ಮುಂತಾದ ಕಡೆಗಳಲ್ಲಿ ಬಾಲ ಕಾರ್ಮಿಕರು ಕೆಲಸ ಮಾಡುತ್ತಿರುವುದು ಕಂಡು ಬಂದರೆ ಕೂಡಲೇ ಪತ್ತೆ ಹಚ್ಚಿ ಮರಳಿ ಶಾಲೆಗೆ ಸೇರಿಸಿ ಶಿಕ್ಷಣ ಕೊಡಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು. ಮುಖ್ಯಗುರು ಇಸ್ಮಾಯಿಲ್ ಖುರೋಡಿ, ವೆಂಕ್ಯುಬ್ ಮಾತನಾಡಿದರು. ಕುಮಾರಿ ಗೀತಾ ಮಧುಕರ ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ ಗ್ರಾಮ ಪಂಚಾಯತಿ ಅರಿವು ಕೇಂದ್ರದಲ್ಲಿ ಉಚಿತ ಒಂದು ತಿಂಗಳು ಕಂಪ್ಯೂಟರ್ ತರಬೇತಿ ಪುರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಪ್ರಮುಖರಾದ ಧನರಾಜ ಕೆ, ಶಿವಾಜಿ ರೆಡ್ಡಿ ಸೇರಿದಂತೆ ಶಿಕ್ಷಕರು, ಪಾಲಕರು, ಮಕ್ಕಳು ಹಾಜರಿದ್ದರು.

# ನಾಗೋರ ಗ್ರಾಮದ ಶ್ರೀ ಭಾಗ್ಯವಂತಿ ಮತ್ತು ಭವಾನಿ ದೇವಿಯ ಜಾತ್ರಾ ಮಹೋತ್ಸವ





ಜಾತ್ರೆಯು **ಮಲ್ಲಮ್ಮ ನುಡಿ ವಾರ್ತೆ ಬೀದರ:** ತಾಲೂಕಿನ ನಾಗೋರ ಗ್ರಾಮದ ಶ್ರೀ ಭಾಗ್ಯವಂತಿ ಮತ್ತು ಭವಾನಿ ದೇವಿಯ 17ನೇ ಜಾತೆ–ಯು ಡಿಸಂಬರ 19 ಹಾಗೂ 20 ರಂದು ಎರಡು ದಿನ ದೇವಿಯ ಆರಾಧಕರಾದ ಸಂತ ಮೀರಾಬಾಯಿ ಅವರ ನೇತೃತ್ವದಲ್ಲಿ ನಡೆಯಲಿದೆ. ಅಂದು ಮುಂಜಾನೆ ಹವನ ಪೂಜೆ ಹಾಗೂ ನೈವೆದ್ಯ ಪೂಜೆ ಹಾಗೂ ರಾತ್ರಿ 8 ಗಂಟೆಗೆ ಶ್ರೀ ಕ್ಷೇತ್ರ ಸಾಧುಘಾಟ ಶ್ರೀ ಹ.ಭ.ಪ ಪಾಂಡುರಂಗ ಮಹಾರಾಜ ಅವರಿಂದ ಕೀರ್ತನೆ ಜರುಗಲಿದೆ. ಡಿಸೆಂಬರ 20ರಂದು ಶ್ರೀ ಭಾಗ್ಯವಂತಿ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ನಡೆಯಲಿದೆ. ಅಂದು ದೇವಸ್ಥಾನ ನಿರ್ಮಾಣ ಮಾಡಿರುವ ಸುರೇಶ ಸಿಂಧೆ ಅವರಿಂದ ದೇವಿಗೆ ಅಭಿಷೇಕ ನಡೆಯಲಿದೆ. ಜತೆಗೆ ಡಿಸಂಬರ್ 20ರಂದು ಮುಂಜಾನೆ 8ಕ್ಕೆ ಭಾಗ್ಯವಂತಿ ದೇವಿಯ ಪಲ್ಲಕ್ಕಿ ಮಹೋತ್ಸವ ಜರುಗಲಿದೆ. ಪಲ್ಲಕ್ಕಿಯು ಹಳೆ ನಾಗೋರಾ ಗ್ರಾಮಕ್ಕೆ ತೆರಳಿ ಮತ್ತೆ ಮಂದಿರಕ್ಕೆ ಮರಳುವುದು. ನಂತರ ಮಹಾಪ್ರಸಾದ ವಿತರಣೆ ನಡೆಯಲಿದೆ. ಅಂದು ರಾತ್ರಿ 9ಕ್ಕೆ ಮಂದಿರದಲ್ಲಿ ಭಜನೆ ಕೀರ್ತನೆ ಪ್ರವಚನ ಇನ್ನಿತರ ಕಾರ್ಯಕ್ರಮಗಳು ನಡೆಯುವವು. ಆಂಧ್ರ ಮಹಾರಾಷ್ಟ್ರ ನೆರೆ ಹೊರೆಯ ದೇವಿಯ ಭಕ್ತರು ಮಂದಿರದಕ್ಕೆ ಆಗಮಿಸಿ ಅಮ್ಮನವರ ದರುಶನ ಪಡೆದುಕೊಂಡು ಧನ್ಯರಾಗುವರು. ನಾಗೋರಾದ ಎಲ್ಲ ಜನರು ಮತ್ತು ಸುತ್ತ ಮುತ್ತಲಿನ ಗ್ರಾಮಸ್ಥರು ಹಿರಿಯರು, ಸದ್ಭಕ್ತರು ಹಾಗೂ ಗಣ್ಯಯ ವ್ಯಕ್ತಿಗಳು ಈ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ದೇವರ ದರುಶನ ಪಡೆದುಕೊಂಡು ಪ್ರಸಾದ ಸೇವನೆ ಮಾಡಿ ಧನ್ಯರಾಗಬೇಕು ಎಂದು ನಾಗೋರಾದ ಮುಖಂಡರಾದ ರಾಜರೆಡ್ಡಿ ಹಾಗೂ ಸಮಸ್ತ ಗ್ರಾಮ ಪಂಚಾಯತ ಸದಸ್ಯರು ಹಾಗೂ ಮಂದಿರದ ಪೂಜಾರಿ ಬಾಬುರಾವ ಸುನಿಲ ಅನಿಲ ಅವರುಗಳು ಮನವಿ ಮಾಡಿಕೊಂಡಿದ್ದಾರೆ.

# ಪೌರ ಕಾರ್ಮಿಕರಿಗೆ ಮತ್ತು ಪುರಸಭೆಯ ಸಿಬ್ಬಂದಿಗಳಿಗೆ ತರಬೇತಿ



**ಮಲ್ಲಮ್ಮನುಡಿವಾರ್ತೆಹುಮನಾಬಾದ**

ಸಾಮರ್ಥ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ( capacity building)ಘನ ಮತ್ತು ದ್ರವ ತ್ಯಾಜ್ಯ ಸಮರ್ಪಕ ನಿರ್ವಹಣೆ ಕುರಿತು ಪೌರ ಕಾರ್ಮಿಕರಿಗೆ ಮತ್ತು ಪುರಸಭೆಯ ಸಿಬ್ಬಂದಿಗಳಿಗೆ ಎರಡು ದಿನ ಗಳ ತರಬೇತಿ ಕಾರ್ಯಗಾರವನ್ನು ಡೇ ನಲ್ಮ ಶಾಖೆ ಕಟ್ಟಡದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಯಿತು. ಪುರಸಭೆಯ ಅಧಿಕಾರಿಗಳು ತರಬೇತಿ ಕಾರ್ಯಗಾರವನ್ನು ಉದ್ಘಾಟಿಸಿ ಸ್ವಚ್ ಭಾರತ್ ಮಿಷನ್ ಕುರಿತು ತರಬೇತಿಯನ್ನು ಪೌರಕಾರ್ಮಿಕರು ಮತ್ತು ಸಿಬ್ಬಂದಿ ವರ್ಗದವರು ತರಬೇತಿ ಪಡೆದು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದು ಪೌರಕಾರ್ಮಿಕರಿಗೆ ಕಿವಿಮಾತು ಹೇಳಿದರು. ಪರಿಸರ ಅಭಿಯಂತರರು virshatty ರಕ್ಷೆ ಮಾತನಾಡಿ ಹಸಿ ಕಸ ಒಣ ಕಸ ಮತ್ತು ಹಾನಿಕಾರಕ ಕಸವನ್ನು ಬೇರೆ ಬೇರೆಯಾಗಿ ಸಂಗ್ರಹಣೆ ಮಾಡಲು ಮತ್ತು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ತಿಳಿಸಿದರು . ಕಂದಾಯಾಧಿಕಾರಿ ಶ್ರೀ ವಿಶ್ವ ಪ್ರತಾಪ್ ಅಲೆಕ್ಸಾಂಡರ್ . ಕಚೇರಿ ವ್ಯವಸ್ಥಾಪಕ ಶರಣಪ್ಪ. ಆರೋಗ್ಯ ನಿರೀಕ್ಷಕರಾದ ಬಸವ ಶಿವೂ ಪೂಜೆ. ಮಹಮ್ಮದ್ ಸಲೀಂ ವೃತ್ತ 2. ಶಾಮದಾಸ್ ವೃತ್ತ 1 ಮತ್ತು ಪುರಸಭೆಯ ಅಧಿಕಾರಿಗಳು ಹಾಗೂ ಎಲ್ಲಾ ಪೌರಕಾರ್ಮಿಕರು ಹಾಜರಿದ್ದರು. ತರಬೇತಿಯನ್ನು ಬದುಕು ಸೇವಾ ಸಂಸ್ಥೆ ರವರು ಆಯೋಜನೆ ಮಾಡಿದರು. ಬದುಕು ಸೇವಾ ಸಂಸ್ಥೆಯ ಕಾರ್ಯದರ್ಶಿಯಾದ ವ್ ಶ್ರೀ ರಾಹುಲ್ ಗುತ್ತದಾರ್ ಮತ್ತು ಸಂಪನ್ಮೂಲ ವ್ಯಕ್ತಿಗಳಾದ ನಂದು ಕುಮಾರ್ ಸರ್. ಎಲ್ಲಪ್ಪ ದೊಡ್ಮನಿ.ರವರು ತರಬೇತಿ ಕಾರ್ಯಕ್ರಮವನ್ನು ನಡೆಸಿಕೊಂಡರು

# ರೈತರ ಜ್ವಲಂತ ಸಮಸ್ಯೆ ನಿವಾರಣೆಗಾಗಿ ಸುವರ್ಣ ಸೌಧ ಮುತ್ತಿಗೆ–ಎಂ ಎನ್ ಕುಕುನೂರ

**ಮಲ್ಲಮ್ಮ ನುಡಿ ವಾರ್ತೆಕೊಪ್ಪಳ :** ರಾಷ್ಟ್ರಾದ್ಯಂತ ರೈತರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು ಯಾವ ಸರ್ಕಾರಗಳು ಸಹ ರೈತರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ ಅದಕ್ಕೆ ಕರ್ನಾಟಕ ಸರ್ಕಾರ ಸಹ ಹೊರತಾಗಿಲ್ಲ ಆದ್ದ–ರಿಂದ ರೈತರಿಗಾಗಿರುವ ಅನ್ಯಾಯ ಎಸೆಗುತ್ತಿರುವ ಸರ್ಕಾರದ ಡಿಸೆಂಬರ್ 19ರಂದು ಸುವರ್ಣಸೌಧ ಮುತ್ತಿಗೆ ಹಾಕಲಾಗುವುದು ಎಂದು ಭಾರತೀಯ ಕ್ರಾಂತಿಕಾರಿ ಕಿಸಾನ್ ಸೇನಾ ರಿ. ದೆಹಲಿ ಸಂಘದ ಸಂಸ್ಥಾಪಕ ರಾಷ್ಟೀಯ ಅಧ್ಯಕ್ಷ ಎಂ ಎನ್ ಕುಕನೂರು ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಎಂ.ಏನ್ ಕುಕುನೂರು ಮಾತನಾಡುತ್ತಾ ರಾಜ್ಯ ಸೇರಿದಂತೆ ದೇಶಾದ್ಯಂತ ರೈತರು ಹಲವಾರು ರೀತಿಯ ಜ್ವಲಂತ ಸಮಸ್ಯೆಗಳನ್ನು ಎದುರಿಸುತ್ತಿದ್ದು ಅವುಗಳಲ್ಲಿ ಪ್ರಮುಖವಾಗಿ ರಾಜ್ಯದಲ್ಲಿರುವಂತಹ ಎಲ್ಲಾ ಕೆರೆಕಟ್ಟೆಗಳನ್ನು ತುಂಬಿಸುವುದರೊಂದಿಗೆ ನದಿ ಜೋಡಣೆಯ ಕಾರ್ಯ ಮಾಡಿ ಶಾಶ್ವತ ನೀರಾವರಿ ಮಾಡುವಂತಹ ಕ್ರಮ ಕೈಗೊಳ್ಳಬೇಕು, ನೂತನ ಕೃಷಿ ಮತ್ತು ಎಪಿಎಂಸಿ ಕಾಯ್ದೆಗಳನ್ನು ತಕ್ಷಣ ರದ್ದುಪಡಿಸಬೇಕು, ರಾಜ್ಯದ ಎಲ್ಲಾ ಜಿಲ್ಲೆಯ ಮತ್ತು ತಾಲೂಕುಗಳ ಸಂಸತ್ ಗಳಿಗೆ ಕನಿಷ್ಠ ಏಳು ಗಂಟೆ ಕಾಲ ವಿದ್ಯುತ್ ಪೂರೈಕೆ ಮಾಡಬೇಕು ಜೊತೆಗೆ ತೋಟದ ಮನೆಗಳಿಗೆ ನಿರಂತರ ಜ್ಯೋತಿ ಸೌಲಭ್ಯವನ್ನು ಒದಗಿಸಬೇಕು, ಭತ್ತ ಮೆಕ್ಕೆಜೋಳ ಬೆಳೆಗಳಿಗೆ ಕನಿಷ್ಠ ಬೆಲೆಯಾಗಿ 2400 ರೂಪಾಯಿಗಳ ಜೊತೆಗೆ ರಾಜ್ಯ ಸರ್ಕಾರದಿಂದ 600 ರೂಪಾಯಿಗಳನ್ನು ಸೇರಿಸಿ ಪ್ರತಿ ಕ್ವಿಂಟಲ್ ಗೆ 3000 ಕೊಡಲೇಬೇಕು, ಬಾಕಿ ಉಳಿದಿರುವ ಹಾಲು ಉತ್ಪಾದಕರ ಹಣವನ್ನು ತಕ್ಷಣ ಜಮಾ ಮಾಡಬೇಕು, ರೈತರ ಸಾಲಗಳನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು, ರೈತರು ಕಾಡು ಪ್ರಾಣಿಗಳಿಂದ ಬೆಳೆ ಹಾನಿ ಸಮಸ್ಯೆ ಎದುರಿಸುತ್ತಿದ್ದು ಇದಕ್ಕೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕು, ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲಾಡಳಿತ ಮತ್ತು ತಾಲೂಕ ಆಡಳಿತ ರೈತರ ಕೊಂಡು ಕೊರತೆಯ ಸಭೆಯನ್ನು ಆಯೋಜನೆ ಮಾಡಬೇಕು, ಕಬ್ಬು ಕರೀದಿ ದರವನ್ನು ರಾಜ್ಯ ವ್ಯಾಪ್ತಿ ಒಂದೆ ನಿಯಮವನ್ನು ಅನುಸರಿಸಿ ಪ್ರತಿ ಟನಗೆ ಕನಿಷ್ಠ 3300 ರೂಪಾಯಿ ಬೆಲೆ ನಿಗದಿಪಡಿಸಬೇಕು. ಇವೆಲ್ಲಗಳ ಜೊತೆ ರೈತರ ಹಿತ ಕಾಯುವತ್ತಾ ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿ ಡಿಸೆಂಬರ್ 19 ರಂದು ಬೆಳಗಾವಿ ಸುವರ್ಣ ಸೌಧ ಮುತ್ತಿಗೆ ಹಾಕಿ ಪ್ರತಿಭಟನೆಯನ್ನು ಆಯೋಜಿಸಿದ್ದು ಇದಕ್ಕೆ ಭಾರತೀಯ ಕ್ರಾಂತಿಕಾರಿ ಕಿಸಾನ್ ಸೇನಾ ಸಂಘಟನೆಯ ರಾಜ್ಯದ ಎಲ್ಲಾ ಪದಾಧಿಕಾರಿಗಳು, ಜಿಲ್ಲಾ ಮತ್ತು ತಾಲೂಕ ಪದಾಧಿಕಾರಿಗಳು ಸೇರಿದಂತೆ ರೈತ ಸಂಘಟನೆಯ, ವಿವಿಧ ಕಾರ್ಮಿಕ ಸಂಘಟನೆಯ ಸದಸ್ಯರು ಸೇರಿದಂತೆ ಸಹಸ್ರಾರು ರೈತರು ಭಾಗವಹಿಸುತ್ತಿದ್ದು ಎಲ್ಲಾ ರೈತರು ಹಾಗೂ ಕಾರ್ಮಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ರಾಜ್ಯ ಯುವ ಘಟಕ ಅಧ್ಯಕ್ಷರು ರಫಿ ಉಲ್ಲಾ, ರಾಜ್ಯ ಮಹಿಳಾ ಘಟಕದ ಉಪಾಧ್ಯಕ್ಷರು ಯಶೋಧನಾರಾಯಣ, ರಾಜ್ಯ ಯುವ ಘಟಕ ಉಪಾಧ್ಯಕ್ಷರು ನವೀದ್ ಪಾಷಾ, ಜಿಲ್ಲಾ ಅಧ್ಯಕ್ಷರು ಬರ್ಮಣ್ಣ, ರಿಜ್ವಾನ್, ಕೃಷ್ಣ, ಎಸ ಎಂ ಮುಲ್ಲಾ, ಪಿಂಡನಗೌಡ್ರು, ರಾಘವೇಂದ್ರ ಎಲ್, ತಿಲಕ್, ಹನುಮೇಶ್, ಮಾಜಿದ್ ಖಾನ್ ಮುಲ್ಲಾ, ದೊಡ್ಡಪ್ಪ ಬಾವಿಕಟ್ಟಿ, ರಾಜೇಶ್ ಸಣ್ಣಕ್ಕಿ, ರಾಜ್ಯ ಕಾರ್ಯದರ್ಶಿಯಾದ ಅಫ್ತಾಬ್ ಪಾಷಾ ಇಂಜಿನಿಯರ್, ಮಹಾದೇವ್ ಬೋದನೂರು, ತಸ್ಲೀಮ್, ವೀರಣ್ಣ, ವಿಜಯಕುಮಾರ್ ಚಲವಾದಿ, ಹೊನ್ನಪ್ಪ, ಮುಬಾರಕ್ ಶರೀಫ್, ಸೈಯದ್ ರಿಜ್ವಾನ್ ಪಾಲ್ಗೊಂಡಿದ್ದರು



# ಡಿ.21ರಂದು ಬೂತ್ ಮಟ್ಟದಲ್ಲಿ ಪಲ್ಸ್ ಪೋಲಿಯೊ ಲಸಿಕಾ ಅಭಿಯಾನ

**ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:** ಡಿ.21ರಂದು ಬೂತ್ ಮಟ್ಟದಲ್ಲಿ ರಾಷ್ಟ್ರೀಯ ಪಲ್ಸ್ ಪೊಲಿಯೋ ಲಸಿಕಾ ಅಭಿಯಾನ ಆಯೋಜನೆ ಮಾಡಲಾಗಿದೆ.

ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆ ವರೆಗೆ ವಿವಿಧ ಆರೋಗ್ಯ ಕೇಂದ್ರ, ಅಂಗನವಾಡಿ, ಶಾಲೆಗಳಲ್ಲಿ ಲಸಿಕಾ ಬೂತ್ ಗಳನ್ನು ಆಯೋಜಿಸಿದ್ದು, ಸದರಿ ದಿನದಂದು ಎಲ್ಲಾ 5 ವರ್ಷದ ಒಳಗಿನ ಮಕ್ಕಳಿಗೆ ಲಸಿಕೆ ಹಾಕಿಸಬೇಕು ಎಂದು ತಾಲ್ಲೂಕು ಆರೋಗ್ಯ ಅಧಿಕಾರಿ ರವಿ ಜಿ.ಕಲ್ಲಶೆಟ್ಟಿ ಹೇಳಿದರು.

ಪಟ್ಟಣದ ತಹಸಿಲ್ದಾರ್ ಕಚೇರಿಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೊ ಲಸಿಕಾ ಅಭಿಯಾನದ ನಿಮಿತ್ತ ಹಮ್ಮಿಕೊಂಡಿದ್ದ ಪೂರ್ವಸಿದ್ಧತಾ ಸಭೆಯಲ್ಲಿ ಅವರು ಮಾತನಾಡಿದರು. ತಾಲ್ಲೂಕಿನಲ್ಲಿ 196 ಬೂತ್ ಗಳ ಮೂಲಕ ಪಲ್ಸ್ ಪೋಲಿಯೊ ಲಸಿಕಾ ಹನಿ ನೀಡಲಾಗುವುದು. 5ವರ್ಷದ ಒಳಗಿನ ಸುಮಾರು



54835 ಮಕ್ಕಳಿಗೆ ಪೊಲಿಯೊ ಲಸಿಕಾ ಹನಿ ಹಾಕುವ ಗುರಿ ಹಮ್ಮಿಕೊಳ್ಳಲಾಗಿದೆ. ಎಲ್ಲಾ ಆರೋಗ್ಯ ಕೇಂದ್ರಗಳು ಹಾಗೂ ಭಾಲ್ಕಿ ಪಟ್ಟಣದ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಬಳಿ ಟ್ರಾಜೀಟ್ ಟೀಮ್‌ಗಳನ್ನು ಆಯೋಜಿಸಿದ್ದು, ಸದರಿ ತಂಡಗಳು ಬಸ್ ಹಾಗೂ ರೈಲ್ವೆ ಮೂಲಕ ಸಂಚಾರ ಮಾಡುವ 5 ವರ್ಷದ ಒಳಗಿನ ಮಕ್ಕಳಿಗೆ ಲಸಿಕೆ ನೀಡುತ್ತವೆ. 22ರಿಂದ 24ರವರೆಗೆ ಮನೆ ಮನೆಗೆ ಭೇಟಿ ನೀಡಿ ತಪ್ಪಿದ ಮಕ್ಕಳಿಗೆ ಲಸಿಕೆ ನೀಡಲಾಗುವುದು ಎಂದು ತಿಳಿಸಿದರು.

ತಹಶೀಲ್ದಾರ್ ಕಚೇರಿಯ ಗೋಪಾಲಹಿಪ್ಪರಗಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಚಂದ್ರಶೇಖರ ಇಜಾರೆ, ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಬಸವರಾಜ, ಶಿಶು ಮತ್ತು ಮಕ್ಕಳ ಅಭಿವೃದ್ದಿ ಅಧಿಕಾರಿ ಮಹಮದ್ ಅಬ್ದುಲ್ ಖಲೀಲ್, ಪ್ರಮುಖರಾದ ರೋಹಿದಾಸ ಜಿ. ರಾಠೋಡ್, ಧೂಳಪ್ಪ ಬಿ. ನಿಟ್ಟೂರ, ಸಂತೋಷ, ಪ್ರಫೂಲ್‌ಕುಮಾರ, ಭದ್ರಪ್ಪಾ ಬಿ. ಹುಡಗೆ, ಎಸ್.ವಿ. ನಾಯ್ಕ ಸೇರಿದಂತೆ ಇತರರು ಇದ್ದರು.

# ಪಾಶ್ಚಾತ್ಯ ಸಂಸ್ಕೃತಿಯಿಂದ ಜನಪದ ಕಣ್ಮರೆ



**ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ :** ಜಾನಪದ ಕಲೆಗಳು ಮತ್ತು ಸಾಹಿತ್ಯವು ನಮ್ಮ ಗ್ರಾಮೀಣ ಸಂಪ್ರದಾಯ,ಪರಂಪರೆಮತ್ತುಕನ್ನಡ ನುಡಿಯ ಮೂಲ ಬೇರುಗಳನ್ನು ಪ್ರತಿಬಿಂಬಿಸುತ್ತವೆ. ಆಧುನಿಕತೆ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ನಮ್ಮ ಜನಪದ ಹಾಡುಗಳು, ಹಬ್ಬಗಳು ಮತ್ತು ಕಲೆಗಳು ಕಣ್ಮರೆಯಾಗುತ್ತಿವೆ ಎಂಬ ಆತಂಕವಿದೆ. ಎಂದು ಶ್ರೀ ದತ್ತಗುರು ಎಜುಕೇಷನ್ ಟ್ರಸ್ಟ್ ಅಧ್ಯಕ್ಷರಾಯಪ್ಪ.ಎಸ್.ಹೂಗಾರ್ ತಿಳಿಸಿದರು.ಪಟ್ಟಣದ ಹೇಮರಡ್ಡಿ ಮಲ್ಲಮ್ಮದೇವಸ್ಥಾನ ಆವರಣದಲ್ಲಿ ಶ್ರೀ ದತ್ತಗುರು ಎಜುಕೇಷನ್ ಟ್ರಸ್ಟ್ ಪರಸನಹಳ್ಳಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ "ನುಡಿ–ಸಂಸ್ಕೃತಿ ಉಳಿಸಿ ಬೆಳೆಸಬೇಕು ಹಾಗೂ ಜನಪದ ಕಲಾವಿದರ ಸಂಭ್ರಮ" ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದವರು.ಯುವಕರು ಮತ್ತು ವಿದ್ಯಾರ್ಥಿಗಳು ಮೊಬೈಲ್ ಮತ್ತು ಆಧುನಿಕ ಅಬ್ಬರಗಳಿಗೆ ಮಾರುಹೋಗದೆ,ನಮ್ಮ ಜಾನಪದ ಸಂಸ್ಕೃತಿಯನ್ನು ಕಲಿಯಬೇಕು,ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಮತ್ತು ಮುಂದಿನ ಪೀಳಿಗೆಗೆ ಅದನ್ನು ಉಳಿಸಬೇಕು.ಜಾನಪದ ಕಲಾವಿದರ ಸಂಭ್ರಮ ಮತ್ತು ಗೌರವ ಸಮಾಜದ ಕರ್ತವ್ಯವಾಗಿದೆ. ತಲೆಮಾರುಗಳಿಂದ ಈ ಕಲೆಗಳನ್ನು ಉಳಿಸಿ,ಬೆಳೆಸಿಕೊಂಡು ಬರುತ್ತಿರುವ ಕಲಾವಿದರನ್ನು ಗೌರವಿಸುವುದು ಮತ್ತು ಅವರನ್ನು ಸತ್ಕರಿಸುವುದು ಸಮಾಜದ ಆದ್ಯ ಕರ್ತವ್ಯವಾಗಿದೆ ಎಂದುಅಭಿಪ್ರಾಯವ್ಯಕ್ತಪಡಿಸಿದರು.ಈ ಕಾರ್ಯಕ್ರಮದಲ್ಲಿ

ಸಂಸ್ಥೆಯ ಕಾರ್ಯದರ್ಶಿ ಬಸವರಾಜ್ ಹೂಗಾರ್, ಭೀಮರಾಯ ಆರ್. ಕುಲಕರ್ಣಿ, ಪುರಸಭೆ ಸದ್ಯಸರಾದ ಮುದೆಪ್ಪ ಪೂಜಾರಿ, ಗುರುನಾಥ ಬ್ಯಾ–ಕೋಡ್, ಅನಿಲ್ ಹೊಸಗೌಡ್ರು, ಪರಶುರಾಮ್ ಸುರಪುರ, ಕಲಾವಿದರಾದ ಶಂಕರ್ ಶಾಸ್ತ್ರೀ, ನಿಂಗಪ್ಪ ಭಜಂತ್ರಿ, ಸಿದ್ದರಾಮ ಭಜಂತ್ರಿ,ಬಸವರಾಜ್ ಹೊಗಾರ್ ಹಾಗೂ ಇತರರು ಹಾಜರಿದ್ದರು.

> **ಜಾನಪದ ಉಳಿಸಿ, ಬೆಳೆಸಿ" ಎಂಬುದು ಕೇವಲ ಘೋಷಣೆಯಲ್ಲ, ನಮ್ಮ ಸಂಸ್ಕೃತಿಯನ್ನು ಜೀವಂತವಾಗಿ ಇಡಲು ಬೇಕಾದ ಸಂಕಲ್ಪ.ಜಾನಪದವು ನಮ್ಮ ನಾಡಿನ ಆತ್ಮ ಮತ್ತು ಮೂಲ ಬೇರು. ಅದನ್ನು ಉಳಿಸಿ, ಮುಂದಿನ ಪೀಳಿಗೆಗೆ ದಾಟಿಸುವ ಮೂಲಕ ನಾವು ನಮ್ಮತನವನ್ನು ಮತ್ತು ಹೆಮ್ಮೆಯನ್ನು ಉಳಿಸಿಕೊಂಡಂತೆ.**
>
> **ಬಸವರಾಜ್ ಹೂಗಾರ್**

## ಡಿ,19ರಂದು ವಿದ್ಯುತ್ ವ್ಯತ್ಯಯ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು :** ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗದ ಶಾಖೆ–2 ಹಾಗೂ 1ರಲ್ಲಿ ಎಲ್.ಟಿ ಲೈನ್ ರೋಡ್ ವೈಡ್‌ನಿಂಗ್ ಕಾಮಗಾರಿ ಕೈಗೊಂಡ ಪ್ರಯುಕ್ತ ಡಿಸೆಂಬರ್ 19ರ ಬೆಳಿಗ್ಗೆ 10ರಿಂದ ಸಂಜೆ 5ಗಂಟೆಯವರೆಗೂ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕಾರಿಸುವಂತೆ ಕೋರಲಾಗಿದೆ.ಅಂದು ಬೆಳಿಗ್ಗೆ 10ರಿಂದ ಅಸ್ಕಿಹಾಳ, ಅಸ್ಕಿಹಾಳ ಮೇನ್ ರೋಡ್, ಕೋಲ್ಡ್ ಸ್ಟೋರೇಜ್ ಎದುರುಗಡೆ, ನಾಗರಕಟ್ಟೆ, ಕೃಷ್ಣ ಮೇಡೌಸ್, ಬೈಪಾಸ್ ರೋಡ್ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಹೆಚ್ಚಿನ ಮಾಹಿತಿಗಾಗಿ 08532–226386, 08532–231999, 9480845955 ಮತ್ತು 9448395624ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತುಂಗಭದ್ರಾ ಕಾಲೇಜುವತಿಯಿಂದ ಶೈಕ್ಷಣಿಕ ಪ್ರವಾಸ

**ಮಲ್ಲನ ನುಡಿ ವಾರ್ತೆ ಮಸ್ಕಿ :** ಮಸ್ಕಿ ತಾಲೂಕಿನ ಮುದ್ದಾಪುರನ



ತುಂಗಭದ್ರಾ ಪದವಿ ಪೂರ್ವ ಕಾಲೇಜುವತಿಯಿಂದ 2025–26 ನೇ ಸಾಲಿನ ಮೂರು ದಿನಗಳ ಶೈಕ್ಷಣಿಕ ಪ್ರವಾಸ ಕೈಗೊಳ್ಳಲಾಯಿತು ಇಂದು ಶಿರಸಿ ಮಾರಿಕಾಂಬ, ಜಗತಪ್ರಸಿದ್ಧ ಜೋಗ ಜಲಪಾತವನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ಕಾಲೇಜು ಪ್ರಾಚಾರ್ಯ ಲಕ್ಷಣ ಕರ್ಲಿ, ಸಂಸ್ಥೆ ಕಾರ್ಯದರ್ಶಿ ರಾಮಣ್ಣ ನಾಯಕ, ಉಪನ್ಯಾಸಕರಾದ ಹುಸೇನ ಭಾಷಾ, ಅಕ್ಕಮಹಾದೇವಿ, ವಿಜಯಲಕ್ಷ್ಮಿ, ಶ್ರೀಕಾಂತ ವಿದ್ಯಾರ್ಥಿಗಳು ಇದ್ದರು.

## ಅಂಗನವಾಡಿಯಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳು ಆರಂಭ



**ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು:** ತಾಲುಕೀನ ಈಚನಾಳ ಗ್ರಾಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಶ್ರಯದಲ್ಲಿ ಶಿಶು ಅಭಿವೃದ್ಧಿ ಯೋಜನೆ ಅಡಿಯಲ್ಲಿ 2025–26ನೇ ಸಾಲಿನಲ್ಲಿ ಅಂಗನವಾಡಿಯಲ್ಲಿ ಮಂಗಳವಾರ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಆರಂಭಿಸಲಾಯಿತು.

ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅಂಗನವಾಡಿಗಳ ಮೇಲ್ವಿಚಾರಕಿ ನಜ್ಮಾ ಬೇಗಂ ಪ್ರಸ್ತುತ ಆಧುನಿಕ ಯುಗದ ವೇಗಕ್ಕೆ ತಕ್ಕಂತೆ ಶಿಕ್ಷಣದಲ್ಲಿ ಬದಲಾವಣೆ ತರಲು ಸರಕಾರ ಬಾಲ ಮಕ್ಕಳ ಕಲಿಕೆಯನ್ನು ಉತ್ತೇಜಿಸಲು ,ಅಂಗನವಾಡಿ ಕೇಂದ್ರಗಳಿಗೆ ಅಗತ್ಯ ಸೌಲಭ್ಯಗಳ ಜೊತೆಗೆ ಶಿಕ್ಷಕರಿಗೆ ಉತ್ತಮ ತರಬೇತಿ ಸಿಕ್ಕಿದೆ,ಪಾಲಕರು ಲಕ್ಷಾಂತರ ಹಣ ಖರ್ಚು ಮಾಡಿ ಖಾಸಗಿ ಶಾಲೆಗಳಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಬದಲು ,ಉಚಿತವಾಗಿ ಸ್ಥಳಿಯ ಅಂಗನವಾಡಿಯಲ್ಲಿಯೆ ಮಕ್ಕಳಿಗೆ ಪೌಷ್ಠಿಕ ಆಹಾರ ಹಾಗೂ ಉತ್ತಮ ಶಿಕ್ಷಣ ಸಿಗುವ ಅವಕಾಶವನ್ನು ಜನರು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಈ ವೇಳೆ ಸರ್ಕಾರದಿಂದ ಒದಗಿಸಿದ ಪಠ್ಯ ಪುಸ್ತಕಗಳನ್ನು ಮಕ್ಕಳಿಗೆ ವಿತರಣೆ ಮಾಡಲಾಯಿತು.

ಈ ಸಂಧರ್ಭದಲ್ಲಿ ಗ್ರಾಪಂ ಕಾರ್ಯದರ್ಶಿ ಮಲ್ಲಿಕಾರ್ಜುನ, ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಕುಮಾರಸ್ವಾಮಿ, ಅಂಗನವಾಡಿ ಶಿಕ್ಷಕರಾದ ಸರಸ್ವತಿ ಹೆಚ್. ಬಡಿಗೇರ್, ಸುಮಂಗಲಾ, ಚನ್ನಮ್ಮ, ಲಕ್ಷ್ಮೀ, ಶರಣಮ್ಮ, ಅಕ್ಷತಾ, ಅನುಸುಯಾ, ಸೇರಿದಂತೆ ಮಕ್ಕಳ ಪಾಲಕರು ,ಅಡುಗೆ ಸಿಬ್ಬಂದಿಗಳು,ಬಾಲ ಮಕ್ಕಳು ಹಾಜರಿದ್ದರು.

## ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಮಾದಿಗ ಸಮೂದಾಯದಿಂದ ಪ್ರತಿಭಟನೆ




**ಮಲ್ಲಮ್ಮನುಡಿವಾರ್ತೆಮುದಗಲ್:** ಇಲ್ಲಿನ ನಿರುಪಾದೇಶ್ವರ ಪೆಟ್ರೋಲ್ ಪಂಪ್ ಸಮೀಪದಲ್ಲಿ ಮಂಗಳವಾರ ಪರಿಶಿಷ್ಟ ಜಾತಿಯ ಸಂಪೂರ್ಣ ಒಳಮೀಸಲಾತಿಯನ್ನೂ ಕೂಡಲೇ ಜಾರಿ ಮಾಡಬೇಕು ಎಂದು ಮಾದಿಗ ದಂಡೋರ ಸಮಿತಿ ರಾಜ್ಯಾಧ್ಯಕ್ಷ ನರಸಪ್ಪ ನೇತ್ರತ್ವದಲ್ಲಿ ರಸ್ತೆ ಬಂದ ಮಾಡಿ ಟೈಯರ ಸುಟ್ಟು ಪ್ರತಿಭಟನೆ ಮಾಡಲಾಯಿತು.

ಪ್ರತಿಭಟನೆಯಲ್ಲಿ ನಾವೂಗಳು ಯಾರ ವಿರೋಧಿಯಲ್ಲ, ನಾವು ಸುಮಾರು 30 ವರ್ಷಗಳಿಂದ ರಾಜಕೀಯವಾಗಿ,ಶೈಕ್ಷಣಿಕವಾಗಿಹಾಗೂ ಆರ್ಥಿಕವಾಗಿ ಮತ್ತು ಸಮಾಜಿಕವಾಗಿ ಹೋರಾಟ ಮಾಡುತ್ತಾ ಬಂದಿದ್ದೇವೆ, ಇಲ್ಲಿಯವರೆಗೆ ಮಾದಿಗರಿಗೆ ನ್ಯಾಯ ಸಿಕ್ಕಿಲ್ಲ,ಓಲೈಕೆಗೆ ಬಗ್ಗುವುದಿಲ್ಲ, ನಮ್ಮ ಸಹನೆ ಕಟ್ಟೆ ಒಡೆದಿದೆ. ಶೋಷಿತ ವರ್ಗದ ಅಸ್ಪೃಶ್ಯ ಮಾದಿಗರಿಗೆ ಸ್ವಾತಂತ್ರ್ಯಾನಂತರರ ನಿರಂತರ ಅನ್ಯಾಯವಾಗಿದೆ. ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಮಾದಿಗ ಸಮೂದಾಯ ಸಿಡಿದೆದ್ದಿದೆ. ಒಳಮೀಸಲಾತಿ ಜಾರಿ ಮಾಡಬೇಕು ಎಂದು ಆಕ್ರೋಶ ವ್ಯಕ್ತ ಪಡಿಸಿ ರಾಜ್ಯ ಸರಕಾರದ ವಿರುದ್ಧ ಘೋಷಣೆ ಕೂಗಿದರು. ಪೋಲಿಸ್ ಇಲಾಖೆಯಿಂದ ಪ್ರತಿಭಟನಾ ಕಾರರನ್ನು ಬಂದಿಸಿ, ಬಿಡುಗಡೆ ಮಾಡಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಜಿಲ್ಲಾಧ್ಯಕ್ಷ ಮಾನಪ್ಪ, ರಾಘವೇಂದ್ರ ಕುದುರೆ, ಮೋಹನ್ ಬಂಡಾರಿ, ವೆಂಕಟೇಶ ಹಿರೇಮನಿ, ಹನುಮಂತ ಬಿಲ್ಲಿ, ರಾಘವೇಂದ್ರ ಹವಳೇ, ಮರಿಸ್ವಾಮಿ ದೇವರಮನಿ ಸೇರಿದಂತೆ ಇತರರಿದ್ದರು.

## ಅಫಜಲಪುರ ತಾಲೂಕಿನ ಗಾಣಗಾಪುರದಲ್ಲಿ ಉಚಿತ ನೇತ್ರ ತಪಾಸಣೆ ಶಿಬಿರ ಇಂದು

**ಮಲ್ಲಮ್ಮನುಡಿವಾರ್ತೆಕಲಬುರಗಿ:** ಶ್ರೀ ಸಿದ್ಧರಾಮೇಶ್ವರ ಕಣ್ಣಿನ ಆಸ್ಪತ್ರೆ, ಕಲಬುರಗಿ, ಜರ್ಮನಿಯ ಹಮಾರಾ ಬಂಧನ್ (Hamara Bandhan e.V.) ಸಂಸ್ಥೆ ಮತ್ತು ಸಹ–ಪ್ರಾಯೋಜಕರು ಶ್ರೀ ಹೆಲ್ಮಟ್ ಸ್ಟೋಬೆಲ್ ಯವರ ಸಹಯೋಗದಲ್ಲಿ ಉಚಿತ ಕಣ್ಣು ತಪಾಸಣೆ ಮತ್ತು ಉಚಿತ ಮೋತಿಬಿಂದು ಶಸ್ತ್ರಚಿಕಿತ್ಸಾ ಶಿಬಿರವನ್ನು ಡಿಸೆಂಬರ್ 18, 2025 (ಗುರುವಾರ) ರಂದು ಅಫಜಲಪುರ ತಾಲೂಕಿನ ಗಾಣಗಾಪುರದ ಅನಸೂಯಾ ದತ್ತ ಲಾಡ್ಜ ನಲ್ಲಿ, ಬೆಳಿಗ್ಗೆ 9.30 ಗಂಟೆಯಿಂದ ಆಯೋಜಿಸಲಾಗಿದೆ.

ಈ ಶಿಬಿರದಲ್ಲಿ ತಜ್ಞ ಕಣ್ಣಿನ ವೈದ್ಯರು ಸಾರ್ವಜನಿಕರಿಗೆ ಕಣ್ಣಿನ ತಪಾಸಣೆ ನಡೆಸಲಿದ್ದು, ಅಗತ್ಯವಿರುವವರಿಗೆ ಉಚಿತವಾಗಿ ಮೋತಿಬಿಂದು ಶಸ್ತ್ರಚಿಕಿತ್ಸೆ ಮಾಡಲಾಗುವುದು.

ಆಯ್ಕೆಯಾದ ರೋಗಿಗಳ ಶಸ್ತ್ರಚಿಕಿತ್ಸೆ ಶ್ರೀ ಸಿದ್ಧರಾಮೇಶ್ವರ ಕಣ್ಣಿನ ಆಸ್ಪತ್ರೆ, ಕಲಬುರಗಿಯಲ್ಲಿ ಉಚಿತವಾಗಿ ನೆರವೇರಿಸಲಾಗುತ್ತದೆ. ರೋಗಿಗಳ ಅನುಕೂಲಕ್ಕಾಗಿ ಶಸ್ತ್ರಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗಲು ಮತ್ತು ಹಿಂದಿರುಗಲು ಉಚಿತ ಪ್ರಯಾಣ ಸೌಲಭ್ಯವನ್ನು ಸಹ ಒದಗಿಸಲಾಗಿದೆ. ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಜನರು ಈ ಶಿಬಿರದ ಸದುಪಯೋಗವನ್ನು ಪಡೆಯುವಂತೆ ಆಯೋಜಕರು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

## ಶಾಮನೂರು ನಿಧಕ್ಕೆ ವೀರೇಶ ತುಗಾಂವ ಸಂತಾಪ

**ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:** ದಾವಣಗೆರೆ ಕ್ಷೇತ್ರದ ಕಾಂಗ್ರೆಸ್‌ನ ಹಿರಿಯ ಶಾಸಕ ಶಾಮನೂರು ಶಿವಂಕರೆಪ್ಪನವರ

ನಿಧನಕ್ಕೆ ವೀರೇಶ ತುಗಾಂವ ಸಂತಾಪ ಸೂಚಿಸಿದ್ದಾರೆ.ಶಾಮನೂರು ಶಿವಂಕರೆಪ್ಪನವರ ಅಗಲಿಕೆ ತೀವ್ರ ಅಘಾತ ತರಿಸಿದೆ. ಅವರು ರಾಜ್ಯದ ಮುತ್ಸದ್ದಿ ನಾಯಕರಾಗಿದ್ದರು. ಸಾಮಾಜಿಕ ಮತ್ತು ಶೈಕ್ಷಣಿಕ ಸೇವೆ ಮಾದರಿಯಾಗಿದೆ.

ಅವರು ಶಿಕ್ಷಣ ಸಂಸ್ಥೆ ಕಟ್ಟಿ ಶೈಕ್ಷಣಿಕ ಪ್ರಗತಿಗೆ ನಾಂದಿ ಹಾಡಿದ್ದಾರೆ. ಅವರ ಅವಧಿಯಲ್ಲಿ ವೀರಶೈವ ಲಿಂಗಾಯತ ಮಹಾಸಭೆಯ ಸಂಘಟನೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಪ್ರಯತ್ನ ಮಾಡಿದಾರೆ.

ಬಡವರ ಬಂಧು, ಕೊಡಗೈ ದಾನಿ ಆಗಿರುವ ಅವರ ಅಗಲಿಕೆಯಿಂದ ವೀರಶೈವ ಲಿಂಗಾಯತ ಧರ್ಮ ಬಡವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಐದು ವರ್ಷದೊಳಗಿನ ಪ್ರತಿ ಮಗುವಿಗೆ ಪೋಲಿಯೋ ಲಸಿಕೆ ನೀಡಿ: ಡಿಸಿ ಪ್ರಸಾದ್

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,:** ಜಿಲ್ಲೆಯಲ್ಲಿ ಇದೇ ಡಿ.21 ರಿಂದ 24 ರವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಐದು ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ಪಲ್ಸ್ ಪೋಲಿಯೋ ಲಸಿಕೆ ನೀಡಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್. ಕೆ ಅವರು ಹೇಳಿದರು.

ನಗರದ ಜಿಲ್ಲಾಡಳಿತ ಭವನದ ವಿಡಿಯೋ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಎರಡನೇ ಹಂತದ ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇದೇ ಡಿಸೆಂಬರ್ 21 ರಂದು ಬೂತ್ ಮಟ್ಟದ ಪೋಲಿಯೋ ಲಸಿಕಾ ಕಾರ್ಯಕ್ರಮ ನಡೆಯಲಿದ್ದು, ಡಿ.22, 23 ರಂದು ಗ್ರಾಮೀಣ ಪ್ರದೇಶದಲ್ಲಿ ಹಾಗೂ ಡಿ.22 ರಿಂದ 24 ರವರೆಗೆ ಮನೆ ಮನೆಗೆ ಭೇಟಿ ನೀಡಿ ಪಲ್ಸ್ ಪೋಲಿಯೋ ಲಸಿಕೆ ನೀಡಲಾಗುತ್ತಿದೆ. ಯಾವುದೇ ಅರ್ಹ ಮಗು ಈ ಲಸಿಕೆಯಿಂದ ವಂಚಿತರಾಗದಂತೆ ನಿಗಾವಹಿಸಲು ಅವರು ಸೂಚಿಸಿದರು.

ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಬಗ್ಗೆ ಪಾಲಕರಲ್ಲಿ ಅರಿವು, ಶಾಲಾ ಮಕ್ಕಳಿಗೆ ಸೂಕ್ತ ಜಾಗೃತಿ ಕಾರ್ಯಕ್ರಮ, ಶಿಕ್ಷಕರ ಮೂಲಕ ಮಕ್ಕಳಿಗೆ ಲಸಿಕೆ ಹಾಕಿಸಲು, ಅವಶ್ಯಕ ಕ್ರಮ ಕೈಗೊಳ್ಳಬೇಕು. ಲಸಿಕಾ ಸಿಬ್ಬಂದಿಗಳಿಗೆ ಸೂಕ್ತ ವಾಹನಗಳ ವ್ಯವಸ್ಥೆ ಮಾಡಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಚಿಸಿದರು.



ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮಕ್ಕೆ ಸಂಬಂಧಿಸಿದ ತಂಡಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು. ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು, ಆರೋಗ್ಯ ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳ ಸಮನ್ವಯತೆಯಿಂದ ಕಾರ್ಯನಿರ್ವಹಿಸಿ ಯಾವುದೇ ಮಗು ಪೋಲಿಯೋ ಲಸಿಕೆಯಿಂದ ವಂಚಿತರಾಗದಂತೆ ನಿಗಾವಹಿಸಬೇಕು. ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಜನನಿಬೀಡ, ದೂರದ ಪ್ರದೇಶ, ವಲಸಿಗ ಕಾರ್ಮಿಕರ ಮಕ್ಕಳು, ಜಿಲ್ಲೆಗೆ ಆಗಮಿಸುವ ಕಾರ್ಮಿಕರ ಹಾಗೂ ವಿವಿಧ ಸಮುದಾಯ ವ್ಯಾಪ್ತಿಯಲ್ಲಿನ ಮಕ್ಕಳನ್ನು, ಗುರುತಿಸಿ ಲಸಿಕೆ ಹಾಕಿಸಬೇಕು ಎಂದರು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ ಅವರು ಮಾತನಾಡಿ, ಜಿಲ್ಲೆಯಲ್ಲಿ ಈ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಗವಾಗಿ 1,89,745 ಐದು ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ.

ಇದಕ್ಕಾಗಿ ಒಟ್ಟು 920 ಬೂತ್ ಮಟ್ಟದ ಲಸಿಕಾ ತಂಡಗಳನ್ನು ರಚಿಸಲಾಗಿದ್ದು, 49 ಟ್ರಾನ್ಸಿಟ್ (ಸಂಚಾರಿ) ತಂಡಗಳನ್ನು ನೇಮಿಸಲಾಗಿದೆ. 1,968 ಲಸಿಕಾ ಸಿಬ್ಬಂದಿಗಳು, 984 ತಂಡಗಳು ಮನೆ ಮನೆಗೆ ಭೇಟಿ ನೀಡಲಿವೆ, ಎಲ್ಲಾ ತಂಡಗಳಿಗೆ ಲಸಿಕೆ ನೀಡುವ ವಿಧಾನ ಕುರಿತು ತರಬೇತಿ ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಬಸರೆಡ್ಡಿ, ವಿಶ್ವ ಆರೋಗ್ಯ ಸಂಸ್ಥೆಯ ಎಸ್.ಎಮ್.ಓ ಡಾ.ಶ್ರೀಧರ್, ಜಿಲ್ಲಾ ಯೋಜನಾಭಿವೃದ್ಧಿ ಅಧಿಕಾರಿ ಡಾ.ಆರ್.ಅಬ್ದುಲ್ಲಾ, ಪ್ರಭಾರಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಖುರ್ಶಿದ್ ಬೇಗಮ್ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ತಾಲ್ಲೂಕು ಮಟ್ಟದ ಆರೋಗ್ಯಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.



**ಬೆಳಗಾವಿಯಲ್ಲಿ ಸುವರ್ಣ ಸೌಧದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕರ್ನಾಟಕ ಬಾಲವಿಕಾಸ ಅಕಾಡೆಮಿಯು ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಯಾದಗಿರಿ ನಗರದ ಬಹುಮುಖ ಪ್ರತಿಭೆ ಬಾಲಕ ಮಯಾಂಕ್ ವಿ.ಹಿರೇನೂರ ಅವರಿಗೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಬಾಲಗೌರವ ಪ್ರಶಸ್ತಿ ನೀಡಿ ಸನ್ಮಾನಿಸಿದರು. ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ, ಭರಮಣ್ಣ ಉಪ್ಪಾರ ಸೇರಿದಂತೆಯೇ ಇತರರಿದ್ದರು.**

## ಪೃಥ್ವಿ ಹೆಗಡೆಗೆ 'ಬಾಲಗೌರವ ಪ್ರಶಸ್ತಿ ಪ್ರದಾನ

**ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:** ಪಟ್ಟಣದ ಭರತನಾಟ್ಯ ಪ್ರವೀಣೆ, ನಾಟ್ಯ ಮಯೂರಿ ಕುಮಾರಿ ಪೃಥ್ವಿ ಎಂ.ಹೆಗಡೆ ಇವರಿಗೆ ಕರ್ನಾಟಕ ಸರ್ಕಾರ ಬಾಲ ವಿಕಾಸ ಅಕಾಡೆಮಿ ಧಾರವಾಡ ನೀಡುವ "ಬಾಲಗೌರವ" ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ. ಡಿಸೆಂಬರ್ 16 ರಂದು ಬೆಳಗಾವಿಯ ಸುವರ್ಣ ಸೌಧದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹಾಗೂ ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಸೇರಿ ಹಲವು ಗಣ್ಯರ ಸಮ್ಮುಖದಲ್ಲಿ 10ಸಾವಿರ ನಗದು, ಸ್ಮರಣಿಕೆ, ಬಾಲಗೌರವ ಪ್ರಶಸ್ತಿ ನೀಡಿ ನಾಟ್ಯಮಯೂರಿ ಪೃಥ್ವಿ ಎಮ್ ಹೆಗಡೆ ಅವರಿಗೆ ಗೌರವಿಸಲಾಗಿದೆ.10 ವರ್ಷದಿಂದ ತಾಳಿಕೋಟಿ ಪಟ್ಟಣದ ಶ್ರೀ ವಿರಕ್ತೇಶ್ವರ ಭರತನಾಟ್ಯ ತರಬೇತಿ ಸಂಸ್ಥೆಯಲ್ಲಿ ವಿನೋದಕುಮಾರ ಚಿಕ್ಕಮಠ ಇವರ ಹತ್ತಿರ ಭರತನಾಟ್ಯ ಹಾಗೂ ಜಾನಪದ ತರಬೇತಿ ಪಡೆದುಕೊಂಡು ತಮ್ಮ ನೃತ್ಯದ



ಮೂಲಕ ಜನರ ಮನಸ್ಸು ಸೆಳೆದಿರುವ ವಿದ್ಯಾರ್ಥಿನಿ ನಾಟ್ಯಮಯೂರಿ ಪೃಥ್ವಿ ಎಮ್ ಹೆಗಡೆ ಇವರು ಈಗಾಗಲೇ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.ಈ ನೃತ್ಯ ಕಲಾವಿದೆ ತಾಳಿಕೋಟಿ ನಿವಾಸಿ ಆಗಿದ್ದು ಕರ್ನಾಟಕ. ಕೆರಳ . ಉತ್ತರಪ್ರದೇಶ. ಹಾಗೂ ಮಾಹಾರಾಷ್ಟ್ರ.ಆಂಧ್ರಪ್ರದೇಶ.ದಲ್ಲಿ ತಮ್ಮ ನೃತ್ಯ ಪ್ರದರ್ಶನ ನೀಡಿರುತ್ತಾರೆ ಮತ್ತು ಚಂದನ ವಾಹಿನಿಯಲ್ಲಿ ಶ್ರೀ ಬಸವ ವಾಹಿನಿಯಲ್ಲಿ 231 ಭರತನಾಟ್ಯ ಹಾಗೂ ಜಾನಪದ ನೃತ್ಯ ಪ್ರದರ್ಶನ ನೀಡಿ ಹಾಗೂ ಹಲವಾರು ಉತ್ಸವದಲ್ಲಿ ಭಾಗವಹಿಸಿ ರಾಜ್ಯ ಪ್ರಶಸ್ತಿ ರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ನಾಟ್ಯಮಯೂರಿ ಕುಮಾರಿ ಪೃಥ್ವಿ ಎಮ್.ಹೆಗಡೆ ಇವರು1000 ಕ್ಕೂಹೆಚ್ಚು ನೃತ್ಯ ಪ್ರದರ್ಶನ ನೀಡಿ ರಾಜ್ಯ ಹಾಗೂ ಹೊರ ರಾಜ್ಯಗಳ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಹಲವಾರು ರಾಜ್ಯ ಹಾಗೂ ರಾಷ್ಟ್ರೀಯ ಪ್ರಶಸ್ತಿಯನ್ನು ತಾಳಿಕೋಟಿಗೆ ತಂದು ಕೊಟ್ಟಿರುವ ವಿದ್ಯಾರ್ಥಿನಿಗೆ ಈಗ ಕರ್ನಾಟಕ ಸರ್ಕಾರ ಬಾಲವಿಕಾಸ ಅಕಾಡೆಮಿ ಧಾರವಾಡ ನಿಡುವ ಬಾಲಗೌರವ ಪ್ರಶಸ್ತಿ ಲಭಿಸಿದೆ. ಶ್ರೀ ವಿರಕ್ತೇಶ್ವರ ಭರತನಾಟ್ಯ ತರಬೇತಿ ಸಂಸ್ಥೆ (ರಿ) ತಾಳಿಕೋಟಿ ಅಧ್ಯಕ್ಷ ವಿನೋದಕುಮಾರ ಚಿಕ್ಕಮಠ ಹಾಗೂ ಎಲ್ಲಾ ಪದಾಧಿಕಾರಿಗಳು, ಸಮಸ್ತ ತಾಳಿಕೋಟಿ ಜನತೆ ಈ ವಿದ್ಯಾರ್ಥಿನಿಯ ಸಾಧನೆಗೆ ಅಭಿನಂದನೆ ಸಲ್ಲಿಸಿದ್ದಾರೆ.

## ಹಮ್ಮಿಗ ಕವಿತಾ ಕೆ.ಸೆಟ್ (ಏ ಖ ಇಖ) ಪರೀಕ್ಷೆಯಲ್ಲಿ ಸಾಧನೆ

**ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :** ತಾಲ್ಲೂಕಿನ ಮೋರನಹಳ್ಳಿ ಗ್ರಾಮದ ಹಮ್ಮಿಗ ಕವಿತಾ ಇತ್ತೀಚೆಗೆ ನಡೆ ಕೆ.ಸೆಟ್ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶದೊಂದಿಗೆ ತೇರ್ಗಡೆಯಾಗಿ ಬೆಂಗಳೂರಿನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಪ್ರಮಾಣ ಪತ್ರ ಪಡೆದುಕೊಂಡಿದ್ದಾರೆ. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡ ಕವಿತಾ ಮೋರನಹಳ್ಳಿ ಗ್ರಾಮದ ಅಜ್ಜ ಕೃಷಿ ಕುಟುಂಬದ ದಿ.ನಿಂಗಪ್ಪ ಹೊರಪೇಟಿ ಅವರ ಆಶ್ರಯದಲ್ಲಿ ವಿದ್ಯಾಭ್ಯಾಸ ಮುಗಿಸಿ ಗ್ರಾಮದ ಕೀರ್ತಿ ಬೆಳಗಿದ್ದಾಳೆ.ಓದಿನಲ್ಲಿ ಚುರುಕಾಗಿದ್ದ ಕವಿತಾ ಪ್ರಾಥಮಿಕ ಶಿಕ್ಷಣವನ್ನು ಹೊನ್ನೂರು ಮತ್ತು ಮೋರನಹಳ್ಳಿ ಸರ್ಕಾರಿ ಶಾಲೆಯಲ್ಲಿ, ಸರಕಾರಿ ಬಾಲಕಿಯರ ಶಾಲೆ ಅಳವಂಡಿಯಲ್ಲಿ ಪ್ರೌಢ ಶಿಕ್ಷಣ, ಮುಂಡರಗಿಯ ಜೆ.ಎ.ಕಾಲೇಜುನಲ್ಲಿ ಪಿಯುಸಿ,ಕೆ.ಆರ್ .ಬೆಲ್ಲದ ಪದವಿ ವಿಶ್ವವಿದ್ಯಾಲಯದಲ್ಲಿ ಬಿ.ಎ ಪದವಿ ಪಡೆದು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಕನ್ನಡ ವಿಷಯದಲ್ಲಿ ಎಂ.ಎ ಸ್ನಾತಕೋತ್ತರ ಪದವಿ ಪಡೆದು–ಕೊಂಡು ಪದ್ಮಶ್ರೀ ಭೀಮಮ್ಮ ಅವರ ಸಾಧನೆಯ ಕುರಿತಾದ ಕಿರು ಪ್ರಬಂಧ ಮಂಡಿಸಿ ವಿಶ್ವ ವಿದ್ಯಾಲಯದಲ್ಲಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಎಲ್ಲಾ ಹಂತದಲ್ಲೂ ಉತ್ತಮ ಫಲಿತಾಂಶದೊಂದಿಗೆ ತೇರ್ಗಡೆಯಾಗಿ ರಾಷ್ಟ್ರ ಮಟ್ಟದ ಶಿಷ್ಯವೇತನ ಪಡೆದುಕೊಂಡಿದ್ದಾಳೆ.ಅಷ್ಟೇ ಅಲ್ಲದೆ ಯಾವುದೇ ತರಬೇತಿ,ಕಾರ್ಯಾಗಾರ ಇಲ್ಲದೆ ಓಇಖ ಪರೀಕ್ಷೆಯಲ್ಲೂ ಪಾಸಾಗಿದ್ದು ಇತ್ತಿಚೆಗೆ ನಡೆದ ಏ ಖಇಖ ನಲ್ಲೂ ಮೊದಲ ಪ್ರಯತ್ನದಲ್ಲೆ ಪಾಸಾಗಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರಳಾಗಿದ್ದಾಳೆ.ಬಿಡುವಿನ ಸಮಯದಲ್ಲಿ



**ಕೆ.ಎ.ಎಸ್ ಕನಸು:**

ಅಜ್ಜ ಮತ್ತು ತಾಯಿಯ ಆಸೆಯಂತೆ ಉನ್ನತ ಹುದ್ದೆಯನ್ನು ಅಲಂಕರಿಸುವ ಆಶಯದೊಂದಿಗೆ ನಿರಂತರ ಪರಿಶ್ರಮದಿಂದ ಓದು ಮುಂದುವರೆಸಿದ್ದಾರೆ. ಕೆ.ಎ.ಎಸ್ ಕನಸು ಹೊತ್ತ ಕವಿತಾಳಿಗೆ ನಿಮ್ಮ ಶುಭ ಹಾರೈಕೆ ಇರಲಿ.ಈಗಾಗಲೇ ಕಲಬುರಗಿಯಲ್ಲಿ ಅಜೀಂ ಪ್ರೇಮಜಿ ಫೌಂಡೇಶನ್ ಸಹಯೋಗದೊಂದಿಗೆ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಸಾಧನೆಗೆ ಬಡತನ ಅಡ್ಡಿಯಲ್ಲ ಎಂಬುದಕ್ಕೆ ಇವರೆ ಸಾಕ್ಷಿ ತಾಯಿ ಕೂಲಿಯೊಂದಿಗೆ ಬದುಕುಕಟ್ಟಿ–ಕೊಂಡಿದ್ದು ಮಗಳ ಸಾಧನೆ ಕಂಡು ಹರ್ಷ ವ್ಯಕ್ತಪಡಿಸಿದ್ದಾರೆ.ಸಲಹೆ ಮಾರ್ಗದರ್ಶನ ನೀಡಿದ ಗುರುಬಳಗಕ್ಕೆ ಧನ್ಯತೆಯನ್ನು ತಿಳಿಸಿದ್ದಾರೆ.

# ಶೈಕ್ಷಣಿಕ ಸಂಸ್ಥೆಗಳ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳ ಮಾರಾಟವಾಗದಂತೆ ನಿಗಾವಹಿಸಿ:ಜಿಲ್ಲಾಧಿಕಾರಿ

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**
ಜಿಲ್ಲೆಯಲ್ಲಿನ ಶಾಲಾ,ಕಾಲೇಜು ಹಾಗೂ ವಿದ್ಯಾ ಸಂಸ್ಥೆಗಳ ಆವರಣದಿಂದ ನೂರು ಮೀಟರ್ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳ ಮಾರಾಟ ಹಾಗೂ ಬಳಕೆ ಮಾಡದಂತೆ ಕಟ್ಟುನಿಟ್ಟಿನ ನಿಗಾ ಇಡುವಂತೆ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.




ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದಲ್ಲಿ ಇಂದು ತಂಬಾಕು ನಿಯಂತ್ರಣ ಕಾಯ್ದೆ ಗಳು ಅನುಷ್ಠಾನ ಕುರಿತಂತೆ ತಾಲೂಕು ಮಟ್ಟದ ಹಾಗೂ ಪ್ರಾಧಿಕೃತ ತನಿಖಾಧಿಕಾರಿಗಳಿಗೆ ಏರ್ಪಡಿಸಲಾಗಿದ್ದ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಹಾಗೂ ಯುವಜನಾಂಗ ತಂಬಾಕು ಉತ್ಪನ್ನಗಳ ಸೇವನೆಯಿಂದ ದೂರವಿರಬೇಕು. ಮದ್ಯಪಾನ, ಮಾದಕವಸ್ತುಗಳು ಹಾಗೂ ಈ ತಂಬಾಕು ಉತ್ಪನ್ನಗಳ ಸೇವನೆಯಿಂದಾಗುವ ದುಷ್ಪರಿಣಾಮ ಘೋರವಾಗಿದ್ದು, ಕ್ಯಾನ್ಸರ್ ಹಾಗೂ ಸಾವಿಗೂ ಕಾರಣವಾಗುವುದರಿಂದ ಇದರಿಂದ ದೂರ ಇರುವಂತೆ ಅವರು ಸಲಹೆ ನೀಡಿದರು.

ತಂಬಾಕು ನಿಯಂತ್ರಣ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಅನಧಿಕೃತವಾಗಿ ತಂಬಾಕು, ತಂಬಾಕು ಉತ್ಪನ್ನಗಳ, ಮಾರಾಟ ಮಾಡುವವರ, ಕಾಯ್ದೆ ಅನ್ವಯ ಮಾಹಿತಿ ಫಲಕ ಹಾಕದೇ ಇರುವವರ ವಿರುದ್ಧ ನಿರಂತರ ದಾಳಿ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕು. ಶೈಕ್ಷಣಿಕ ಸಂಸ್ಥೆಗಳ ವ್ಯಾಪ್ತಿಯಲ್ಲಿ, ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು. ಆಶಾ, ಅಂಗನವಾಡಿ ಕಾರ್ಯಕರ್ತೆಯರು,ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ, ನಗರ ಸ್ಥಳಿಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸೂಕ್ತ ಅರಿವು ಮೂಡಿಸುವಂತೆ ಅವರು ಸೂಚಿಸಿದರು.

ರಾಜ್ಯ ತಂಬಾಕು ನಿಯಂತ್ರಣ ಘಟಕದ ವಿಭಾಗೀಯ ಸಂಯೋಜಕ ಶ್ರೀ ಮಹಾಂತೇಶ ಉಳ್ಳಾಗಡ್ಡಿ ಅವರು ಕೋಟ್ಪಾ ಕಾಯ್ದೆ –2003 ರಿಂದ ಜಾರಿಯಲ್ಲಿದೆ. ಕೋಟ್ಪಾ ತಿದ್ದುಪಡಿ 2024 ಕಾಯ್ದೆ ಅನ್ವಯ ದಂಡ ಹಾಗೂ ಶಿಕ್ಷೆಗೆ ಅವಕಾಶವಿದೆ. ತಂಬಾಕು ನಿಯಂತ್ರಣ ಕಾಯ್ದೆ ಉಲ್ಲಂಘನೆ ಶಿಕ್ಷಾರ್ಹ ಅಪರಾಧ ಹಾಗೂ 1000 ರೂ. ಗಳವರೆಗೆ ದಂಡವಿದೆ. 21 ವರ್ಷದೊಳಗಿನ ಮಕ್ಕಳು ಬೀಡಿ, ಸಿಗರೇಟು,ಗುಟಖಾ

ತಂಬಾಕು ಉತ್ಪನ್ನಗಳ ಸೇವಿಸಬಾರದು ಹಾಗೂ ಮಾರಾಟ ಮಾಡಬಾರದು. ಸಾರ್ವಜನಿಕ ಸ್ಥಳಗಳಲ್ಲಿ ಧೂಮ್ರಪಾನ, ತಂಬಾಕು ಉತ್ಪನ್ನಗಳ ಸೇವನೆಗೆ ನಿಷೇಧವಿದ್ದು, ಪಾನ್ ಗುಟ್ಕಾ ಉಗುಳುವದಕ್ಕೂ ಕಾಯ್ದೆಯಡಿ ದಂಡ ಶಿಕ್ಷೆಗೆ ಅವಕಾಶವಿದೆ. ಶ್ರೀ ವಿಜಯಕುಮಾರ್ ಅವರೂ ಈ ವಿವಿಧ ಕಾಯ್ದೆಗಳ ಕುರಿತು ಮಾಹಿತಿ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಮಹೇಶ್ ಬಿರಾದಾರ ಮಾತನಾಡಿದರು. ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಮಲ್ಲಪ್ಪ, ತಾಲೂಕು ಆರೋಗ್ಯಾಧಿಕಾರಿ ಹಣುಮಂತ ರೆಡ್ಡಿ,ಡಿಎ ಕಾರ್ಯಕ್ರಮ ಅಧಿಕಾರಿ ಬಾ.ಪದ್ಮಾನಂದ ಗಾಯಕವಾಡ, ಜಿಲ್ಲಾ ಕನ್ಸಲ್ಟಂಟ್ ಮಹಾಲಕ್ಷ್ಮಿ ಸಜ್ಜನ್ ಉಪಸ್ಥಿತರಿದ್ದರು.ಉಪ ಆರೋಗ್ಯ ಶಿಕ್ಷಣಾಧಿಕಾರಿ ತುಳಸಿರಾಮ ಸ್ವಾಗತಿಸಿ, ವಂದಿಸಿದರು. ಇದೇ ಸಂದರ್ಭದಲ್ಲಿ ರಾಜ್ಯ ಮಟ್ಟದ ಯುವಜನೋತ್ಸವ ಯಶಸ್ವಿಯಾಗಿ ನೆರವೇರಿಸಿದ್ದಕ್ಕಾಗಿ ಕ್ರೀಡಾಧಿಕಾರಿ ರಾಜು ಬಾವಿಹಳ್ಳಿ ಅವರಿಗೆ ಸನ್ಮಾನಿಸಲಾಯಿತು.

# ಬೆಳೆ ಹಾನಿ ಪರಿಹಾರದಲ್ಲಿ ರೈತರಿಗೆ ಅನ್ಯಾಯ: ಚವ್ಹಾಣ

**ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**
2025–26ನೇ ಸಾಲಿನಲ್ಲಿ ಅತೀವೃಷ್ಠಿಯಿಂದ ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕುಗಳು ಒಳಗೊಂಡು ಔರಾದ(ಬಿ) ಕ್ಷೇತ್ರದಲ್ಲಿ 28 ಜಾನುವಾರು ಜೀವಹಾನಿ, 435 ಮನೆ ಹಾನಿ, 45153 ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ಕಂದಾಯ ಸಚಿವರಾದ ಕೃಷ್ಣ ಭೈರೇಗೌಡ ಅವರು ಮಾಹಿತಿ ನೀಡಿದ್ದಾರೆ.



ಬೆಳಗಾವಿ ಅಧಿವೇಶನದಲ್ಲಿ ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಅತೀವೃಷ್ಠಿ ಕುರಿತು ಕೇಳಿದ ಚುಕ್ಕೆಗುರುತಿಲ್ಲದ ಪ್ರಶ್ನೆಗೆ ಸಚಿವರು ಲಿಖಿತ ಉತ್ತರ ನೀಡಿದ್ದಾರೆ. ಉತ್ತರಿಂದ ಬೇಸರಗೊಂಡಿರುವ ಶಾಸಕರು, ಆಗಸ್ಟ್ ಮಾಹೆಯಲ್ಲಿ ಸುರಿದ ಭಾರಿ ಮಳೆಯಿಂದಾಗಿ ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕುಗಳಲ್ಲಿ ಅಪಾರ ಪ್ರಮಾಣದ ಹಾನಿಯಾಗಿದೆ. ಒಂದೇ ದಿನ 300 ಎಂಎಂ ಗಿಂತ ಹೆಚ್ಚಿನ ಮಳೆ ದಾಖಲಾಗಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲೇ ಅತಿ ಹೆಚ್ಚಿನ ಹಾನಿ ಔರಾದ(ಬಿ) ಕ್ಷೇತ್ರದಲ್ಲಾಗಿದೆ. ಅತೀವೃಷ್ಠಿ ಸಂದರ್ಭದಲ್ಲಿ ನಾನು ಹಾನಿ ಪೀಡಿತ ಪ್ರದೇಶದಲ್ಲಿ ಸಂಚರಿಸಿ ಜನರ ಸಮಸ್ಯೆಗಳನ್ನು ಆಲಿಸಿದ್ದೇನೆ. 80 ರಿಂದ 85 ಪ್ರತಿಶತ ಬೆಳೆ ಹಾನಿಯಾಗಿದೆ. ಆದರೆ ಸಚಿವರು ಕಡಿಮೆ ಪ್ರಮಾಣದ ಹಾನಿ ತೆ–ೋರಿಸಿ ತಪ್ಪು ಮಾಹಿತಿ ನೀಡಿದ್ದಾರೆ ಎಂದು ಕಿಡಿ ಕಾರಿದ್ದಾರೆ.

ಭಾರೀ ಮಳೆಯಿಂದ ಕ್ಷೇತ್ರದಲ್ಲಿನ ರಸ್ತೆ, ಸೇತುವೆ, ಕೆರೆ, ಕಟ್ಟೆಗಳು, ಬಂದಾರ, ಬ್ರಿಜ್ ಕಂ ಬ್ಯಾರೇಜ್ ಗಳು, ಶಾಲೆ, ಅಂಗನವಾಡಿ ಕೇಂದ್ರ ಸೇರಿದಂತೆ ಹಲವು ಸರ್ಕಾರಿ ಕಛೇರಿಗಳು, ವಿದ್ಯುತ್ ಕಂಬ, ವಿದ್ಯುತ್ ಪರಿವರ್ತಕಗಳು ಹಾಳಾಗಿವೆ. ರೈತರು ಬೆಳೆದಿದ್ದ ಉದ್ದು, ಹೆಸರು, ಸೋಯಾ, ತೊಗರಿ, ಹತ್ತಿ ಸೇರಿದಂತೆ ಎಲ್ಲ ಬೆಳೆಗಳು ಮುಳುಗಡೆಯಾಗಿವೆ. ಜಾನುವಾರುಗಳು ನೀರಿನಲ್ಲಿ ಹರಿದುಕೊಂಡು ಹೋಗಿವೆ. ನೂರಾರು ಕೋಟಿಯ ನಷ್ಟ ಸಂಭವಿಸಿದೆ. ನಿರೀಕ್ಷೆಯಷ್ಟು ಪರಿಹಾರ ರೈತರಿಗೆ ಸಿಕ್ಕಿಲ್ಲ.

ಅಧಿಕಾರಿಗಳು ಹಾನಿ ಸಮೀಕ್ಷೆಯನ್ನು ಸಮರ್ಪಕವಾಗಿ ನಡೆಸದೆ ಕಛೇರಿಯಲ್ಲಿ ಕುಳಿತು ವರದಿ ಮಾಡಿದ್ದಾರೆ. ಕಂದಾಯ ಇಲಾಖೆಯ ಸಿಬ್ಬಂದಿ ಬೆಳೆ ಸಮೀಕ್ಷೆಗೂ ರೈತರಿಂದ ಹಣ ವಸೂಲಿ ಮಾಡಿದ್ದಾರೆ. ಹಣ ಕೊಟ್ಟವರಿಗೆ ಮಾತ್ರ ಪರಿಹಾರ ಬಂದಿದೆ ಎಂದು ರೈತರು ಗೋಳು ಹಂಚಿಕೊಂಡಿದ್ದಾರೆ. ಪರಿಹಾರ ವಿತರಣೆಯಲ್ಲಿ ಸಾಕಷ್ಟು ತಾರತಮ್ಯವಾಗಿದೆ. ಒಂದು ಎಕರೆಯ ರೈತನಿಗೂ ಮತ್ತು 8 ಎಕರೆಯ ರೈತನಿಗೂ ಒಂದೇ ಮೊತ್ತದ ಪರಿಹಾರ ಹಣ ಜಮೆಯಾಗಿರುವುದು ಹಲವು ಕಡೆ ನಡೆದಿದೆ.

ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಅನೇಕ ರೈತರು ಸರ್ಕಾರದ ಪರಿಹಾರವೂ ಸಿಗದೇ ದಿಕ್ಕುತೋಚದೆ ಪರದಾಡುತ್ತಿದ್ದಾರೆ. ಅತಿಯಾದ ಮಳೆಯಿಂದಾಗಿ ಸಾಕಷ್ಟು ಹಾನಿಯಾದ ಔರಾದ(ಬಿ) ಕ್ಷೇತ್ರವನ್ನು ಹಾನಿ ಪೀಡಿತ ಪ್ರದೇಶವೆಂದು ಘೋಷಿಸಿ ವಿಶೇಷ ಪ್ಯಾಕೇಜ್ ನೀಡುವಂತೆ ಮುಖ್ಯಮಂತ್ರಿಗಳು ಮತ್ತು ಸಚಿವರಿಗೆ ಮನವಿ ಸಲ್ಲಿಸಿದ್ದೆ. ಸರ್ಕಾರ ರೈತರ ಕಷ್ಟಗಳಿಗೆ ಸರಿಯಾಗಿ ಸ್ಪಂದಿಸಿಲ್ಲ. ಕೃಷಿ, ತೋಟಗಾರಿಕೆ, ಕಂದಾಯ ಸಚಿವರು ಸೌಜನ್ಯಕ್ಕಾದರೂ ಔರಾದ(ಬಿ) ಕ್ಷೇತ್ರಕ್ಕೆ ಭೇಟಿ ಕೊಟ್ಟಿಲ್ಲ ಎಂದು ಸರ್ಕಾರದ ವಿರುದ್ಧ ಬೇಸರ ಹೊರಹಾಕಿದ್ದಾರೆ.

ಅಧಿಕಾರಿಗಳು ವಾಸ್ತವ ಅಂಶಗಳನ್ನು ಮುಚ್ಚಿಟ್ಟು ನೀಡಿರುವ ಮಾಹಿತಿಯನ್ನು ಪರಿಶೀಲಿಸದೇ ಸಚಿವರು ಸದನಕ್ಕೆ ನೀಡಿದ್ದಾರೆ. ಅತ್ಯಂತ ಗಂಭೀರವಾಗಿರುವ ಬೆಳೆ ಹಾನಿ ಸಮೀಕ್ಷೆ ಕಾರ್ಯಕ್ಕೆ ಔರಾದ(ಬಿ) ವಿಧಾನಸಭಾ ಕ್ಷೇತ್ರದಲ್ಲಿ ನಿರ್ಲಕ್ಷ್ಯವಹಿಸಲಾಗಿದೆ. ಬೆಳೆ ಹಾನಿ ಪರಿಹಾರದಲ್ಲಿ ರೈತರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಸರ್ಕಾರವನ್ನು ಕೋರಲಾಗಿದೆ ಎಂದು ಶಾಸಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬ್ರಹ್ಮಯ್ಯ ನಾಯ್ಡುಗೆ ಸಸ್ಟೇಬಲ್ ಅಗ್ರಿಕಲ್ಚರ್ ಅವಾರ್ಡ್

**ಮಲ್ಲಮ್ಮ ನುಡಿ ವಾರ್ತೆ**
**ಬಳ್ಳಾರಿ:** ಕ್ರಿಮಿನಾಶಕ ಸಿಂಪರಣೆ ರಹಿತ, ಸಾವಯವ ಒಣ ಮೆಣಸಿನಕಾಯಿಯನ್ನು ಮಾರಾಟ ಮಾಡುವ ದೇಶದ ಗಮನ ಸೆಳೆದ ಇಲ್ಲಿನ ಮಾತೃ ಭೂಮಿ ಸ್ಪೈಸಿಸ್ ಪ್ರೈವೇಟ್ ಲಿಮಿಟೆಡ್ ನ ಸಂಸ್ಥಾಪಕ ಅಧ್ಯಕ್ಷ ಬ್ರಹ್ಮಯ್ಯ ನಾಯ್ಡು ಅವರಿಗೆ, ಎಫ್ ಐಸಿಸಿಐ ಸಂಸ್ಥೆಯು ದೆಹಲಿಯಲ್ಲಿ 5ನೇ ಸಸ್ಟೆಬಲ್ ಅಗ್ರಿಕಲ್ಚರ್ ಅವಾರ್ಡ್ ನ್ನು ನೀಡಿ ಗೌರವಿಸಿದೆ. ಈ ಕುರಿತು ಬುಧವಾರ ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ 2009ರಲ್ಲಿ ಪ್ರಾರಂಭಿಸಿದ ನಮ್ಮ ಮಾತೃಭೂಮಿ ಆಗ್ರೋ ಸಂಸ್ಥೆಯು,ರಾಯಚೂರು,ಬಳ್ಳಾರಿ ಸೇರಿದಂತೆ ನಾನಾ ಕಡೆ ಮೆಣಸಿನಕಾಯಿ ಬೆಳೆ ಬೆಳೆಯುವ ರೈತರೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಕಳೆದ ಮಾರ್ಚ 2025ರ ಅವಧಿಯಲ್ಲಿ ಸುಮಾರು 130 ಕೋಟಿ ರೂ. ವಹಿವಾಟು ನಡೆಸಿದೆ. ಸದ್ಯ 3500 ಸಾವಿರ ರೈತರೊಂದಿಗೆ




ಸಂಪರ್ಕದಲ್ಲಿದ್ದು, ನಾವು ಹೇಳಿದಂತೆ ಬೆಳೆದ ಗುಣಮಟ್ಟದ ಉತ್ಪನ್ನವನ್ನು ಖರೀದಿಸಿ, ರೈತರಿಗೆ ಹೆಚ್ಚಿನ ಆದಾಯವನ್ನು ನೀಡಲು ನಮ್ಮ ಸಂಸ್ಥೆ

ಪ್ರಾಮಾಣಿಕವಾಗಿ ಶ್ರಮಿಸುತ್ತಿದೆ. ಖರೀದಿಸಿದ ಒಣ ಮೆಣಸಿನಕಾಯಿಗೆ ಬೇಡಿಕೆ ಹೆಚ್ಚಿದ್ದು, ಸದ್ಯ ನಮ್ಮ ದೇಶದಲ್ಲಿ ಮಾತ್ರ

ಮಾರಾಟ ಮಾಡಲಾಗುತ್ತಿದೆ. ಪ್ಯಾನ ಇಂಡಿಯಾ, ಎಂಟಿಆರ್, ಆಚ್ಚಿ, ಐಟಿಸಿ, ಒಲಂ, ಸಿಂಥೈಟ್ ಸೇರಿದಂತೆ ನಾನಾ ಕಂಪನಿಗಳಿಗೆ ಮಾರಾಟ ಮಾಡಲಾಗುತ್ತಿದೆ. ಮೆಣಸಿನಕಾಯಿ ಬೆಳೆ ಬೆಳೆಯುವುದು ಕಷ್ಟದ ಕೆಲಸ, ಕ್ರಿಮಿನಾಶಕ, ರಸಗೊಬ್ಬರ ಹೆಚ್ಚಿನ ಪ್ರಮಾಣದಲ್ಲಿ ಇತ್ತೀಚೆಗೆ ಬಳಸುತ್ತಿರುವುದು ಸಾಮಾನ್ಯವಾಗಿದೆ. ಇದರಿಂದ ಆರೋಗ್ಯದ ಮೇಲೆ ಸಾಕಷ್ಟು ಪರಿಣಾಮ ಬೀರಲಿದೆ, ಈ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿದ್ದ ನಾನು ಸ್ವಂತ ಕಂಪನಿ ಸ್ಥಾಪಿಸಿ, ಸಾವಯವ,

ಕ್ರಿಮಿನಾಶಕರಹಿತ ಮೆಣಸಿನಕಾಯಿ ಬೆಳೆದು, ಮಾರಾಟ ಮಾಡಬೇಕು ಎನ್ನುವ ಕನಸು ನನ್ನದಾಗಿತ್ತು. ಈ ಹಿನ್ನೆಲೆಯಲ್ಲಿ ನಮ್ಮ ರೈತರ ಸಹಕಾರದಿಂದ ನಮ್ಮ ಸಂಸ್ಥೆ ಬೆಳೆಯಲು ಪ್ರಾರಂಭಿಸಿದೆ. ಈ ಮೆಣಸಿನಕಾಯಿಗೆ ವಿದೇಶದಲ್ಲೂ ಹೆಚ್ಚು ಬೇಡಿಕೆಯಿದೆ. ಆದರೆ, ನಾವು ಸದ್ಯ ನಮ್ಮ ದೇಶದಲ್ಲಿ ಮಾತ್ರ ವಹಿವಾಟು ಮಾಡುತ್ತಿದ್ದೇವೆ. ಯಾವುದೇ ರೈತರಿಂದ ಖರಿಸಿದರೂ ಅದನ್ನು ಮತ್ತೆ ಟೆಸ್ಟಿಂಗ್ ಕಳಿಸಿ, ವರದಿ ಬಂದ ಬಳಿಕವೇ ಖರೀದಿಸಲಾಗುವುದು. ಸದ್ಯ ಬಳ್ಳಾರಿ ಸುತ್ತಮುತ್ತ 88 ಹಳ್ಳಿಗಳಲ್ಲಿ ನಮ್ಮ ರೈತರು ಬೆಳೆಯುತ್ತಿದ್ದಾರೆ. ಖರ್ಚು ಕಡಿಮೆ, ಇಳುವರಿ,

ಆದಾಯ ಹೆಚ್ಚು ನೀಡುವ ರೀತಿಯಲ್ಲಿ ಸಂಸ್ಥೆ ಶ್ರಮಿಸುತ್ತಿದೆ. ಪ್ರತಿ ಎಕರೆಗೆ 20 ಕ್ವಿಂಟಾಲ್ ಇಳುವರಿ

ಬರುತ್ತಿದೆ. ನಮ್ಮ ಸಂಸ್ಥೆಯ ಶ್ರಮವನ್ನು ಗುರುತಿಸಿ ದೆಹಲಿಯಲ್ಲಿ ನೀಡಿದ ಅವಾರ್ಡ್ ನ್ನೂ ನಮ್ಮ ರೈತರಿಗೆ ಸಮರ್ಪಿಸುವೆ. ರಾಜ್ಯದಲ್ಲೇ ಈ ಅವಾರ್ಡ್ ಗೆ ಭಾಜನವಾದ ಏಕೈಕ ಸಂಸ್ಥೆ ನಮ್ಮದು ಎಂದು ಹೇಳಲು ಹೆಮ್ಮೆ ತರಿಸಿದೆ ಎಂದರು.

# ವಿದ್ಯಾರ್ಥಿಗಳು ನಾಯಕತ್ವ ಗುಣ ಬೆಳೆಸಿಕೊಳ್ಳಿ: ಪ್ರೊ.ಎಂ ಮುನಿರಾಜು



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**
ವಿದ್ಯಾರ್ಥಿಗಳಲ್ಲಿ ಸಮಾಜ ಸೇವೆ, ನಾಯಕತ್ವಗುಣ ಹಾಗೂ ಸಾಮಾಜಿಕ ಸೇವಾ ಮನೋಭಾವ ಬೆಳೆಸಲು ರಾಷ್ಟ್ರೀಯ ಸೇವಾ ಯೋಜನೆಯು ಹಗಲಿರುಳು ಶ್ರಮಿಸುತ್ತಿದೆ ಎಂದು ವಿಶ್ರೀಕೃವಿವಿ ಕುಲಪತಿಗಳಾದ ಪ್ರೊ ಎಂ ಮುನಿರಾಜು ಹೇಳಿದರು.

ವಿಶ್ವವಿದ್ಯಾಲಯದ ಡಾ. ಬಿ ಆರ್ ಅಂಬೇಡ್ಕರ್ ಸಭಾಂಗಣದಲ್ಲಿ ವಿವಿ ರಾಷ್ಟ್ರೀಯ ಸೇವಾ ಯೋಜನೆ ಕೋಶವು ಆಯೋಜಿಸಿದ್ದ ವಿಶ್ವವಿದ್ಯಾಲಯ ಮಟ್ಟದ ರಾಷ್ಟ್ರೀಯ ಸೇವಾ ಯೋಜನೆಯ 2023–24ನೇ ಸಾಲಿನ ಉತ್ತಮ ಎನ್ಎಸ್ಎಸ್. ಘಟಕ ಕಾರ್ಯಕ್ರಮ ಅಧಿಕಾರಿಗಳು ಮತ್ತು ಸ್ವಯಂ ಸೇವಕ/ಸೇವಕಿಯರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ವಿವಿ ವ್ಯಾಪ್ತಿಗೆ ಒಳಪಡುವ ರಾ.ಸೇ.ಯೋ. ಘಟಕಗಳನ್ನು ಹೊಂದಿರುವ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ಮತ್ತು ಘಟಕಗಳ ಕಾರ್ಯಕ್ರಮಧಿಕಾರಿಗಳಿಗೆ 'ಒಂದು ದಿನದ ನಾಯಕತ್ವ ತರಬೇತಿ ಶಿಬಿರ'ವನ್ನು ಗಣ್ಯರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಚಾಲನೆ ನೀಡಿದರು.

ನಾಯಕತ್ವ ಗುಣ ಎಲ್ಲರಲ್ಲೂ ಕಾಣಲು ಸಾಧ್ಯವಿಲ್ಲ. ನಾಯಕತ್ವವನ್ನು ವಹಿಸಿಕೊಂಡಾಗ ನಾಯಕತ್ವದ ಪ್ರಜ್ಞೆ ಬೆಳೆಯುತ್ತದೆ. ಎಲ್ಲವನ್ನು ಮೆಟ್ಟಿ ನಿಲ್ಲುವವನೆ ನಿಜವಾದ ನಾಯಕ.

ವಿದ್ಯಾರ್ಥಿಗಳನ್ನು ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿರಿಸದೆ ಸಾಮಾಜಿಕವಾಗಿ ತೊಡಗಿಸಿಕೊಳ್ಳಲು ಶಿಕ್ಷಕರು ಉತ್ತೇಜಿಸಬೇಕು ಎಂದು ಹೇಳಿದರು.

ವಿವಿಯ ಮೌಲ್ಯಮಾಪನ ಕುಲಸಚಿವರಾದ ಪ್ರೊ ಎನ್ ಎಂ ಸಾಲಿ ಮಾತನಾಡಿ, ವಿದ್ಯಾರ್ಥಿಗಳು ಸಾಮಾಜಿಕ ಜವಾಬ್ದಾರಿಯನ್ನು ಅರಿತುಕೊಳ್ಳಬೇಕು ಎಂಬುದು ಮಹಾತ್ಮ ಗಾಂಧೀಜಿಯವರ ಕನಸಾಗಿತ್ತು. ನಾಯಕನಾದವನು ತ್ಯಾಗ ಮನೋಭಾವವನ್ನು ಹೊಂದಿರಬೇಕು. ಎಲ್ಲರೊಂದಿಗೆ ಬೆರೆತು ಎಲ್ಲವನ್ನು ಸರಿದೂಗಿಸಿಕೊಂಡು ಹೋಗುವ ದಿಟ್ಟತನವಿರಬೇಕು ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯ ಮಟ್ಟದ ರಾಷ್ಟ್ರೀಯ ಸೇವಾ ಯೋಜನೆಯ 2023–24ನೇ ಸಾಲಿನ ಉತ್ತಮ ಎನ್ಎಸ್ಎಸ್ ಘಟಕ ಕಾರ್ಯಕ್ರಮ ಅಧಿಕಾರಿಗಳು ಮತ್ತು ಸ್ವಯಂ ಸೇವಕ/ಸೇವಕಿಯರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ರಾ.ಸೇ.ಯೋ. ಸಂಯೋಜನಾಧಿಕಾರಿಗಳಾದ ಡಾ ಕುಮಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ ಆರ್ ವಿ ಚಂದ್ರಶೇಖರ ವೇದಿಕೆಯಲ್ಲಿದ್ದರು.

ಕನ್ನಡ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ ಕೆ ಎಸ್ ಶಿವಕುಮಾರ ನಿರೂಪಿಸಿದರು. ಡಾ ಗಾದೆಪ್ಪ ವಂದಿಸಿದರು.

ವಿವಿಧ ನಿಕಾಯಗಳ ಡೀನರು, ವಿಭಾಗಗಳ ಮುಖ್ಯಸ್ಥರುಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಸಂಶೋಧನಾ ವಿದ್ಯಾರ್ಥಿಗಳು, ವಿದ್ಯಾರ್ಥಿಗಳು ಇದ್ದರು.

# ಹೆಚ್ ಡಿ ಕುಮಾರಸ್ವಾಮಿ ಹುಟ್ಟು ಹಬ್ಬ: ಹಣ್ಣು ಹಾಲು ಬ್ರೆಡ್ಡು ವಿತರಿಸಿದ ಕಾರ್ಯಕರ್ತರು




**ಮಲ್ಲಮ್ಮ ನುಡಿ ವಾರ್ತೆ ವಿಜಯನಗರ:**
ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ರೈತ ನಾಯಕರು ಭಾರತ ಸರ್ಕಾರದ ಬೃಹತ್ ಕೈಗಾರಿಕಾ ಮಂತ್ರಿಗಳಾದ ಎಚ್ ಡಿ ಕುಮಾರಸ್ವಾಮಿ ಅವರ ಜನುಮದಿನದ ಪ್ರಯುಕ್ತ ಇಂದು ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ಪಟ್ಟಣದ ತಾಲೂಕು ಸಾರ್ವಜನಿಕರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಹಣ್ಣು ಹಾಲು ಬ್ರೆಡ್ಡು ವಿತರಿಸಲಾಯಿತು. ಈ ಸಂದರ್ಭದಲ್ಲಿ ಜೆಡಿಎಸ್ ತಾಲೂಕ ಅಧ್ಯಕ್ಷರಾದ ವೈ ಮಲ್ಲಿಕಾರ್ಜುನ್, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರಾದ ಬಾದಾಮಿ ಮೃತ್ಯುಂಜಯ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಅಧ್ಯಕ್ಷರಾದ ಕನ್ನಿಹಳ್ಳಿ ಚಂದ್ರಶೇಖರ್, ಮುಖಂಡರಾದ ಕೃಷ್ಣಮೂರ್ತಿ ಶೆಟ್ಟರ್, ಬಣಕಾರ್ ಕೊಟ್ರೇಶ್, ತಳವಾರ್ ಕೊಟ್ರೇಶ್, ಉಪ್ಪಾರ ಸಮಾಜದ ತಾಲೂಕ ಅಧ್ಯಕ್ಷರಾದ ಕನಕಪ್ಪ, ಪವಡಿ ಸಣ್ಣ ಹನುಮಂತಪ್ಪ, ಗೋಮಾತಾ ಕೊಟ್ರೇಶ್, ಸರ್ದಾರ್ ಯಮನೂರಪ್ಪ, ಬೆಣಕಲ್ ಫಕೀರಪ್ಪ, ಟೈಲರ್ ಚಂದ್ರಶೇಖರ್, ಟಿಪ್ಪು ಸುಲ್ತಾನ್, ಇತರರು ಉಪಸ್ಥಿತಿ ಇದ್ದರು.

# ಬಾಲಮಂದಿರ ಮಕ್ಕಳಿಗೆ ವಿಶೇಷ ಗೌರವ ಪ್ರಶಸ್ತಿ



**ಮಲ್ಲಮ್ಮ ನುಡಿ ಬಾಗಲಕೋಟೆ:**
ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು ವತಿಯಿಂದ ನೀಡಲಾಗುವ 2022–23ನೇ ಸಾಲಿನ ವಿಶೇಷ ಗೌರವ ಪ್ರಶಸ್ತಿಗೆ ಬಾಗಲಕೋಟೆ ಜಿಲ್ಲೆಯ ಸರ್ಕಾರಿ ಬಾಲಮಂದಿರದ ಮಕ್ಕಳು ಆಯ್ಕೆಯಾಗಿದ್ದಾರೆ.

ಸರ್ಕಾರಿ ಬಾಲಕಿಯರ ಬಾಲಮಂದಿರ, ಬಾಗಲಕೋಟೆಯ ಅಂಬಿಕಾ ಎಸ್.ಭೋವೇರ ಹಾಗೂ ಸರ್ಕಾರಿ ಬಾಲಕರ ಬಾಲಮಂದಿರದ 7ನೇ ತರಗತಿ ವಿದ್ಯಾರ್ಥಿ ಸಂಜೀವ ಎಂ.ತೆಗ್ಗಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಅಂಬಿಕಾ 18 ವರ್ಷ ಪೂರ್ಣಗೊಂಡು ಸಂಸ್ಥೆಯಿಂದ ಬಿಡುಗಡೆ ಪಡೆದು ಉನ್ನತ ಶಿಕ್ಷಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, ಸಂಜೀವ ಪ್ರಸ್ತುತ ಸ್ಥಳೀಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬಾಲಮಂದಿರದಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ.

ಈ ಸಾಧನೆಗೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಬಾಲ ನ್ಯಾಯ ಮಂಡಳಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಸಿಬ್ಬಂದಿ ವರ್ಗ, ಬಾಲಮಂದಿರಗಳ ಹಾಗೂ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬಾಲಮಂದಿರದ ಶಿಕ್ಷಕರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ನೆಮ್ಮದಿಗಾಗಿ ಪ್ರವಚನ ಆಲಿಸಿ: ಶರಣ ಶಂಕರಲಿಂಗ ಮಹಾರಾಜರು

**ಮಲ್ಲಮ್ಮ ನುಡಿ ವಾರ್ತೆ**
**ಚಿಟಗುಪ್ಪ:** ಸಂಸ್ಕಾರ ಮತ್ತು ನೆಮ್ಮದಿಗಾಗಿ ಪುರಾಣ, ಪ್ರವಚನ ಆಲಿಸಬೇಕು ಎಂದು ಕಲ್ಲೂಡ, ಸೊಂತ ಮುಲ್ಲಾಮರಿ ತೀರ ಕ್ಷೇತ್ರದ ಅಭಿನವ ಬಾಲಯೋಗಿ ಶ್ರೀ ಶರಣ ಶಂಕರಲಿಂಗ ಮಹಾರಾಜರು ನುಡಿದರು. ತಾಲೂಕಿನ ಮಂಗಲಗಿ ಗ್ರಾಮದ ಲಕ್ಷ್ಮಿದೇವಿ ಮಂದಿರದ ಬಳಿ ನಡೆಯುತ್ತಿರುವ ಸದ್ಗುರು ದತ್ತ ದಿಗಂಬರ ಮಾಣಿಕೇಶ್ವರರ ಭವ್ಯ ರಥ ನಿರ್ಮಾಣದ ನಿಮಿತ್ತವಾಗಿ ಮಹಾ ದಾಸೋಹಿ ಕಲಬುರಗಿಯ ಶರಣಬಸವೇಶ್ವರರ ಪುರಾಣ ಕಾರ್ಯಕ್ರಮವನ್ನು ಉದ್ಘಾಟಿಸಿ ಆಶೀರ್ವಚನ

ನೀಡುತ್ತಾ ಮಾತನಾಡಿದರು. ನಾವೆಲ್ಲರೂ ಜಗತ್ತು ನೋಡಲು ಬಂದವರು. ಈ ಜಗತ್ತನ್ನು ಆನಂದದಿಂದ ನೋಡಬೇಕು. ನಮ್ಮ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕು. ಸಾರ್ಥಕ ಜೀವನಕ್ಕೆ ಪುರಾಣ ಪ್ರವಚನಗಳು ಪೂರಕವಾಗಿವೆ' ಇಂದಿನ ಆಧುನಿಕ ಯುಗದಲ್ಲಿ ಸಂಸಾರದ ತಾಪತ್ರಯ ಜೀವನ ಜಂಜಾಟದಿಂದ ಮಾನಸಿಕವಾಗಿ ಬೇಸರ, ಹತಾಶೆ, ಒತ್ತಡಗಳಿಂದ ದೂರವಾಗಲು ಈ ಪುರಾಣ ಪುಣ್ಯಕಥೆಗಳನ್ನು ಪ್ರತಿಯೊಬ್ಬರು ಆಲಿಸಬೇಕು.

ನೋವನ್ನು ದೂರವಾಗಿಸುವ ಶಕ್ತಿ ಸಂಗೀತಕ್ಕೆ ಇದ್ದು ಇಲ್ಲಿ ಪ್ರವಚನಕಾರರ ಜತೆ ಉತ್ತಮ ಸಂಗೀತ ಕಲಾವಿದರೂ ಆಗಮಿಸಿದ್ದಾರೆ. ಪ್ರತಿದಿನ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಭಕ್ತಾದಿಗಳು ಈ ಧರ್ಮ ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಗೊಳಿಸಬೇಕು.



ಪುರಾಣ ಆಲಿಸುವುದರಿಂದ ಕೆಟ್ಟ ಭಾವನೆಗಳು ದೂರವಾಗಿ ಒಳ್ಳೆಯ ವಿಚಾರಗಳು ಮೂಡುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ವೇದಿಕೆಯಾಗುವುದು. ಮಾನವ ಕಲ್ಯಾಣವೇ ನಮ್ಮ ಗುರಿಯಾಗಿದ್ದು ಎಲ್ಲಾ ಸಮಾಜ ಬಾಂಧವರು ಈ ಪುರಾಣ ಪ್ರವಚನಗಳನ್ನು ಆಲಿಸಬೇಕು ಎಂದರು.

ಪ್ರವಚನಕಾರ ಶರಣಕುಮಾರ ಶಾಸ್ತ್ರಿ ಹಿರೇಮಠ, ಬರಮಶೆಟ್ಟಿ ಪಾಟೀಲ ತಡಕಲ ಸಂಗೀತ ಸೇವೆ ಸಲ್ಲಿಸಿದರು. ಷಣ್ಮುಖಯ್ಯ ಸ್ವಾಮಿ ಗಳಕಿ ಅವರು ತಬಲಾ ಸಾಥ ನೀಡಿದರು. ಇಶಾಂತ ಮಹಾರಾಜ ಸೇರಿದಂತೆ ಮಂಗಲಗಿ ಸುತ್ತ ಮುತ್ತಲಿನ ಗ್ರಾಮದ ಸದ್ಭಕ್ತರು ಇದ್ದರು.

# ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ,ಯುಕೆಜಿಗೆ ಮುನ್ನಡೆ ಬರೆದ ಇಲಾಖೆ



**ಮಲ್ಮನ ನುಡಿ ವಾರ್ತೆ ಮಸ್ಕಿ :**

ಅಂಗನವಾಡಿ ಯೋಜನೆಗೆ ಸುವರ್ಣ ಸಂಭ್ರಮ,ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ನಿರ್ದೇಶನದ ಮೇರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ರಾಜ್ಯದ ಐದು ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ ಎಲ್ ಕೆಜಿ,ಯುಕೆಜಿ ಶಿಕ್ಷಣ ಆರಂಭಿಸಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಯಚೂರು ಶಿಶು ಅಭಿವೃದ್ಧಿ ಯೋಜನೆ ಲಿಂಗಸೂರು ಹಾಗು ಮಸ್ಕಿ ವ್ಯಾಪ್ತಿಯಲ್ಲಿ ಸುಮಾರು 40 ಅಂಗನವಾಡಿ ಕೇಂದ್ರಗಳಲ್ಲಿ ಪೂರ್ವ ಪ್ರಾಥಮಿಕ ತರಗತಿ (ಎಲ್‌ಕೆಜಿ,ಯುಕೆಜಿ) ಗಳನ್ನು ಪ್ರಾರಂಭವಾಗಿದ್ದು.

ಇದರ ಅಂಗವಾಗಿ ತಾಲ್ಲೂಕಿನ ಅಡವಿಭಾವಿತಾಂಡ ಸೇರಿದಂತೆ ಪಟ್ಟಣದ ಗಾಂಧಿನಗರ 3 ಮತ್ತು 4 ಹಾಗೂ ಜನತಾ ಕಾಲೋನಿ,ಕಲ್ಲುಭಾವಿ ಕಟ್ಟೆ ಸೇರಿ ಪಟ್ಟಣದಲ್ಲಿ ಇಂದು ಎರಡು ಕಡೆ ಅಂಗನವಾಡಿ ಕೇಂದ್ರಗಳ ಉದ್ಘಾಟನಾ ಸಮಾರಂಭ ಜರುಗಿತು.

ಖಾಸಗಿ ಶಾಲೆಗಳತ್ತ ಪೋಷಕರು ವಾಲುವುದನ್ನು ತಡೆಯುವುದು,ಅವರ ಮೇಲಿನ ಆರ್ಥಿಕ ಹೊರೆ ಕಡಿಮೆ ಮಾಡುವುದು ಮತ್ತು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕುಸಿಯದಂತೆ ನೋಡಿಕೊಳ್ಳುವುದು ಗುಣಮಟ್ಟದ ಪೂರ್ವ ಪ್ರಾಥಮಿಕ ಶಿಕ್ಷಣ ಬಡಮಕ್ಕಳಿಗೆ ಲಭ್ಯವಾಗಿಸುವುದು ಯೋಜನೆ ಮುಖ್ಯ ಉದ್ದೇಶವಾಗಿದೆ.

ಖಾಸಗಿ ಕಾನ್ವೆಂಟ್‌ಗಳಂತೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಅಂಗನವಾಡಿಗಳಿಗೆ ಪತ್ಯ ಪುಸ್ತಕ,ಎಡಿ ಟಿವಿ,ಪೂರ್ವ ಪ್ರಾಥಮಿಕ ಹಂತದ ಪುಸ್ತಕ,ಅಡ್ಡ ಗೆರೆಗಳ ಪುಸ್ತಕ,ನೀತಿ ಕಥೆಯ ಪುಸ್ತಕ,ಆಟ ಪಾಠ ಹೀಗೆ ಎಲ್ಲವನ್ನೂ ಮಕ್ಕಳಿಗೆ ಇಲ್ಲಿ ಹೇಳಿಕೊಡಲಾಗುತ್ತಿದ್ದು ಎಲ್‌ಕೆಜಿ,ಯುಕೆಜಿ ಆರಂಭದ ಬೆನ್ನಲ್ಲೇ ಮಕ್ಕಳ ಆಗಮನದ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ ಎನ್ನುತ್ತಾರೆ ಶಿವಲಿಲಾ ಹಿರೇಮಠ ಮಸ್ಕಿ ಎ ವಲಯದ ಮೇಲ್ವಿಚಾರಕಿ ಹೇಳಿಕೆ

ಗ್ರಾಮೀಣ ಭಾಗದ ಮಕ್ಕಳು ಎಲ್‌ಕೆಜಿ,ಯುಕೆಜಿ ತರಗತಿಗೆ ಬಂದು ಅಂಗನವಾಡಿ ಕೇಂದ್ರದಲ್ಲಿ ಆಂಗ್ಲ ಭಾಷೆಕಲಿಯುವ ಹೊಸ ಪ್ರಯೋಗವಾಗಿದ್ದು,ಎಲ್ಲರೂ ಪ್ರೋತ್ಸಾಹಿಸಿ ಹೆಚ್ಚು ಮಕ್ಕಳು ಬರುವಾಗೆ ಬೋಧನೆ ಮಾಡಿದಲ್ಲಿ ಇನ್ನೂ ಹೆಚ್ಚಿನ ಅಂಗನವಾಡಿ ಕೇಂದ್ರದಲ್ಲಿ ಈ ತರಗತಿ ಪ್ರಾರಂಭವಾಗುತ್ತದೆ. ಎಲ್ಲರೂ ಇದರ ಪ್ರಯೋಜನ ಪಡೆದುಕೊಳ್ಳಬೇಕು.

ನಾಗರತ್ನ, ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಲಿಂಗಸಗೂರು.

# ವೃತ್ತಿಪರ ಕುಶಲಕರ್ಮಿಗಳಿಗೆ ಸೌಲಭ್ಯಕ್ಕೆ ಅರ್ಜಿ ಅವಧಿ ವಿಸ್ತರಣೆ

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :**

ಜಿಲ್ಲಾ ವಲಯ ಯೋಜನೆಯ "ಜಿಲ್ಲಾ ಉದ್ಯಮ ಕೇಂದ್ರ" ಮತ್ತು "ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಯೋಜನೆ" ಯಡಿ ಗ್ರಾಮೀಣ ಪ್ರದೇಶದ ವೃತ್ತಿನಿರತ ಕುಶಲಕರ್ಮಿಗಳಿಗೆ ಹಿಂದಿನ ವರ್ಷಗಳಲ್ಲಿ ಫಲಾನುಭವಿಗಳ ಲಭ್ಯತೆ ಇಲ್ಲದ ಕಾರಣದಿಂದಾಗಿ ವಿತರಣೆ–ಯಾಗದೆ ಉಳಿದಿರುವ ಈ ಕೆಳಕಂಡ ವರ್ಗವಾರು ಉಪಕರಣಗಳನ್ನು ವಿತರಿಸಲು ಜಿಲ್ಲೆಯ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಪಂಚಾಯತ್ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಉಪ ನಿರ್ದೇಶಕರು (ಗ್ರಾಕೈ) ಮುಕುಂದರೆಡ್ಡಿ ಪಾಟೀಲ ಅವರು ತಿಳಿಸಿದ್ದಾರೆ.

ವೃತ್ತಿ ಹೊಲಿಗೆಯಂತ್ರ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಮಾತ್ರ, ಗೌಂಡಿ ಪರಿಶಿಷ್ಟ ಪಂಗಡ ಪುರುಷರಿಗೆ, ಕಮ್ಮಾರಿಕೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಪುರುಷರಿಗೆ ಮಾತ್ರ ಈ ಕೆಳಕಂಡ ದಾಖಲಾತಿಗಳು ಹಾಗೂ ಷರತ್ತುಗೊಳಪಟ್ಟು ಅರ್ಜಿಸಲ್ಲಿಸಬೇಕು.

ದಾಖಲಾತಿಗಳು ಜನ್ಮ ದಿನಾಂಕ ನಮೂದಿಸಿರುವ ದಾಖಲೆ. (ಅಂಕಪಟ್ಟಿ, ವರ್ಗಾವಣೆ ಪ್ರಮಾಣಪತ್ರ), ಶೈಕ್ಷಣಿಕ ಅರ್ಹತೆ, ಹೊಲಿಗೆಯಂತ್ರಗಳಿಗಾಗಿ ಕನಿಷ್ಠ 8ನೇ ತರಗತಿ ಪಾಸಾಗಿರಬೇಕು ಮತ್ತು ಇತರೆ ಉಪಕರಣಗಳಿಗಾಗಿ ಯಾವುದೇ ಶೈಕ್ಷಣಿಕ ಅರ್ಹತೆ ಇರುವುದಿಲ್ಲ. (ವರ್ಗಾವಣೆ ಪ್ರಮಾಣಪತ್ರ, ಅಂಕಪಟ್ಟಿ), ಜಾತಿ ಪ್ರಮಾಣ ಪತ್ರ. (ಪ.ಜಾ, ಪ.ಪಂ ಮಾತ್ರ), ವಿಕಲಚೇತನ ಪ್ರಮಾಣ ಪತ್ರ. (ವಿಕಲಚೇತನರಾಗಿದ್ದಲ್ಲಿ), ಚಾಲ್ತಿಯಲ್ಲಿರುವ ಪಡಿತರ ಚೀಟಿ ಮತ್ತು ಆಧಾರ ಗುರುತಿನ ಚೀಟಿ, ಪಾಸ್ ಫೋಟೊ, ಪಿಡಿಓ ಅವರಿಂದ ವೃತ್ತಿ ದೃಢೀಕರಣ ಪತ್ರ ಸಲ್ಲಿಸಬೇಕು.

ಷರತ್ತುಗಳು (ಸೂಚನೆಗಳು) : ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳು ಮಾತ್ರ ಅರ್ಜಿಸಲ್ಲಿಸಬೇಕು, ನಗರ ಪ್ರದೇಶದ ಅಭ್ಯರ್ಥಿಗಳಿಗೆ ಅವಕಾಶವಿರುವುದಿಲ್ಲ. ಸರ್ಕಾರಿ ನೌಕರರು ಅಥವಾ ಅವರ ಅವಲಂಬಿತರು ಅರ್ಜಿಸಲ್ಲಿಸಲು ಅರ್ಹರಿರುವುದಿಲ್ಲ. ಆಯಾ ಗ್ರಾಮ ಪಂಚಾಯತಿಯ, ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಂದ, ತಾಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಯವರಿಂದ ವೃತ್ತಿ ಮಾಡುತ್ತಿರುವ ಬಗ್ಗೆ ದೃಢೀಕರಣ ಪತ್ರ. ಹೊಲಿಗೆಯಂತ್ರಕ್ಕಾಗಿ ಪರಿಶಿಷ್ಟ ಪಂಗಡದ ಮಹಿಳೆಯರು ಮಾತ್ರ ಅರ್ಜಿಸಲ್ಲಿಸಬೇಕು. ಇತ–ರೆ ಉಪಕರಣಗಳ ಸೌಲಭ್ಯಕ್ಕೆ ಅಭ್ಯರ್ಥಿಗಳು ಮಾತ್ರ ಸಲ್ಲಿಸಬೇಕು, 3 ವರ್ಷದಲ್ಲಿ ಇಲಾಖೆಯಿಂದ ಈ ವೃತ್ತಿಯ ಉಪಕರಣಗಳನ್ನು ಪಡೆದಿದ್ದರೆ ಅರ್ಜಿಸಲ್ಲಿಸಲು ಅವಕಾಶವಿರುವುದಿಲ್ಲ. ಯಾವುದೇ ಫಲಾನುಭವಿಯು ಕೇವಲ ಒಂದು ಅರ್ಜಿಸಲ್ಲಿಸಲು ಅವಕಾಶವಿರುತ್ತದೆ. ಒಂದು ಕುಟುಂಬದಲ್ಲಿ ಒಬ್ಬರು ಮಾತ್ರ ಅರ್ಜಿಸಲ್ಲಿಸಲು ಅವಕಾಶ ಇರುತ್ತದೆ.

ಅಪ್ಲೋಡ್ ಮಾಡಿದ ಮೂಲ ದಾಖಲಾತಿಗಳು ಸ್ಪಷ್ಟವಾಗಿರಬೇಕು ಇಲ್ಲವಾದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. ಆಯಾ ತಾಲೂಕಿನ ಅರ್ಜಿದಾರರು ಆಯಾ ತಾಲೂಕಿನಲ್ಲಿ ಅರ್ಜಿಸಲ್ಲಿಸಬೇಕು ಇಲ್ಲವಾದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. ಹೊಲಿಗೆಯಂತ್ರಗಳಿಗಾಗಿ 18 ರಿಂದ 50 ವರ್ಷ ಒಳಗಿರಬೇಕು.ಇತರೆ ಉಪಕರಣಗಳಿಗೆ ಕನಿಷ್ಠ 18 ರಿಂದ 50 ವರ್ಷ ಒಳಗಿರಬೇಕು, ಗುರಿಗಿಂತಲೂ ಹೆಚ್ಚಿನ ಅರ್ಹ ಅರ್ಜಿಗಳು ಸ್ವೀಕೃತವಾದಲ್ಲಿ ಆಯ್ಕೆ ಸಮಿತಿ ವತಿಯಿಂದ ಲಾಟರಿ ಮೂಲಕ ಆಯ್ಕೆ ಮಾಡಲಾಗುವುದು. ಆಯ್ಕೆ ಸಮಿತಿಯ ತಿರ್ಮಾನವೇ ಅಂತಿಮವಾಗಿರುವುದು. ಅರ್ಜಿದಾರರು ಆನ್‌ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯ ಮೂಲ ಪ್ರತಿಯನ್ನು ಕಾಯ್ದಿರಿಸಿಕೊಳ್ಳಬೇಕು, ಉಪಕರಣಗಳನ್ನು ಪಡೆಯುವಾಗ ಈ ಕಛೇರಿಗೆ ಸಲ್ಲಿಸಬೇಕು. ವೆಬ್‌ಸೈಟ್ zpyadgiri.karnataka.gov.in, yadgir.nic.in ನಲ್ಲಿ 2025ರ ಡಿಸೆಂಬರ್ 18ರ ಒಳಗೆ ಅರ್ಜಿಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ.08473253791 ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಟ್ರ್ಯಾಕ್ಟರ್ ಬಸ್ ಡಿಕ್ಕಿ: ಗಾಯ

**ಮಲ್ಲಮ್ಮ ನುಡಿ ವಾರ್ತೆ ಜೇವರಗಿ:**

ಕಬ್ಬು ತುಂಬಿದ ಟ್ರ್ಯಾಕ್ಟರ್ ಹಾಗೂ ಬಸ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಹತ್ತಾರು ಜನರಿಗೆ ಗಂಭೀರವಾಗಿ ಗಾಯಗಳಾದ ಘಟನೆ ಮಂಗಳವಾರ ಸಂಜೆ ತಾಲ್ಲೂಕಿನ ನೆಲೋಗಿ ಕ್ರಾಸ್ ಹತ್ತಿರದ ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಸಂಭವಿಸಿದೆ.

ಘಟನೆಯಲ್ಲಿ ಬಸ್‌ನಲ್ಲಿದ್ದ ಪ್ರಯಾಣಿಕರಿಗೆ ಹಾಗೂ ಟ್ರ್ಯಾಕ್ಟರ್ ಚಾಲಕನಿಗೆ ಗಾಯಗಳಾಗಿದ್ದು,

ಕೆಲವರಿಗೆ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿದೆ.

ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿದ ಪರಿಣಾಮ ಬಸ್ ಹಾಗೂ ಟ್ರ್ಯಾಕ್ಟರ್ ತೆರವುಗೊಳಿಸುವಲ್ಲಿ ವಿಳಂಬವಾದ ಕಾರಣ ಹತ್ತಾರು ಕಿ.ಮೀ. ವರೆಗೆ ವಾಹನಗಳು ನಿಂತು ಸಂಚಾರ ದಟ್ಟಣೆ ಉಂಟಾಯಿತು.

ವಿಜಯಪುರ ಹಾಗೂ ಕಲಬುರಗಿ ಕಡೆ ತೆರಳುತ್ತಿದ ಪ್ರಯಾಣಿಕರು ಐದಾರು ಗಂಟೆಗಳ ಕಾಲ ರಸ್ತೆಮೇಲೆ ಕಳೆಯುವಂತಾಯಿತು.

ಘಟನಾ ಸ್ಥಳಕ್ಕೆ ನೆಲೋಗಿ ಪಿಎಸ್ಐ ಚಿದಾನಂದ ಸವದಿ ಹಾಗೂ ಸಿಬ್ಬಂದಿ ಭೇಟಿ ನೀಡಿ,

ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಿ, ಅಪಘಾತದಲ್ಲಿ ಜಖಂಗೊಂಡ ಬಸ್ ಹಾಗೂ ಟ್ರ್ಯಾಕ್ಟರ್‌ನ್ನು ಜೆಸಿಬಿ ಮೂಲಕ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಿದರು. ಘಟನೆ ಕುರಿತು ನೆಲೋಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮತ್ಸ್ಯ ಸಂಜೀವಿನಿಯಿಂದ ಉಪ ಆದಾಯಕ್ಕೆ ಅನುಕೂಲ
## ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಅಮರೇಶ್ ಅಭಿಮತ

**ಮಲ್ಮನ ನುಡಿ ವಾರ್ತೆ ಮಸ್ಕಿ :**



ಸ್ವ ಸಹಾಯ ಒಕ್ಕೂಟದ ಮಹಿಳೆಯರು ಮತ್ಸ್ಯ ಸಂಜೀವಿನಿ ಮೂಲಕ ಉಪ ಆದಾಯ ಕಂಡುಕೊಳ್ಳಬಹುದಾಗಿದೆ ಎಂದು ಮಸ್ಕಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಅಮರೇಶ ಯಾದವ ರವರು ಸಲಹೆ ನೀಡಿದರು.

ತಾಲೂಕಿನ ಗುಡದೂರು ಗ್ರಾಮ ಪಂಚಾಯತಿಯ ಹಸಮಕಲ್ ಗ್ರಾಮದ ಕೆರೆಯಲ್ಲಿ ಮಂಗಳವಾರ ಹಸಮಕಲ್ ಗ್ರಾಮದ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯಡಿ ಶ್ರೀ ಅಂಬಾದೇವಿ ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ ಆಶ್ರಯದಲ್ಲಿ ಮತ್ಸ್ಯ ಸಂಜೀವಿನಿ ಯೋಜನೆಯಡಿ ಕೆರೆಗೆ ಮೀನು ಬಿಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಮಹಿಳೆಯರ ಸಬಲೀಕರಣಕ್ಕೆ ರಾಜ್ಯ ಸರ್ಕಾರ ನೂತನವಾಗಿ ಮತ್ಸ್ಯ ಸಂಜೀವಿನಿ ಮತ್ತು ಕುಕ್ಕುಟ ಯೋಜನೆ ಜಾರಿಗೊಳಿಸಿದೆ. ಮತ್ಸ್ಯ ಸಂಜೀವಿನಿಯಡಿ ಗ್ರಾಪಂ ವ್ಯಾಪ್ತಿಯ ಕೆರೆಯಲ್ಲಿ ಮೀನು ಸಾಕಣೆ ಕೈಗೊಂಡರೆ, ಅತ್ಯಂತ ಕಡಿಮೆ ಮೊತ್ತದಲ್ಲಿ ಮೀನು ಮರಿಗಳನ್ನು ಒದಗಿಸಲಾಗುತ್ತಿದೆ. ಮೀನು ಮರಿಗಳ ಪಾಲನೆ ಪೋಷಣೆ ಕುರಿತು ಮೀನುಗಾರಿಕೆ ಇಲಾಖೆ ಅಧಿಕಾರಿಗಳಿಂದ ಅಗತ್ಯ ಮಾರ್ಗದರ್ಶನ ಒದಗಿಸಲಾಗುವುದು. ಅಲ್ಲದೇ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗುವುದು.

ಅದೇ ರೀತಿ ಕುಕ್ಕುಟ ಯೋಜನೆಯಡಿ ಕೋಳಿಗಳ ರಕ್ಷಣೆಗೆ ಶೆಡ್ ಒದಗಿಸುವುದಲ್ಲದೇ, ಮೊಟ್ಟೆಗಳನ್ನು ಹತ್ತಿರದ ಅಂಗನವಾಡಿ, ಶಾಲೆಗಳಿಗೆ ಖರೀದಿಸಲಾಗುವುದು ಎಂದರು.

ಈ ವೇಳೆ ಒಕ್ಕೂಟದ ಅಧ್ಯಕ್ಷೆ ಪಾರ್ವತಮ್ಮ, ಗುಡದೂರು ಗ್ರಾಪಂ ಸದಸ್ಯ ಶಿವರಾಜ್, ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಾದ ಕೃಷ್ಣಹುನಗುಂದ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯ ತಾಲೂಕು ವ್ಯವಸ್ಥಾಪಕರಾದ ಮೌನೇಶ್, ವಲಯ ಮೇಲ್ವಿಚಾರಕರಾದ ಪ್ರಕಾಶ್, ರಾಜೀವ್ ಗಾಂಧೀ ಪಂಚಾಯತ್ ರಾಜ್ ಫೆಲೋ ವಿನೋದ್, ಬಿಆರ್ ಪಿ ಭವಾನಿ ಎಂಬಿಕೆ ಶಿವಲಿಂಗಮ್ಮ, ಪಶು ಸಖಿ ಫರೀದಾಬೇಗಂ, ಲಕ್ಷ್ಮೀ ಸ್ತ್ರೀ ಶಕ್ತಿ ಸ್ವ ಸಹಾಯ ಗುಂಪಿನ ಸದಸ್ಯೆಯರು, ಗ್ರಾಪಂ ಸಿಬ್ಬಂದಿ ಇದ್ದರು.

# ನಗರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಸ್ಥಳಕ್ಕೆ
## ಪಾಲಿಕೆ ಆಯುಕ್ತ ಜುಬಿನ್ ಮೊಹೊಪಾತ್ರ ಭೇಟಿ, ಪರಿಶೀಲನೆ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**



ರಾಯಚೂರು ನಗರವನ್ನು ಸುಂದರ ನಗರವನ್ನು ರೂಪಿಸುವ ನಿಟ್ಟಿನಲ್ಲಿ ಈಗಾಗಲೇ ರಾಯಚೂರು ಮಹಾನಗರ ಪಾಲಿಕೆಯ ಪರಿಸರ ವಿಭಾಗದಿಂದ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಸ್ಥಳಕ್ಕೆ ಮಂಗಳವಾರ ದಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಅವರು ಭೇಟಿ ನೀಡಿ ಪರಿಶೀಲನೆ ಮಾಡಿದರು.

ನಗರದ ಸೌಂದರ್ಯೀಕರಣಗಳ ವಿವಿಧ ಸ್ಥಳಗಳನ್ನು ಮತ್ತು ವಿವಿಧ ವೃತ್ತಗಳನ್ನು ವರದಿಯನ್ನು ಪರಿಶೀಲಿಸಲು ನಗರಾದ್ಯಂತ ಪರಿಶೀಲನೆ ಕೈಗೊಂಡು ನಗರದ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಭವಿಷ್ಯದ ಸುಂದರೀಕರಣ ಯೋಜನೆಗಳ ಸಿದ್ಧತೆ ಮತ್ತು ಯೋಜನಾ ಸಿದ್ಧತೆಗಾಗಿ ಪರಿಶೀಲಿಸಿ ಖಾತರಿ ಪಡಿಸುಕೊಳ್ಳಲಾಯಿತು.

ಈ ವೇಳೆ ಅಧಿಕಾರಿಗಳ ತಂಡದೊಂದಿಗೆ ಆಂಬೇಡ್ಕರ್ ವೃತ್ತ, ನಗರ ಬಸ್ ನಿಲ್ದಾಣ, ಆರ್.ಟಿ.ಓ ವೃತ್ತ, ರಾಮ ಮಂದಿರ ಕಲ್ಯಾಣಿ ಮತ್ತು ರೈಲ್ವೇ ನಿಲ್ದಾಣ ವೃತ್ತ ಸೇರಿದಂತೆ ನಗರದ ಪ್ರಮುಖ ಜಂಕ್ಷನ್ಗಳಿಗೆ ಭೇಟಿ ನೀಡಿ, ಈ ಸ್ಥಳಗಳಲ್ಲಿ ಕೈಗೊಳ್ಳಲು ಉದ್ದೇಶಿಸಲಾದ ಸುಂದರೀಕರಣ, ಗೋಡೆ ಚಿತ್ರಕಲೆ (ವಾಲ್ ಪೇಂಟಿಂಗ್) ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ ಯೋಜನೆಯ ಕುರಿತು ಚರ್ಚಿಸಲಾಯಿತು.

ಈವೇಳೆ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಅವರು ಮಾತನಾಡಿ, ನಗರದ ಪ್ರಮುಖ ಸ್ಥಳಗಳನ್ನು ಸುಂದರವಾಗಿ ಮಾರ್ಪಡಿಸುವ ಸಲುವಾಗಿ ವ್ಯವಸ್ಥಿತ ಯೋಜನೆ ರಚಿಸಲು ಈ ಭೇಟಿಯನ್ನು ನಡೆಸಲಾಗಿದೆ. ನಾವು ಈ ಸ್ಥಳಗಳಿಗೆ ಸಂಬಂಧಿಸಿದ ವಿವರವಾದ ಯೋಜನೆಗಳನ್ನು ರೂಪಿಸುತ್ತಿದ್ದೇವೆ. ಮತ್ತು ಶೀಘ್ರದಲ್ಲೇ ಕಾರ್ಯಗಳನ್ನು ಪ್ರಾರಂಭಿಸಲು ತಯಾರಿ ನಡೆಸುತ್ತಿದ್ದೇವೆ ಎಂದು ಹೇಳಿದರು.

ನಂತರ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಕಾಮಗಾರಿಗೆ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿ, ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಪಿಡಬ್ಲ್ಯೂಡಿ ಇಲಾಖೆ ಮತ್ತು ಆರ್.ಡಿ.ಎ ಜಂಟಿ ಪ್ರಯತ್ನದಿಂದ ವೃತ್ತದ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಕೋಟೆ–ಯ ಪುನಃಸ್ಥಾಪನೆ ಕಾರ್ಯವು ಒಂದು ತಿಂಗಳಿಗೂ ಹೆಚ್ಚು ಕಾಲ ನಡೆಯುತ್ತಿದ್ದು, ಅದು ಮುಕ್ತಾಯಗೊಳ್ಳುವ ಹಂತದಲ್ಲಿದೆ. ಮತ್ತು ಶೀಘ್ರದಲ್ಲೇ ವರ್ಣರಂಜಿತ ಬೆಳಕಿನೊಂದಿಗೆ ಸಾರ್ವಜನಿಕರಿಗೆ ಮುಕ್ತವಾಗಲಿದೆ ಎಂದರು.

ಇದೇ ಸಂದರ್ಭದಲ್ಲಿ ಪರಿಸರ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರಾದ ಜೈಪಾಲ್ ರೆಡ್ಡಿ, ವಲಯ ಆಯುಕ್ತರಾದ ಮಲ್ಲಿಕಾರ್ಜುನ, ಕಾರ್ಯಪಾಲಕ ಅಭಿಯಂತರಾದ ಬಸವರಾಜ ಹೆಬ್ಬಾಳ, ಸಹಾಯಕ ಅಭಿಯಂತರರಾದ ಮಹೇಶ ಸೇರಿದಂತೆ ಪಾಲಿಕೆಯ ವಿವಿಧ ತಾಂತ್ರಿಕ ವಿಭಾಗಗಳ ಹಿರಿಯ ಮತ್ತು ಕಿರಿಯ ಅಧಿಕಾರಿಗಳು ಇದ್ದರು.

# ಎಂ.ಆರ್.ಎಫ್.ಘಟಕಕ್ಕೆ ಭೇಟಿ

**ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ:** ತಾಲ್ಲೂಕಿನ ಯರಬಾಗ ರಸ್ತೆಯಲ್ಲಿ 1.5 ಕೋಟಿ ರೂ.ಗಳಲ್ಲಿ ನಿರ್ಮಾಣ ಗೊಳ್ಳುತ್ತಿರುವ ಎಂ.ಆರ್.ಎಫ್. ಘಟಕಕ್ಕೆ ಬುಧವಾರ ಜಿ.ಪ.ಮು.ಕಾ.ನಿ.ಅ.ಡಾ. ಗಿರೀಶ ಬದೋಲೆ ಸರ್ ಅವರು ಘಟಕಕ್ಕೆ ಭೇಟಿನೀಡಿ ಪರಿಶೀಲನೆ ನಡೆಸಿದರು. ನಂತರ ಎಇಇ ಶಿವಕುಮಾರ ಅವರಿಂದ ಮಾಹಿತಿ ಪಡೆದುಕೊಂಡು ಇನ್ನೂ ಎರಡು ತಿಂಗಳ ಒಳಗೆ ಕೆಲಸ ಮುಗಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾ.ಪಂ.ಕಾ.ನಿ.ಅ.ರಮೇಶ ಸುಲ್ಫಿ. ಎಇಇ ಶಿವರಾಜ ಪಲ್ಲೇರಿ, ಎಇ ಶ್ವೇತಾ, ಪಿಡಿಓ ಪದ್ಮಪ್ಪಾ ಗಾಣಿಗೇರ, ಟಿಸಿ ಶಿವರಾಜ ಪಾಟೀಲ್, ಟಿಐಇಸಿ ವೀರಾರೆಡ್ಡಿ, ಟಿಎ ರವಿ ಕೋರಳೆ, ಮಾಣಿಕ ಧೂಮನಸೂರೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



# ಶುದ್ಧತೆ ಸುರಕ್ಷತೆ ಗುಣಮಟ್ಟಕ್ಕೆ ಆದ್ಯತೆ: ಎಸಿ ಬಾಳೆ



ರಾಯಚೂರು : ಉಪ ವಿಭಾಗದ ಎಲ್ಲಾ ವ್ಯಾಪಾರಿಗಳು ಹಾಗೂ ಹೋಟೆಲ್, ಅಂಗಡಿ ಸೇರಿದಂತೆ ಇತರೆ ಆಹಾರ ಕೇಂದ್ರಗಳು ತಪ್ಪದೇ ತಮ್ಮ ಆವರಣದಲ್ಲಿ ಶುದ್ಧತೆ, ಸುರಕ್ಷತೆ ಮತ್ತು ಗುಣಮಟ್ಟಕ್ಕೆ ಆದ್ಯತೆ ನೀಡಬೇಕೆಂದು ರಾಯಚೂರು ಕಂದಾಯ ಉಪ ವಿಭಾಗದ ಸಹಾಯಕ ಆಯುಕ್ತರಾದ ಗಜಾನನ ಬಾಳೆ ಅವರು ಸೂಚಿಸಿದರು.

ಇತ್ತೀಚೆಗೆ ಜಿಲ್ಲೆಯ ಮಾನವಿ ಪಟ್ಟಣದಲ್ಲಿ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ತಹಶೀಲ್ದಾರ್ ಕಾರ್ಯಾಲಯ, ಪುರಸಭೆ, ತಾಲೂಕ ಆರೋಗ್ಯ ಇಲಾಖೆ, ಆಹಾರ ಸುರಕ್ಷತಾ ಇಲಾಖೆ, ಕಂದಾಯ ಇಲಾಖೆ, ಪುರಸಭೆ ಹಾಗೂ ಪೋಲಿಸ್ ಇಲಾಖೆಯೊಂದಿಗೆ ವಿವಿಧ ಹೋಟೆಲ್ ಮತ್ತು ಬಾರ್ & ರೆಸ್ಟೋರೆಂಟ್‌ಗಳ ಮೇಲೆ ಹಠಾತ್ ದಾಳಿ ಮಾಡಿ ಗುಣಮಟ್ಟವನ್ನು ಪರಿಶೀಲಿಸಿ, ಅವರು ಮಾತನಾಡಿದರು. ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಕಾಯ್ದೆ, 2006ರ ಹಾಗೂ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ನಿಯಮಗಳು 2011ರ ಸೂಚನೆಗಳನ್ನು ಒಂದು ವಾರದೊಳಗಾಗಿ ಅನುಸರಿಸಬೇಕು. ಆಹಾರ ವ್ಯಾಪಾರ ನಿರ್ವಾಹಕರು ಸುಧಾರಣಾ ಸೂಚನೆಯನ್ನು ಅನುಸರಿಸಲು ವಿಫಲವಾದರೆ ಅವರ ಪರವಾನಿಗೆಯನ್ನು ಅಮಾನತುಗೊಳಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದರು.

ರಾಯಚೂರು ಕಂದಾಯ ಉಪ ವಿಭಾಗದ ವ್ಯಾಪ್ತಿಯ ಹೋಟೇಲ್‌ಗಳಲ್ಲಿ ಗುಣಮಟ್ಟವಾಗಿ ಆಹಾರ ಸುಧಾರಣೆ ಮಾಡಲು ಈಗಾಗಲೇ ಆಹಾರ ಸುರಕ್ಷತಾ ಅಧಿಕಾರಿಗಳಿಂದ ನೋಟಿಸ್ ನೀಡಲಾಗಿದೆ. ಮಾನವಿಯ ನಿಸರ್ಗ ಹೋಟೆಲ್, ಸಾಧಿಕ್ ಹೋಟೆಲ್, ಲಕ್ಷ್ಮೀವಿಲಾಸ ಹೋಟೆಲ್, ಗಗನ್ ಬಾರ್ & ರೆಸ್ಟೋರೆಂಟ್, ಜನತಾ ಹೋಟೆಲ್, ಡಾನ್ ಡಾಬಾಗಳ ಮೇಲೆ ದಾಳಿ ಮಾಡಿದರು. ಡಾನ್ ಡಾಬಾವನ್ನು ಸುಧಾರಣೆ ಮಾಡಲು ಅಪರ ಜಿಲ್ಲಾಧಿಕಾರಿಗಳು ಈ ಹಿಂದೆ ದಂಡ ವಿಧಿಸಿದರು ಸಹ ಯಾವುದೇ ಸುಧಾರಣೆಯಾಗದೇ ಇರುವುದು ಕಂಡು ಬಂದಿರುತ್ತದೆ. ಮತ್ತು ಮದ್ಯವನ್ನು ಡಾಬಾದಲ್ಲಿ ಸೇವನೆ ಮಾಡುತ್ತಿರುವುದು ದಾಳಿ ವೇಳೆಯಲ್ಲಿ ಕಂಡುಬಂದಿ ಎಂದರು.

ವಿ.ಎ.ಬಾರ್ & ರೆಸ್ಟೋರೆಂಟ್‌ನಲ್ಲಿ ನೀರಿನ ಗಿಜರ್ ಸ್ಥಳದಲ್ಲಿ ಕಲ್ಲಿದ್ದಲು ಮತ್ತು ಸಿಲೆಂಡರ್‌ಗಳನ್ನು ಸಂಗ್ರಹ ಮಾಡಲಾಗುತ್ತಿದೆ. ಹಾಗೂ ಅಡುಗೆ ಕೋಣೆಯಿಂದ ಬರುವಂತಹ ಹೊಗೆಯನ್ನು 02 ಎಕ್ಸ್ ಫ್ಯಾನ್‌ಗಳ ಮುಖಾಂತರ ಈ ಕೋಣೆಯಲ್ಲಿಯೇ ಬಿಟ್ಟಿರುತ್ತಾರೆ.

ಇದರಿಂದ ಕೋಣೆಯ ತಾಪಮಾನ ಏರುಪೇರಿನಲ್ಲಿ ಅಗ್ನಿ ಅವಗಡ ಸಂಭವಿಸುವ ಸಂಭವವಿದ್ದು, ಈ ಹೋಟೇಲ್ ಮಾಲೀಕರಿಂದ ಯಾವುದೇ ಬೆಂಕಿ ನಿಂದಿಸುವ ಸಲಕರಣೆಗಳು ಇರಿಸದೇ ಇರುವುದು ಕಂಡು ಬಂದಿದೆ ಎಂದರು. ಈ ಹೋಟಲ್‌ಗಳಿಗೆ ನಿಯಮಾನುಸಾರ ಕಾಯ್ದೆ ಪ್ರಕಾರ ಗೃಹ ಬಳಕೆ ಸಿಲಿಂಡರ್‌ಗಳ ಕುರಿತು ಉಪ ನಿರ್ದೇಶಕರು ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ರಾಯಚೂರು ಇವರು ಕಾನೂನು ಕ್ರಮ ಕೈಗೊಳ್ಳುತ್ತಾರೆ. ಎಲ್ಲಾ ಹೋಟೆಲ್‌ಗಳಲ್ಲಿ ನಿಷೇಧಿತ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವುದರಿಂದ ಪುರಸಭೆ ಮಾನ್ವಿ ಇವರಿಂದ ದಂಡ ಹಾಗೂ ಈ ಸಾಮಗ್ರಿಗಳನ್ನು ಮುಟ್ಟುಗೋಲು ಮಾಡಿಕೊಳ್ಳಲಾಗಿದೆ ಎಂದರು. ಆಹಾರ ಸುರಕ್ಷತಾ ಅಧಿಕಾರಿಗಳು ಮಾನವಿ ಇವರು ಸಾಧಿಕ್ ಹೋಟೆಲ್ ಮತ್ತು ಡಾನ್ ಡಾಬಾ ಇವರ ಆಹಾರ ಪರವಾನಿಗೆ ಪ್ರಮಾಣ ಪತ್ರ ಅಥವಾ ಅರ್ಜಿಯನ್ನು ಅಮಾನತ್ತುಗೊಳಿಸಲು ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾದೆ. ವಿ.ಎ.ಬಾರ್ & ರೆಸ್ಟೋರೆಂಟ್ ಇವರು ಅವಶ್ಯಕತೆ ಇರುವ ಸ್ಥಳದಲ್ಲಿ ಬೆಂಕಿ ನಿಂದಿಸುವ ಸಲಕರಣೆಗಳನ್ನು ಇರದೇ ಇರುವುದರಿಂದ ಮುಂದಿನ ಸೂಕ್ತ ಕ್ರಮಕ್ಕಾಗಿ ಜಿಲ್ಲಾ ಅಗ್ನಿ ಶಾಮಕ ಅಧಿಕಾರಿಗಳು ಕರ್ನಾಟಕ ರಾಜ್ಯ ಅಗ್ನಿ ಶಾಮಕ ದಳ ಮತ್ತು ತುರ್ತು ಸೇವೆಗಳು ರಾಯಚೂರು ಇವರಿಗೆ ಸೂಚಿಸಲಾಗಿದೆ ಎಂದರು. ಎಲ್ಲಾ ಹೋಟೆಲ್, ಬಾರ್ & ರೆಸ್ಟೋರೆಂಟ್ ಮತ್ತು ಇತರೆ ಆಹಾರ ತಯಾರಿಸುವ ಮಾರಾಟ ಮಾಡುವವರು ತಪ್ಪದೇ ಆಹಾರ ಸುರಕ್ಷತ ನಿಯಮಗಳನ್ನು ಪಾಲಿಸಿ ಅಗತ್ಯ ಗುಣಮಟ್ಟ ಆಹಾರವನ್ನು ಸಾರ್ವಜನಿಕರಿಗೆ ನೀಡತಕ್ಕದ್ದು, ಹಾಗೂ ಎಲ್ಲಾ ವ್ಯಾಪಾರಸ್ಥರು, ಹೋಟೆ ೀಲ್‌ದಾರರು ತಪ್ಪದೇ ನಿಯಮಾನುಸಾರ ಸಂಬಂಧಿಸಿದ ಇಲಾ ಖೆಗಳಿಂದ ವಾಣಿಜ್ಯ ಪರವಾನಿಗೆ ಮತ್ತು ಆಹಾರ ಸುರಕ್ಷತ ಪರವಾನಿಗೆಯನ್ನು ಅಥವಾ ನೋಂದಣಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದೆ ಎಂದರು. ಇದೇ ಸಂದಭ ರ್ದಲ್ಲಿ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರಾದ ನಜೀರ್ ಅಹ್ಮದ್, ತಹಶೀಲ್ದಾರ್ ವಾಯೀದ್, ಪುರಸಭೆ ಮುಖ್ಯಾಧಿಕಾರಿ ಪರಶುರಾಮ್, ತಾಲೂಕ ಆರೋಗ್ಯಾಧಿಕಾರಿ ಡಾ.ಶರಣಬಸವ, ಆಹಾರ ಸುರಕ್ಷತಾ ಇಲಾಖೆಯ ಅಧಿಕಾರಿ ಬನದೇಶ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ಕ್ಯೂಆರ್ ಸ್ಕ್ಯಾನ್ ಮಾಡಿ ಪೋಲಿಯೋ ಬೂತ್ ಮಾಹಿತಿ ಪಡೆಯಿರಿ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು :** ಇಲ್ಲಿನ ರಾಯಚೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಐದು ವರ್ಷದ ಒಳಗಿನ ಮಕ್ಕಳಿಗೆ ಎರಡು ಹನಿ ಪೋಲಿಯೋ ಲಸಿಕೆ ಹಾಕುವ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ನಗರದಾದ್ಯಂತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದ್ದು, ಪೋಲಿಯೋ ಬೂತ್ ಗಳ ಮಾಹಿತಿ ಪಡೆಯಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ತಮ್ಮ ಹತ್ತಿರದ ಬೂತ್ ವಿಳಾಸವನ್ನು ಪಡೆದು ಲಸಿಕೆ ಹಾಕಿಸಬೇಕೆಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಅವರು ಕೋರಿದ್ದಾರೆ. ನಗರದ ಯಾವುದೇ ಮಗು ಲಸಿಕೆಯಿಂದ ವಂಚಿತರಾಗದಂತೆ ಸಾರ್ವಜನಿಕರು ಕೈಜೋಡಿಸಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಯಶಸ್ವಿಯನ್ನಾಗಿಸಲು ಡಿಸೆಂಬರ್ – 21ರಂದು ಎಲ್ಲಾ ಸರಕಾರಿ ಆಸ್ಪತ್ರೆ ಬಸ್ ನಿಲ್ದಾಣ, ರೈಲು ನಿಲ್ದಾಣ, ಅಂಗನವಾಡಿ ಮತ್ತು ಶಾಲೆಗಳಲ್ಲಿ ಬೂತ್ ತೆರೆಯಲಾಗಿದೆ. ಬೂತ್ ಗಳ ಮಾಹಿತಿಯನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮಾಹಿತಿ ಪಡೆಯಬಹುದಾಗಿದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತರ ಪಹಣಿಗಳಲ್ಲಿ ಸರ್ಕಾರಿ ರಸ್ತೆಗಳನ್ನು ಗುರುತಿಸಲು ರೈತ ಸಂಘ ಒತ್ತಾಯ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ರೈತರ ಪಹಣಿಗಳಲ್ಲಿ ಸರ್ಕಾರಿ ರಸ್ತೆಗಳನ್ನು ಗುರುತಿಸಬೇಕು ಎಂದು ಒತ್ತಾಯಿಸಿ ಇಲ್ಲಿನ ತುಂಗಭದ್ರಾ ರೈತ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳು ಹಾಗೂ ಜಿ.ಪಂ.ಸಿಇಒ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ತುಂಗಭದ್ರಾ ರೈತ ಸಂಘದ ಸಂಸ್ಥಾಪಕ ಅಧ್ಯಕ್ಷ ಡಾ.ಜಿ.ಪುರುಷೋತ್ತಮ ಗೌಡ ಅವರು ಮಾತನಾಡಿ, ಜಿಲ್ಲೆಯ ರೈತರ ಜಮೀನಿನ ಪಹಣಿಯಲ್ಲಿ ಪುರಾತನವಾದ ರಸ್ತೆಗಳಿವೆ. ಈ ರಸ್ತೆಗಳಿಗೆ ಪ್ರತಿ ವರ್ಷ ಸರ್ಕಾರದ ಅನುದಾನದ ಮೂಲಕ ಅಭಿವೃದ್ಧಿ ಪಡಿಸಲಾಗುತ್ತಿದೆ. ಆದರೆ, ಆ ರಸ್ತೆಗಳು ಸರ್ಕಾರದ್ದು ಎಂದು ಗುರುತಿಸದೇ, ಇಲ್ಲಿವರೆಗೂ ರೈತರ ಹೆಸರಿನಲ್ಲೇ ಪಟ್ಟಾಗಳಿವೆ, ಫಾರ್ಮ ನಂ.10 ಪ್ರಕಾರ ಭೂಮಾಪನ ಇಲಾಖೆಯಲ್ಲಿ ರಸ್ತೆಗಳ ವಿಸ್ತೀರ್ಣವನ್ನು ಗುರುತಿಸಲಾಗಿದೆ. ಆದರೆ, ಆ ರಸ್ತೆಗಳ ವಿಸ್ತೀರ್ಣವನ್ನು ಪಹಣಿ ಗಳಲ್ಲಿ ಗುರುತಿಸಿಲ್ಲ, ಬೆಳೆ ನಷ್ಟ ಸೇರಿದಂತೆ ನಾನಾ ಕಾರಣಗಳಿಂದ ಜಾಮೀನು ಮಾರಾಟ ಮಾಡಿಕೊಳ್ಳಲು ತೊಂದರೆ ಎದುರಾಗಿದೆ. ಕೂಡಲೇ ಕೃಷಿ ಇಲಾಖೆ, ಭೂ ಮಾಪನ ಇಲಾಖೆ, ಜಿ.ಪಂ., ಲೋಕೋಪಯೋಗಿ ಇಲಾಖೆ, ಅಧಿಕಾರಿಗಳ ಸಭೆ ಕರೆದು, ಪಹಣಿಗಳಲ್ಲಿ ರಸ್ತೆಗಳಿರುವ ವಿಸ್ತೀರ್ಣವನ್ನು ಗುರುತಿಸಲು ಇಲಾಖೆಯ ಹೆಸರಿನಲ್ಲಿ ಸರ್ಕಾರದ್ದು ಎಂದು ನಮೂದಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ತಳವಾರ ದುರ್ಗಣ್ಣ, ಪೂಜಾರಿ ವೀರೇಶಸ್ವಾಮಿ, ಎಂ.ವೀರಭದ್ರ ನಾಯಕ್, ಕುರುಬರ ಹಾಗಲೂರಪ್ಪ, ಕೆ.ರುದ್ರಾ ನಾಯ್ಕ್, ತಾತಪ್ಪ ಸ್ವಾಮಿ, ವೀರನಗೌಡ ಇತರರಿದ್ದರು.


# ರೈತರ ಪಹಣಿಗಳಲ್ಲಿ ಸರ್ಕಾರಿ ರಸ್ತೆಗಳನ್ನು ಗುರುತಿಸಲು ರೈತ ಸಂಘ ಒತ್ತಾಯ



**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ:** ರೈತರ ಪಹಣಿಗಳಲ್ಲಿ ಸರ್ಕಾರಿ ರಸ್ತೆಗಳನ್ನು ಗುರುತಿಸಬೇಕು ಎಂದು ಒತ್ತಾಯಿಸಿ ಇಲ್ಲಿನ ತುಂಗಭದ್ರಾ ರೈತ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳು ಹಾಗೂ ಜಿ.ಪಂ.ಸಿಇಒ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ತುಂಗಭದ್ರಾ ರೈತ ಸಂಘದ ಸಂಸ್ಥಾಪಕ ಅಧ್ಯಕ್ಷ ಡಾ.ಜಿ.ಪುರುಷೋತ್ತಮ ಗೌಡ ಅವರು ಮಾತನಾಡಿ, ಜಿಲ್ಲೆಯ ರೈತರ ಜಮೀನಿನ ಪಹಣಿಯಲ್ಲಿ ಪುರಾತನವಾದ ರಸ್ತೆಗಳಿವೆ. ಈ ರಸ್ತೆಗಳಿಗೆ ಪ್ರತಿ ವರ್ಷ ಸರ್ಕಾರದ ಅನುದಾನದ ಮೂಲಕ ಅಭಿವೃದ್ಧಿ ಪಡಿಸಲಾಗುತ್ತಿದೆ. ಆದರೆ, ಆ ರಸ್ತೆಗಳು ಸರ್ಕಾರದ್ದು ಎಂದು ಗುರುತಿಸದೇ, ಇಲ್ಲಿವರೆಗೂ ರೈತರ ಹೆಸರಿನಲ್ಲೇ ಪಟ್ಟಾಗಳಿವೆ, ಫಾರ್ಮ ನಂ.10 ಪ್ರಕಾರ ಭೂಮಾಪನ ಇಲಾಖೆಯಲ್ಲಿ ರಸ್ತೆಗಳ ವಿಸ್ತೀರ್ಣವನ್ನು ಗುರುತಿಸಲಾಗಿದೆ. ಆದರೆ, ಆ ರಸ್ತೆಗಳ ವಿಸ್ತೀರ್ಣವನ್ನು ಪಹಣಿ ಗಳಲ್ಲಿ ಗುರುತಿಸಿಲ್ಲ, ಬೆಳೆ ನಷ್ಟ ಸೇರಿದಂತೆ ನಾನಾ ಕಾರಣಗಳಿಂದ ಜಾಮೀನು ಮಾರಾಟ ಮಾಡಿಕೊಳ್ಳಲು ತೊಂದರೆ ಎದುರಾಗಿದೆ. ಕೂಡಲೇ ಕೃಷಿ ಇಲಾಖೆ, ಭೂ ಮಾಪನ ಇಲಾಖೆ, ಜಿ.ಪಂ., ಲೋಕೋಪಯೋಗಿ ಇಲಾಖೆ, ಅಧಿಕಾರಿಗಳ ಸಭೆ ಕರೆದು, ಪಹಣಿಗಳಲ್ಲಿ ರಸ್ತೆಗಳಿರುವ ವಿಸ್ತೀರ್ಣವನ್ನು ಗುರುತಿಸಲು ಇಲಾಖೆಯ ಹೆಸರಿನಲ್ಲಿ ಸರ್ಕಾರದ್ದು ಎಂದು ನಮೂದಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ತಳವಾರ ದುರ್ಗಣ್ಣ, ಪೂಜಾರಿ ವೀರೇಶಸ್ವಾಮಿ, ಎಂ.ವೀರಭದ್ರ ನಾಯಕ್, ಕುರುಬರ ಹಾಗಲೂರಪ್ಪ, ಕೆ.ರುದ್ರಾ ನಾಯ್ಕ್, ತಾತಪ್ಪಸ್ವಾಮಿ, ವೀರನಗೌಡ ಇತರರಿದ್ದರು.


# ಕಡ್ಡಾಯವಾಗಿ ಹೆಸರು ನೋಂದಾಯಿಸಿಕೊಳ್ಳಿರಿ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕೆಲಸಗಾರರು ಮತ್ತು ಉದ್ಯೋಗದಾತರು ಕಡ್ಡಾಯವಾಗಿ ಇಎಸ್‌ಐನಲ್ಲಿ ಹೆಸರು ನೋಂದಣಿ ಮಾಡಿ ಕೆಲಸಗಾರರಿಗೆ ಆರೋಗ್ಯ ಭದ್ರತೆಯ ಜೊತೆಯಲ್ಲಿ ಮಕ್ಕಳಿಗೆ ವೈದ್ಯಕೀಯ ಶಿಕ್ಷಣದ ಸೀಟು ಪಡೆಯಲು ನೆರವಾಗಬೇಕು ಎಂದು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಅವರು ತಿಳಿಸಿದ್ದಾರೆ. ಕೇಂದ್ರ ಸರ್ಕಾರದ ಇಎಸ್‌ಐ 'ಸ್ಪೀ – 2025 – (ಎಸ್‌ಪಿಆರ್‌ಇಇ)'ರ ಹೆಸರು ನೋಂದಣಿಯ ವಿಶೇಷ ಯೋಜನೆಯನ್ನು ಬಿಡಿಸಿಸಿಐನ ಸಭಾಂಗಣದಲ್ಲಿ ಮಂಗಳವಾರ ಉದ್ಘಾಟಿಸಿದ ಅವರು, 'ಸ್ಪೀ–2025–(ಎಎಸ್‌ಪಿಆರ್‌ಇಇ)' ವಿಶೇಷ ಹೆಸರು ನೋಂದಣಿ ಯೋಜನೆಯು ಉದ್ಯೋಗದಾತರು ಮತ್ತು ಕೆಲಸಗಾರರ ಸ್ನೇಹಿಯಾಗಿದೆ. ಕಾರಣ ಪ್ರತಿಯೊಂದು ಸಂಸ್ಥೆಯು ಕೆಲಸಗಾರರನ್ನು ಇಎಸ್‌ಐ ವ್ಯಾಪ್ತಿಯಲ್ಲಿ ನೋಂದಣಿ ಮಾಡಿಸಬೇಕು ಎಂದರು.

ಇಎಸ್‌ಐನಲ್ಲಿ ಹೆಸರು ನೋಂದಣಿ ಮಾಡಿಕೊಂಡ ನೌಕರರು–ಕೆಲಸಗಾರರ ಮಕ್ಕಳಿಗೆ ಕೆಲ ನಿಯಮಗಳ ಪ್ರಕಾರ – ಷರತ್ತುಗಳಿಗೆ ಒಳಪಟ್ಟು ವೈದ್ಯಕೀಯ, ಡೆಂಟಲ್ ಮತ್ತು ಪ್ಯಾರಾ ಮೆಡಿಕಲ್ ಸೀಟುಗಳನ್ನು ಪಡೆಯಲು ಸೌಲಭ್ಯಗಳಿವೆ. ಈ ಸೌಲಭ್ಯಗಳು ಸಾಮಾನ್ಯರಿಗಿಂತಲೂ ವಿಶೇಷವಾಗಿ ಪರಿಗಣಿಸಲ್ಪಟ್ಟಿವೆ. ಬಡ ಮತ್ತು ಮಧ್ಯಮವರ್ಗದ ಕುಟುಂಬದ ವಿದ್ಯಾರ್ಥಿಗಳಿಗೆ ನೆರವಾಗಲು ಇಎಸ್‌ಐನಲ್ಲಿ ನೋಂದಣಿ ಮಾಡಿ ನೆರವಾಗಿರಿ ಎಂದರು. ಇಎಸ್‌ಐನ ಸಮಾಜಿಕ ಭದ್ರತೆಯ ಕಲ್ಬುರ್ಗಿ ವಿಭಾಗೀಯ ಅಧಿಕಾರಿ ಹನೀಫ್ ಕೆ. ಶೇಖ್ ಅವರು, ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡು, ಇಎಸ್‌ಐ ಯೋಜನೆ ಮತ್ತು ಸೌಲಭ್ಯಗಳು, ಇಎಸ್‌ಐನ ನಿಯಮಗಳು – ಷರತ್ತುಗಳ ಉಲ್ಲಂಘನೆ ಮತ್ತು ಇಎಸ್‌ನ ನೋಂದಣಿ ವ್ಯಾಪ್ತಿಯ ಪರಿಭಾಷೆಯನ್ನು ಸಮಗ್ರವಾಗಿ ವಿವರಿಸಿದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಕೆ.ಸಿ. ಸುರೇಶಬಾಬು ಅವರು ಕಾರ್ಯಕ್ರಮ ನಿರೂಪಿಸಿದರು. ಇಎಸ್‌ಐ ಬಳ್ಳಾರಿ ಕಚೇರಿಯ ವ್ಯವಸ್ಥಾಪಕಿ ಶ್ರೀಮತಿ ಅನೂರಾಧ ಅವರು ವಂದನಾರ್ಪಣೆ ಸಲ್ಲಿಸಿದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಹಿರಿಯ ಉಪಾಧ್ಯಕ್ಷರಾದ ಎಸ್. ದೊಡ್ಡನಗೌಡ, ಉಪಾಧ್ಯಕ್ಷರಾದ ಗಿರಧರ ಸೊಂತ, ಜಂಟಿ ಕಾರ್ಯದರ್ಶಿಗಳಾದ ಡಾ. ಮರ್ಚೆಡ್ ಮಲ್ಲಿಕಾರ್ಜುನಗೌಡ, ಖಜಾಂಚಿಗಳಾದ ನಾಗಳ್ಳಿ ರಮೇಶ್ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಪಾಲ್ಗೊಂಡಿದ್ದರು. ಬಳ್ಳಾರಿ ಜಿಲ್ಲಾ ಅನುದಾನ ರಹಿತ ಖಾಸಗಿ ಶಾಲೆಗಳ ಸಂಘದ ಮರಿಸ್ವಾಮಿ ರೆಡ್ಡಿ,

ಬೆಸ್ಟ್ ಶಾಲೆಯ ಎಂ. ಶ್ರೀನಿವಾಸ, ವಿವಿಧ ಶಿಕ್ಷಣ ಸಂಸ್ಥೆಗಳವರು – ಕೈಗಾರಿಕೆಗಳವರು ಹಾಗೂ ವಿವಿಧ ಸಂಘ – ಸಂಸ್ಥೆಗಳವರು ಸಭೆಯಲ್ಲಿ ಪಾಲ್ಗೊಂಡು, ಇಎಸ್‌ಐನಲ್ಲಿ ಹೆಸರು ನೋಂದಣಿ ಮಾಡುವ ಕುರಿತು ನಡೆದ ಪ್ರಶ್ನೋತ್ತರ ಚರ್ಚೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

# ತಾಯಿ, ಮಗು ಕಾಣೆ

**ಮಲ್ಲಮ್ಮ ನುಡಿ ವಾರ್ತೆ**



ಬೀದರ,:ಬೀದರನಸಿ.ಎಮ್.ಸಿ.ಕಾಲೋನಿ ನಿವಾಸಿಯಾದ ಜೀನತ್ ಪಲ್ಲವಿ ಅವಿನಾಳ ಪಾಂಚಾಳ (20 ವರ್ಷ) ಎಂಬ ಮಹಿಳೆಯು ತನ್ನ ಮಗನಾದ ಹರ್ಷಿತ್ ಅವಿನಾಶ ಪಾಂಚಾಳ (03 ವರ್ಷ) ಜೊತೆ ದಿನಾಂಕ; 15–12–2025 ರಂದು ಮನೆಯಿಂದ ಹೊರಗಡೆ ಹೋಗಿ, ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಇವರೆಗೂ ಪತ್ತೆಯಾಗಿರುವುದಿಲ್ಲ.

ಈ ಬಗ್ಗೆ ಗಾಂಧಿ ಗಂಜ್ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂ: 221/2025 ಕಲಂ ಮಹಿಳೆ ಮತ್ತು ಮಗು ಕಾಣೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಕಾಣೆಯಾದ ಮಹಿಳೆಯು 5 ಅಡಿ 3 ಇಂಚ್ ಎತ್ತರ ಇದ್ದು, ಕೆಂಚನೆ ಬಣ್ಣ, ತೆಳುವಾದ ಶರೀರ ಇದ್ದು, ಮೈಮೇಲೆ ಹಳದಿ ಬಣ್ಣದ ಚೂಡಿದಾರ, ಹಳದಿ ಬಣ್ಣದ ಪೈಜಾಮ ಧರಿಸಿರುವ ಇವಳು ಕನ್ನಡ, ಹಿಂದಿ ಭಾಷೆಯಲ್ಲಿ ಮಾತನಾಡುತ್ತಾಳೆ.

ಹಾಗೂ ತನ್ನ ಮಗನಾದ 1 ಅಡಿ 5 ಇಂಚ್ ಎತ್ತರ ಇದ್ದು, ಕೆಂಚನೆ ಬಣ್ಣ, ತೆಳುವಾದ ಶರೀರ್ ಇದ್ದು, ಮೈಮೇಲೆ ಬೂದು ಬಣ್ಣದ ಟೀ ಶರ್ಟ್,

ಪಿಂಕ್ ಬಣ್ಣದ ಜಾಕೇಟ್ ಜೀನ್ಸ್ ಪ್ಯಾಂಟು, ನೀಲಿ ಬಣ್ಣದ ಶ್ವೆಟರ ಧರಿಸಿರುವ ಇತನು ಕನ್ನಡ ಭಾಷೆಯಲ್ಲಿ ಮಾತನಾಡುತ್ತಾನೆ. ಮೇಲ್ಕಂಡ ಚಹರೆಯ ಮಹಿಳೆ ಹಾಗೂ ಮಗುವಿನ ಕುರಿತು ಯಾರಿಗಾದರೂ ಮಾಹಿತಿ ಇದ್ದಲ್ಲಿ ಅಥವಾ ದೊರೆತಲ್ಲಿ ಗಾಂಧಿ ಗಂಜ ಪೊಲೀಸ್ ಠಾಣೆ,

ಬೀದರ: 08482 226233, 9480803448, ಕಂಟ್ರೋಲ ರೂಂ, ಬೀದರ: 08482 226704 ಗೆ ಸಂಪರ್ಕಿಸಿ ಮಾಹಿತಿ ನೀಡಬೇಕೆಂದು ಗಾಂಧಿ ಗಂಜ್ ಪೊಲೀಸ್ ಠಾಣೆಯ ಅಸಿಸ್ಟೆಂಟ್ ಸಬ್ ಇನ್ಸಪೇಕ್ಟ್ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಎಸ್‌ಟಿ ಹೋರಾಟದ ಕುರಿತು ಸಮಾವೇಶ



**ಮಲ್ಲಮ್ಮ ನುಡಿ ವಾರ್ತೆ**

**ಅಂಕೋಲಾ :** ಶಿರಸಿ ನಿತ್ಯಾನಂದ ಆಶ್ರಮದಲ್ಲಿ ಕರಾವಳಿ ತಾಲೂಕುಗಳ ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ಘಟ್ಟದ ಮೇಲಿನ ಮೀನುಗಾರರ ಸಮುದಾಯದ ಸಭೆ ನಡೆಯಿತು. ಪರಿಶಿಷ್ಟಜಾತಿ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಡಾ. ಎಸ್. ಮೇಲ್ಕರ ಮಾತನಾಡಿ, ಜಲ ಮತ್ತು ನೆಲ ಬೇಟೆಗಾರರಾದ ನಮ್ಮ ಎಲ್ಲ ಸಮುದಾಯದವರು ಅಸ್ಪ್ರಶ್ಯರು ಎಂದು ಬಾಬಾ ಸಾಹೇಬ ಅಂಬೇಡ್ಕರ ಅವರು ಮನಗಂಡಿದ್ದರು ಎಂದರು.

ಜಲ ಮತ್ತು ನೆಲಗಳಲ್ಲಿ ಬೇಟೆಯಾಡಿ ಸತ್ತ ಜೀವಿಗಳನ್ನು ತಲೆಯ ಮೇಲೆ ಹೊತ್ತು ಅವುಗಳ ರಕ್ತ ಮೈಮೇಲೆ ಚೆಲ್ಲುತ್ತ ಮಾರಾಟ ಮಾಡುವ ವಂಶಸ್ಥರಾಗಿದ್ದು ಹೀಗಾಗಿ ಅವರನ್ನು ಇತರೆ ಸಮಾಜ ದೂರ ಇಟ್ಟಿದ್ದು ಇಲ್ಲಿ ಸ್ಮರಿಸಬಹುದಾಗಿದೆ. ಇದರ ಆಧಾರದ ಮೇಲೆ ಬಿಟ್ಟು ಹೋದ ಮೀನುಗಾರರ ಸಮುದಾಯವನ್ನು ಎಸ್‌ಟಿಗೆ ಸೇರಿಸಲು ವಿಫುಲ ಅವಕಾಶ ಹೊಂದಿರುತ್ತದೆ ಎಂದು ಡಾ.ಮೇಲ್ಕರ ವಿವರಿಸಿದರು. ಸಭೆಯ ಅಧ್ಯಕ್ಷತೆ ವಹಿಸಿದ ಪರಿಶಿಷ್ಟಜಾತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ವಿಷ್ಣು ಹರಿಕಾಂತ ಮಾತನಾಡಿದರು. ಎಂ.ಡಿ ಹರಿಕಾಂತ ಸ್ವಾಗತಿಸಿದರು. ಪ್ರಾರಂಭದಿಂದ ಸಂಘಟಕರು ನಡೆಸಿದ ಸಭೆಯ ನಡಾವಳಿ ಮತ್ತು ನಿರ್ಣಯಗಳನ್ನು ಸಭೆಗೆ ಡಾ. ಹರಿಹರ ಹರಿಕಾಂತ ತಿಳಿಸಿದರು. ಸಭೆಯಲ್ಲಿ ಮುಂಡಗೋಡ ಸಮಿತಿಯನ್ನು ರಚಿಸಿ ಘೋಷಣೆ ಮಾಡಲಾಯಿತು.

ಡಿ.21 ರಂದು ಬೆಂಗಳೂರಿನಲ್ಲಿ ನಡೆಯುವ ರಾಜ್ಯಮಟ್ಟದ ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು. ಸಿದ್ದಾಪುರ, ಯಲ್ಲಾಪುರ, ಹಳಿಯಾಳ, ದಾಂಡೇಲಿ, ಜೋಯಿಡಾ ತಾಲೂಕು ಸಮಿತಿ ರಚಿಸಲು ಡಾ. ಹರಿಹರ ಹರಿಕಾಂತ ಮತ್ತು ರಾಜು ಹರಿಕಾಂತ ಇವರಿಗೆ ಜವಾಬ್ದಾರಿ ನೀಡಲಾಯಿತು.

ಸಭೆಯಲ್ಲಿ ಬಾಬು ಅಂಬಿಗ, ಸುರೇಶ ಹರಿಕಾಂತ, ಅಂಕೋಲಾ ತಾಲೂಕು ಅಧ್ಯಕ್ಷ ರಾಜು ಹರಿಕಾಂತ, ಹೊನ್ನಾವರದಿಂದ ಎಂ.ಡಿ.ಹರಿಕಾಂತ, ಶಿರಸಿಯಿಂದ ಅಶೋಕ ಹರಿಕಾಂತ, ಮುಂಡಗೋಡದಿಂದ ಮಾಲತಿ, ರಾಘವೇಂದ್ರ, ಸಿದ್ದಾಪುರದಿಂದ ಧರ್ಮಾ ಅಂಬಿಗ, ರೋಹಿದಾಸ ಅಂಬಿಗ, ಪಾಂಡುರಂಗ ಅಂಬಿಗ, ನಾಗರಾಜ ಎಸ್.ಇ., ಕುಮಟಾದಿಂದ ಪ್ರಣಕೀರ ಎಚ್.ಎನ್ ಇತರರು ಸಭೆಯಲ್ಲಿ ಹಾಜರಿದ್ದರು.

# ಬೃಹತ್ ಉದ್ಯೋಗಮೇಳ

ಅಂಕೋಲಾ : ಪಟ್ಟಣದ ಶ್ರೀರಾಮ ಸ್ಟಡಿ ಸರ್ಕಲ್ 'ಶ್ರೀ ವೀರಾಂಜನೇಯ ಸಭಾಭವನದಲ್ಲಿ' ಡಿ. 25 ರಂದು ಟಾಟಾ ಎಲೆಕ್ಟ್ರಾನಿಕ್ಸ್ ಕಂಪನಿ ಜಿಲ್ಲೆಯ ಬಡ ಗ್ರಾಮೀಣ ಮಹಿಳಾ ಉದ್ಯೋಗಾಂಕ್ಷಿಗಳಿಗೆ ಬೃಹತ್ ಉದ್ಯೋಗ ಮೇಳ ಆಯೋಜಿಸಿದೆ.

ಐಟಿಐ, ಡಿಪ್ಲೊಮೊ, ಪಿಯುಸಿ, ಪದವಿ ವಿದ್ಯಾರ್ಹತೆ ಹೊಂದಿರುವ ಆಸಕ್ತ ಅಭ್ಯರ್ಥಿಗಳು ಈ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಟಾಟಾ ಎಲೆಕ್ಟ್ರಾನಿಕ್ಸ್ ಕಂಪನಿಯ ಕೋಲಾರ ಮತ್ತು ಬೆಂಗಳೂರು ಸಮೀಪದ ಹೊಸೂರು ಪ್ಲಾಂಟ್‌ಗಳಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿಯನ್ನು ಆಯೋಜಿಸಿದೆ.

ತರಬೇತಿ ಹಂತದಲ್ಲಿ 12000 ರಿಂದ 15000 ವರೆಗೆ ವೇತನದ ಜತೆಗೆ ಉಚಿತ ಊಟ, ವಸತಿ, ಸಾರಿಗೆ ವ್ಯವಸ್ಥೆಗಳನ್ನು ನೀಡಲಾಗುವುದು. ಉತ್ತಮ ಕಾರ್ಯ ಸಾಧನೆ ಮಾಡಿದ ಅಭ್ಯರ್ಥಿಗಳಿಗೆ ತರಬೇತಿಯಲ್ಲಿಯ ಅವರ ಕಾರ್ಯಸಾಧನೆಗೆ ಅನುಗುಣವಾಗಿ ಸುಮಾರು 25000 ರಿಂದ 40000 ವರೆಗೆ ಸಂಬಳದೊಂದಿಗೆ ಟಾಟಾ ಎಲೆಕ್ಟ್ರಾನಿಕ್ಸ್ ಕಂಪನಿ ತನ್ನ ಕಾಯಂ ಉದ್ಯೋಗಿಗಳನ್ನಾಗಿ ನೇಮಿಸಿಕೊಳ್ಳಲಿದೆ. ಆಸಕ್ತ ಅಭ್ಯರ್ಥಿಗಳು 7019103378 ಗೆ ತಮ್ಮ ಆಧಾರ್ ಕಾರ್ಡ್, ಫೋಟೋ, ವಿದ್ಯಾರ್ಹತೆ, ವಾಟ್ಸಪ್ ನಂಬರ್‌ನೊಂದಿಗೆ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿಸಿದ್ದಾರೆ.

# ಎಚ್.ಡಿ.ಕುಮಾರಸ್ವಾಮಿ ಜನ್ಮದಿನಾಚರಣೆ

## ಜೆಡಿಎಸ್ ಕಾರ್ಯಕರ್ತರಿಂದ ಸಂಭ್ರಮಾಚರಣೆ



**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ:** ಮಾಜಿ ಮುಖ್ಯಮಂತ್ರಿ, ಕೇಂದ್ರ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ 66ನೇ ಹುಟ್ಟು ಹಬ್ಬವನ್ನು ಇಲ್ಲಿನ ಜೆಡಿಎಸ್ ಕಾರ್ಯಕರ್ತರು ಮಂಗಳವಾರ ಅರ್ಥಪೂರ್ಣವಾಗಿ ಆಚರಿಸಿದರು. ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರ ನೇತೃತ್ವದಲ್ಲಿ, ನಗರದ ಮೀನಾಕ್ಷಿ ವೃತ್ತದ ಜೆಡಿಎಸ್ ಜಿಲ್ಲಾ ಕಚೇರಿಯಿಂದ ನಗರದ ಅಧಿದೇವತೆ ಶ್ರೀ ಕನಕ ದುರ್ಗಮ್ಮ ದೇವಿ ದೇವಾಲಯದ ವರೆಗೆ ಕುಮಾರಣ್ಣ ಅವರ ಭಾವಚಿತ್ರ ಹಿಡಿದು ಬೃಹತ್ ಬೈಕ್ ರ್ಯಾಲಿ ಮೂಲಕ ತೆರಳಿ ದೇಗುಲದಲ್ಲಿ ವಿಶೇಷ ಪೂಜೆ, ಅರ್ಚನೆ ಸಲ್ಲಿಸಿದರು. ಅಭಿಮಾನಿಗಳು ದೇಗುಲದ ಎದುರು 101 ತೆಂಗಿನಕಾಯಿ ಒಡೆದು ಕುಮಾರಣ್ಣ ಅವರಿಗೆ ದೇವರು ಆರೋಗ್ಯ, ಆಯಿಷ್ಯ ನೀಡಲಿ, 2028ರಲ್ಲಿ ಮತ್ತೆ ಸಿ.ಎಂ.ಆಗಿ ರಾಜ್ಯದ ಜನರ ಸೇವೆ ಮಾಡಲು ಅವಕಾಶ ಕಲ್ಪಿಸಲಿ ಎಂದು ಪ್ರಾರ್ಥಿಸಿದರು. ನಂತರ ದೇವಾಲಯದ ಆವರಣದಲ್ಲಿ ಬೃಹತ್ ಕೇಕ್ ಕತ್ತರಿ, ಅನ್ನದಾನ ಕಾರ್ಯಕ್ರಮ ನಡೆಸಿದರು. ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರು ಮಾತನಾಡಿ, ಮಾಜಿ ಸಿಎಂ, ಕೇಂದ್ರ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು, 2028ರಲ್ಲಿ ಮತ್ತೆ ಸಿ.ಎಂ.ಆಗಿ ಈ ರಾಜ್ಯದ ಜನರ ಸೇವೆ ಮಾಡಿ, ಇತರರಿಗೆ ಮಾದರಿಯಾಗಲಿ. ಕಡಿಮೆ ಅವಧಿಯಲ್ಲಿ ಕುಮಾರಣ್ಣ ಅವರು ಸಿ.ಎಂ. ಆಗಿದ್ದಾಗ, ರೈತರ 25 ಸಾವಿರ ಕೋಟಿ ರೂ. ಸಾಲ ಮನ್ನಾ, ಸಾರಾಯಿ ನಿಷೇಧ, ಲಾಟರಿ ನಿಷೇಧ, ಶಾಲಾ ಮಕ್ಕಳಿಗೆ ಸೈಕಲ್ ವಿತರಣೆ ಸೇರಿದಂತೆ ಅನೇಕ ಜನಪರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದಾರೆ. ದೇವರು ಕುಮಾರಣ್ಣ ಅವರಿಗೆ ಆರೋಗ್ಯ, ಆಯಿಷ್ಯ ನೀಡಿ ರಾಜ್ಯದ ಜನರ ಸೇವೆ ಮಾಡಲು ಅವಕಾಶ ಕಲ್ಪಿಸಲಿ ಎಂದು ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಕುರೆಕೊಪ್ಪ ಸೋಮಪ್ಪ, ನಗರ ಅಧ್ಯಕ್ಷ ಹೊನ್ನೂರು ಸ್ವಾಮಿ (ವಂಡ್ರಿ), ಅಶೋಕ್ ಸಂಗನಕಲ್ಲು, ಮೇಘರಾಜ, ವಸಂತ ಕುಮಾರ್, ಶಿವನಾರಾಯಣ, ಬಸವ, ಹೊಸಿಗೇರಪ್ಪ, ಬಾವಿ ಶಿವಕುಮಾರ್, ಯಲ್ಲನಗೌಡ, ರುದ್ರಮುನಿ, ಪುಷ್ಪಾ, ಜಮೀಲಾ, ಭವಾನಿ, ವಿಜಯ, ರೇಣುಕಾ, ಶಬಾನಾ, ವರಲಕ್ಷ್ಮಿ, ರುಮಾನಾ, ರಾಜೇಶ್ವರಿ, ಜಯಲಕ್ಷ್ಮಿ ಸೇರಿದಂತೆ ಇತರರು ಇದ್ದರು.

# ಸರ್ಕಾರಿ ಶಾಲಾ ಮಕ್ಕಳಗಿಲ್ಲ ಶೌಚಾಲಯ



**ಮಲ್ಲಮ್ಮ ನುಡಿ ವಾರ್ತೆ ಕಾರಟಗಿ:**

ತಾಲೂಕಿನ ಗುಂಡೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಸಿಂಗನಾಳ ಗ್ರಾಮದಲ್ಲಿ ಬರುವ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸುಮಾರು 3 ವರ್ಷದಿಂದ ಮಕ್ಕಳ ಶೌಚಾಲಯ ದುರಸ್ತಿಯಲ್ಲಿದ್ದು, ಸಿಂಗನಾಳ ಗ್ರಾಮದ ಗ್ರಾಮ ಪಂಚಾಯಿತಿ ಅಧ್ಯಕ್ಷರು ಇದ್ದರೂ ಕೂಡ ನಿರ್ಲಕ್ಷಿಸಿದ್ದಾರೆ, ಪಂಚಾಯಿತಿ ಅಧಿಕಾರಿಗಳಿಗೂ ತಿಳಿಸಿದರು ಇಲ್ಲಿವರೆಗೂ ಶಾಲೆ ಮಕ್ಕಳ ಶೌಚಲವೂ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ, ಗ್ರಾಮದ ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾದರು ಶಾಲೆಗಳಿಗಿಲ್ಲ ಸೌಲಭ್ಯ, ದುರಸ್ತಿ ಕುರಿತು ಅಧಿಕಾರಿಗಳಿಗೂ ತಿಳಿಸಿದರು, ಅಧಿಕಾರಿಗಳು ಯಾವುದೇ ಮಕ್ಕಳಿಗೆ ಸೌಲಭ್ಯ ಕಲ್ಪಿಸುತ್ತಿಲ್ಲ,

*ಸ್ಥಳೀಯ ಜನರ ನಿರ್ಲಕ್ಷ*, ಗ್ರಾಮದ ಶಾಲೆಯಲ್ಲಿ ಒಂದರಿಂದ ಎಂಟನೇ ತರಗತಿ ಮಕ್ಕಳು ಓದುತ್ತಿದ್ದು ಅಲ್ಲಿನ ಪಾಲಕರು, ಶಾಲೆಯ ದುರಸ್ತೆ ಬಗ್ಗೆ, ಅಲ್ಲಿನ ಆಡಳಿತ ಮಂಡಲ ಬಗ್ಗೆ, ನಿರ್ಲಕ್ಷಿಸುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ.

ಎರಡು ವರ್ಷಗಳಿಂದ ಆಡಳಿತ ಮಂಡಳಿ ನೇಮಕ ಇಲ್ಲ*: ಶಾಲೆಯಲ್ಲಿ ಓದುವಂತ ಮಕ್ಕಳ ಪಾಲಕರು, ಗ್ರಾಮದ ಯುವಕರು ಹಿರಿಯರು ನಿರ್ಲಕ್ಷಿಸುತ್ತಿರುವುದು ಗಂಭೀರವಾಗಿ ಕಾಣುತ್ತಿದೆ.

ನನ್ನ ಅವಧಿ ಮುಗಿದು ಎರಡು ವರ್ಷ ಆರು ತಿಂಗಳು ಕಳೆದಿದೆ, ಶಾಲೆ ಮುಖ್ಯ ಶಿಕ್ಷಕರು ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರು ನಿರ್ಲಕ್ಷ, ಶಾಲೆಯಲ್ಲಿ ಮಕ್ಕಳು ಊಟದ ವ್ಯವಸ್ಥೆ ಸರಿಯಾಗಿಲ್ಲ, ಮತ್ತು ಮಕ್ಕಳು

ಬಯಲು ಶೌಚಾಲಯಕ್ಕೆ ಹೋಗುವ ವ್ಯವಸ್ಥೆಯಾಗಿದೆ, ಹೆಣ್ಣುಮಕ್ಕಳ ಶೌಚಾಲವು ಸ್ವಚ್ಛತೆ ಇಲ್ಲದಂತೆ ಆಗಿದೆ, ಇದಕ್ಕೆ ಕಾರಣ ಅಲ್ಲಿನ ಮುಖ್ಯ ಶಿಕ್ಷಕರು/ಗ್ರಾಮ ಪಂಚಾಯಿತಿ ಅಧ್ಯಕ್ಷರು ಅಧಿಕಾರಗಳು ನಿರ್ಲಕ್ಷ್ಯ ತೆ–ೂರುತ್ತಾರೆ. ಇದಕ್ಕೆ ಕೂಡಲೇ ಪಾಲಕರು ತಮ್ಮ ಮಕ್ಕಳ ಬಗ್ಗೆ ಗಮನ ಹರಿಸಬೇಕು. ಮಲ್ಲಿಕಾರ್ಜುನಗೌಡ ಮಾಜಿ ಎಸ್‌ಡಿಎಂಸಿ ಅಧ್ಯಕ್ಷರು ಸಿಂಗನಾಳ.

# ಭೀಕರ ರಸ್ತೆ ಅಪಘಾತ ಟ್ರ್ಯಾಕ್ಟರ್ ಖಾಸಗಿ ಬಸ್ ಡಿಕ್ಕಿ ಚಾಲಕ ಸಾವು, 15ಕ್ಕೂ ಹೆಚ್ಚು ಮಂದಿಗೆ ಗಾಯ

**ಮಲ್ಲಮ್ಮ ನುಡಿ ವಾರ್ತೆಕೊಪ್ಪಳ :**




ಹುಲಿಗೆಮ್ಮ ದರ್ಶನಕ್ಕೆ ತೆರಳುತ್ತಿದ್ದ ಭಕ್ತರಿದ್ದ ಟ್ರ್ಯಾಕ್ಟರ್‌ಗೆ ಖಾಸಗಿ ಬಸ್ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಭೀಕರ ರಸ್ತೆ ಅಪಘಾತ ಸಂಭವಿಸಿ ಟ್ರ್ಯಾಕ್ಟರ್ ಚಾಲಕ ಸ್ಥಳದಲ್ಲೇ ಸಾವಿಗೀಡಾದ ಘಟನೆ ಮಂಗಳವಾರ ಬೆಳಗಿನ ಜಾವ ಸಂಭವಿಸಿದೆ.

ಮುನಿರಾಬಾದ್‌ಟಿ.ಬಿ. ಡ್ಯಾಂ ನಡುವಿನ ತುಂಗಭದ್ರಾ ನದಿಗೆ ನಿರ್ಮಿಸಿರುವ ಎರಡನೇ ಸೇತುವೆ ಸಮೀಪದ ರಾಷ್ಟ್ರೀಯ ಹೆದ್ದಾರಿಯಲ್ಲಿ (ಎನ್‌ಎಚ್ 50) ಬೆಳಗಿನ ಜಾವ ಸುಮಾರು 3 ಗಂಟೆ ಸುಮಾರಿಗೆ ಈ ದುರ್ಘಟನೆ ನಡೆದಿದೆ.

ಅಪಘಾತದಲ್ಲಿ ಟ್ರ್ಯಾಕ್ಟರ್ ಚಾಲಕ ಕೆಂಚಪ್ಪ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಟ್ರ್ಯಾಕ್ಟರ್‌ನಲ್ಲಿ ಪ್ರಯಾಣಿಸುತ್ತಿದ್ದ ಸುಮಾರು 15ಕ್ಕೂ ಹೆಚ್ಚು ಭಕ್ತರಿಗೆ ಗಂಭೀರ ಗಾಯಗಳಾಗಿದ್ದು, ಗಾಯಾಳುಗಳನ್ನು ಮುನಿರಾಬಾದ್ ಹಾಗೂ ಕೊಪ್ಪಳ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಕೆಲವರ ಸ್ಥಿತಿ ಚಿಂತಾಜನಕವಾಗಿದೆ ಎಂದು ತಿಳಿದು ಬಂದಿದೆ.

ಇಂದು ಮಂಗಳವಾರವಾದ್ದರಿಂದ ಹರಪನಹಳ್ಳಿ ತಾಲೂಕಿನ ಹೊನ್ನೆನಹಳ್ಳಿಯಿಂದ ಹುಲಿಗೆಮ್ಮ ದರ್ಶನಕ್ಕೆ ಭಕ್ತರು ಟ್ರ್ಯಾಕ್ಟರ್‌ನಲ್ಲಿ ಹುಲಿಗಿಗೆ ತೆರಳುತ್ತಿದ್ದರು. ಟ್ರ್ಯಾಕ್ಟರ್‌ನಲ್ಲಿ 20ಕ್ಕೂ ಹೆಚ್ಚು ಜನರಿದ್ದರು ಎನ್ನಲಾಗಿದೆ. ಬೆಂಗಳೂರಿನಿಂದ ಅಫಜಲಪುರಕ್ಕೆ ತೆರಳುತ್ತಿದ್ದ ಖಾಸಗಿ ವಿ ಆರ್ ಎಲ್ ಬಸ್ ಟ್ರ್ಯಾಕ್ಟರ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನಾ ಸ್ಥಳಕ್ಕೆ ಮುನಿರಾಬಾದ್ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಅಪಘಾತದಿಂದ ಕೆಲಕಾಲ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು.

# ಧ್ವಜ ನಿಧಿ ಸಂಗ್ರಹಣೆ-ನಾಗರಿಕರು ಭಾಗಿಯಾಗಬೇಕು: ಸಂಗಪ್ಪ

**ಮಲ್ಲಮ್ಮ ನುಡಿ ಬಾಗಲಕೋಟೆ:**

ದೇಶದ ರಕ್ಷಣೆಗಾಗಿ ಹೋರಾಡಿದ ಸೈನಿಕರ ತ್ಯಾಗ ಮತ್ತು ಬಲಿದಾನಗಳನ್ನು ಸ್ಮರಿಸುವ ಸಶಸ್ತ್ರ ಪಡೆಗಳ ಧ್ವಜ ದಿನದಂದು ಪ್ರತಿಯೊಬ್ಬ ನಾಗರಿಕರು ಧ್ವಜ ನಿಧಿ ಸಂಗ್ರಹಣೆಯಲ್ಲಿ ಸ್ವಇಚ್ಛೆಯಿಂದ ಪಾಲ್ಗೊಳ್ಳುವ ಮೂಲಕ ಯೋಧರ ಕುಟುಂಬಗಳಿಗೆ ಬೆಂಬಲ ನೀಡಬೇಕು ಎಂದು ಜಿಲ್ಲಾಧಿಕಾರಿ ಸಂಗಪ್ಪ ಕರೆ ನೀಡಿದರು.




ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಹಾಗೂ ಜಿಲ್ಲಾಡಳಿತದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಸಶಸ್ತ್ರ ಪಡೆಗಳ ಧ್ವಜ ಬಿಡುಗಡೆ' ಸಮಾರಂಭದಲ್ಲಿ ಧ್ವಜ ಅನಾವರಣಗೊಳಿಸಿ ಮಾತನಾಡಿದ ಅವರು, ಭಾರತದಲ್ಲಿ ಡಿಸೆಂಬರ್ 7 ರಂದು ಆಚರಿಸಲಾಗುವ ಸಶಸ್ತ್ರ ಪಡೆಗಳ ಧ್ವಜ ದಿನವು ಸೈನಿಕರ ಸಮರ್ಪಣಾ ಮನೋಭಾವವನ್ನು ಗೌರವಿಸುವ ದಿನವಾಗಿದೆ ಎಂದರು.

ಹುತಾತ್ಮ ಯೋಧರನ್ನು ಸ್ಮರಿಸುವುದು ಮಾತ್ರವಲ್ಲದೆ, ನಿವೃತ್ತ ಸೈನಿಕರು, ಯುದ್ಧದಲ್ಲಿ ಮಡಿದ ವೀರಯೋಧರ ವಿಧವೆಯರು ಮತ್ತು ಅವರ ಕುಟುಂಬಗಳ ಕಲ್ಯಾಣ, ಶಿಕ್ಷಣ ಮತ್ತು ಪುನರ್ವಸತಿಗಾಗಿ ನಿಧಿ ಸಂಗ್ರಹಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ರಾಷ್ಟ್ರೀಯ ಏಕತೆ ಮತ್ತು ದೇಶ ಸೇವೆಗೈದವರ ಹಿತಕಾಯುವ ದೃಷ್ಟಿಯಿಂದ 1949ರಲ್ಲಿ ರಕ್ಷಣಾ ಸಚಿವಾಲಯವು ಈ ಸಂಪ್ರದಾಯವನ್ನು ಜಾರಿಗೆ ತಂದಿದೆ. ಈ ದಿನದಂದು ಸೇನೆ, ನೌಕಾಪಡೆ ಮತ್ತು ವಾಯುಪಡೆಯನ್ನು ಪ್ರತಿನಿಧಿಸುವ ಧ್ವಜಗಳನ್ನು ವಿತರಿಸಿ ದೇಣಿಗೆ ಸಂಗ್ರಹಿಸಲಾಗುತ್ತದೆ ಆದ್ದರಿಂದ ಸಾರ್ವಜನಿಕರು ಉದಾರವಾಗಿ ದೇಣಿಗೆ ನೀಡುವಂತೆ ಜಿಲ್ಲಾಧಿಕಾರಿಗಳು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಬಾಗಲಕೋಟೆ ತಹಶೀಲ್ದಾರ್ ವಾಸುದೇವ ವಿ. ಸ್ವಾಮಿ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರು, ಜಿಲ್ಲೆಯ ವೀರನಾರಿಯರು, ಮಾಜಿ ಸೈನಿಕರು, ಸೈನಿಕರ ಅವಲಂಬಿತರು ಹಾಗೂ ಇಲಾಖೆಯ ಸಿಬ್ಬಂದಿ ಉಪಸ್ಥಿತಿದ್ದರು.

# ಡಿ.22ರಂದು ಸಿರಿಧಾನ್ಯಗಳ ಜಾಥಾ ಕಾರ್ಯಕ್ರಮ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಇಲ್ಲಿನ ಕೃಷಿ ಇಲಾಖೆಯಿಂದ ಸಿರಿಧಾನ್ಯ, ಸಾವಯವ ಉತ್ಪನ್ನಗಳ ಕುರಿತು ಹಾಗೂ ಗ್ರಾಹಕರಿಗೆ ಜಾಗೃತಿ ಮೂಡಿಸಲು ಸಿರಿಧಾನ್ಯಗಳ ಜಾಥಾ ಕಾರ್ಯಕ್ರಮ-2025ರ ಡಿಸೆಂಬರ್ 22ರ ಬೆಳಿಗ್ಗೆ 6ಗಂ-ಟೆಗೆ ಹಮ್ಮಿಕೊಳ್ಳಲಾಗಿದ್ದು, ಜಾಗೃತಿ ನಡಿಗೆಯಲ್ಲಿ ಎಲ್ಲರೂ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಕೋರಿದ್ದರೆ.

ಜಾಗೃತಿ ನಡಿಗೆವು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ ಸಭಾಂಗಣದ ಮುಂಭಾಗ ದಿಂದ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣ,

ಜಂಟಿ ಕೃಷಿ ನಿರ್ದೇಶಕರ ಕಚೇರಿ, ಬಸವೇಶ್ವರ ವೃತ್ತ ಮಾರ್ಗವಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಆವರಣದವರೆಗೆ ಹಮ್ಮಿಕೊಳ್ಳಲಾಗಿದ್ದು, ಎಲ್ಲರೂ ಭಾಗವಹಿಸಿ ರೈತರಿಗೆ ಮತ್ತು ಗ್ರಾಹಕರಿಗೆ ಉತ್ತೇಜನ ನೀಡುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಪ್ರಟಕಣೆಯಲ್ಲಿ ತಿಳಿಸಿದ್ದಾರೆ.

## ವಿಜಯನಗರ ಶ್ರೀಕೃಷ್ಣದೇವರಾಯ ವಿವಿಯಲ್ಲಿ ಎರಡು ದಿನಗಳ ಪುಸ್ತಕ ಪ್ರಕಾಶನ ಕಮ್ಮಟ

# ಮುದ್ರಣ ತಂತ್ರಜ್ಞಾನಕ್ಕೆ ಕೊನೆಯಿಲ್ಲ: ಡಾ.ವಸುಂಧರಾ ಭೂಪತಿ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಮುದ್ರಣಗೊಳ್ಳುವ ಪುಸ್ತಕಗಳಿಗೂ ಹಾಗೂ ಮುದ್ರಣ ತಂತ್ರಜ್ಞಾನಕ್ಕೂ ಜೀವ ಸಂಕುಲ ಇರುವವರೆಗೂ ಸಾವಿಲ್ಲ ಎಂದು ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷರಾದ ಡಾ.ವಸುಂಧರಾ ಭೂಪತಿ ಹೇಳಿದರು.



ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಹಾಗೂ ಕರ್ನಾಟಕ ಪ್ರಕಾಶಕರ ಸಂಘದ ಜಂಟಿ ಸಹಭಾಗಿತ್ವದಲ್ಲಿ ಆಯೋಜಿಸಿರುವ ಎರಡು ದಿನಗಳ ಪುಸ್ತಕ ಪ್ರಕಾಶನ ಕಮ್ಮಟ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಎಐ, ಇ-ಪುಸ್ತಕಗಳು, ಪ್ರಿಂಟ್ ಆನ್ ಡಿಮಾಂಡ್(ಪಿಓಡಿ) ಮುಂತಾದ ತಂತ್ರಜ್ಞಾನದ ಯುಗದಲ್ಲಿ ಕೇವಲ ಗಂಟೆಯಲ್ಲಿಯೇ ಪುಸ್ತಕವನ್ನು ಹೊರತರಬಹುದು. ಆದರೆ ಮುದ್ರಣವಾಗುವ ಪುಸ್ತಕಗಳು, ದಿನನಿತ್ಯ ಬಳಸುವ (ಕರೆನ್ಸಿ) ನೋಟುಗಳು ಮುದ್ರಣದ ಅವಿಭಾಜ್ಯ ಅಂಗವಾಗಿದ್ದು, ಅವುಗಳು ಎಂದಿಗೂ ನಿಲ್ಲುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಕ್ರಿ.ಶ. 400ರಲ್ಲಿ ಚೀನಾದಲ್ಲಿ ಉಗಮವಾಗ ಹಿರಾಕಸೂತ್ರ ಎಂಬ ಮುದ್ರಣವು ಮುಂದೆ ಜಪಾನ್, ಜರ್ಮನಿ ದೇಶಗಳಲ್ಲಿ ಅಚ್ಚುಮೊಳೆಗಳ ಮೂಲಕ ಮುಂದುವರೆದು ಗುಟೆನ್‌ಬರ್ಗ್ ಪ್ರೆಸ್ ವಿಕಸನಕ್ಕೆ ನಾಂದಿ ಹಾಡಿದವು. ಕ್ರಿ.ಶ.1556ರಲ್ಲಿ ಭಾರತದಲ್ಲಿ ಪ್ರಥಮ ಮುದ್ರಣ ಯಂತ್ರವು ಗೋವಾದಲ್ಲಿ ಬಂದಿಳಿಯಿತು. 1578ರಲ್ಲಿ ಭಾರತದ ಪ್ರಥಮ ಭಾಷಾ ಪುಸ್ತಕವಾದ ತಮಿಳಿನ ಥಂಬಿರನ್ ಒನಕ್ಕಮ್ ಪ್ರಕಟವಾಯಿತು ಎಂದು ನೆನೆದರು.

ಕ್ರಿ.ಶ. 1826ರಲ್ಲಿ ಕರ್ನಾಟಕದಲ್ಲಿ ಪ್ರಥಮ ಮುದ್ರಣ ಯಂತ್ರವನ್ನು ಬಳ್ಳಾರಿಗೆ ಜಾನ್ ಹ್ಯಾಂಡ್ಸ್ ಎಂಬ ಬ್ರಿಟೀಷ್ ಅಧಿಕಾರಿಯು ಧರ್ಮ ಪ್ರಚಾರಕ್ಕಾಗಿ ತರಿಸಿಕೊಂಡಿದ್ದನು ಎಂದು ತಿಳಿಸಿದರು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿ ವೇದಿಕೆಯಲ್ಲಿದ್ದ ವಿವಿಯ ಸಿಂಡಿಕೇಟ್ ಸದಸ್ಯರಾದ ಅಮರೇಶ್ ನುಗಡೋಣಿ ಅವರು ಮಾತನಾಡಿ, ಲೇಖಕ, ಪ್ರಕಾಶಕ, ಓದುಗ ಮತ್ತು ಪುಸ್ತಕಗಳು ಎಂಬ ನಾಲ್ಕು ದಿಸೆಯ ಅನನ್ಯವಾದ ಸಮಾಗಮ ನೆಲೆಗೊಂಡಿದೆ. 10ನೇ ಶತಮಾನದಲ್ಲಿ ಶಿಕ್ಷಿತರ ಪ್ರಮಾಣ ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿದ್ದರಿಂದ ವಚನಕಾರರು, ಸಂತಕವಿಗಳು ತಮ್ಮ ಅನುಭವ, ಸಂವಾದ, ಚರ್ಚೆಗಳು ಎಂಬ ಮೌಖಿಕ ಸಂವಹನದ ಮೂಲಕ ಜನಪದ ಕಾವ್ಯಗಳನ್ನು ಎಲ್ಲೆಡೆ ಹರಡಿದರು ಎಂದರು.

ಅಕ್ಷರ ಸಂಸ್ಕೃತಿ ಬ್ರಿಟೀಷರಿಂದ ಬಂದ ಬಳುವಳಿಯಾಗಿದೆ. ಅವರು ಭಾರತದ ಹಸ್ತಪ್ರತಿಗಳನ್ನು ಶೋಧ ಮಾಡಿ ಪ್ರಚುರಪಡಿಸಿದರು. ಶಿಕ್ಷಣದ ಮಹತ್ವ ಅರಿತಿದ್ದ ಅಂದಿನ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸುರವರು ಹಿಂದುಳಿದ ಮತ್ತು ಶೋಷಿತರ ಧ್ವನಿಯಾಗಿದ್ದ ಅಂಬೇಡ್ಕರ್ ಅವರ ಆಶಯವನ್ನು ಪೂರೈಸಲು ಸರ್ಕಾರದ ವತಿಯಿಂದ ರಾಜ್ಯದಾದ್ಯಂತ ಗ್ರಂಥಾಲಯಗಳನ್ನು ನಿರ್ಮಾಣ ಮಾಡಿದರು. ಇಂದು ರಾಜ್ಯದಾದ್ಯಂತ 500ಕ್ಕೂ ಹೆಚ್ಚು ಗ್ರಂಥಾಲಯಗಳು ನೆಲೆಗೊಂಡಿವೆ ಎಂದು ತಿಳಿಸಿದರು.

ಕಳೆದ 7 ವರ್ಷಗಳಿಂದ ಸರ್ಕಾರದಿಂದ ಪುಸ್ತಕ ಖರೀದಿಸಿ ಗ್ರಂಥಾಲಯಗಳಿಗೆ ಪೂರೈಸುವ ಕಾರ್ಯ ಸ್ಥಗಿತಗೊಂಡಿದೆ. ಪುಸ್ತಕ ಸಂಸ್ಕೃತಿ ಇಂದಿನ ದಿನಮಾನದಲ್ಲಿ ಪುಸ್ತಕೋದ್ಯಮವಾಗಿ ಬದಲಾಗಿದೆ. ಅಭಿನವ ಪ್ರಕಾಶನ, ಲೋಹಿಯಾ ಪ್ರಕಾಶನದಂತಹ ದಿಟ್ಟ ಪ್ರಕಾಶಕರು ಪುಸ್ತಕ ಮುದ್ರಣವನ್ನು ಶಿಕ್ಷಣ ಸೇವೆ ಎಂದು ಪರಿಗಣಿಸಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿವಿಯ ಕುಲಪತಿಗಳಾದ ಪ್ರೊ.ಎಂ ಮುನಿರಾಜು ಮಾತನಾಡಿ, ಕಲೆ, ಸಾಹಿತ್ಯದ ಆಸಕ್ತಿ ಎಲ್ಲರಲ್ಲಿಯೂ ಕ್ಷೀಣಿಸುತ್ತಿದೆ. ಓದುವ, ಬರೆಯುವ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಸ್ನಾತ-ಕೋತ್ತರ ಕೇಂದ್ರ ನಂದಿಹಳ್ಳಿಯಲ್ಲಿ ವಿವಿಧ ತಾಂತ್ರಿಕ ಕೋರ್ಸ್ಗಳನ್ನು ಶೀಘ್ರದಲ್ಲೆ ಆರಂಭಿಸುವುದಾಗಿ ಕುಲಪತಿಗಳು ಘೋಷಿಸಿದರು.

ವಿವಿಯ ಮೌಲ್ಯಮಾಪನ ಕುಲಸಚಿವರಾದ ಪ್ರೊ ಎನ್ ಎಂ ಸಾಲಿ ಎರಡು ದಿನಗಳ ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ವಿವಿಯ ಸಿಂಡಿಕೇಟ್ ಸದಸ್ಯರಾದ ಬಿ ಪೀರ್‌ಬಾಷಾ, ಶಿವಕುಮಾರ್ ಕೆ ಮತ್ತು ಕರ್ನಾಟಕ ಪ್ರಕಾಶಕರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ನ. ರವಿಕುಮಾರ್ ವೇದಕೆಯಲ್ಲಿದ್ದರು. ಕಾರ್ಯಕ್ರಮದ ಸಂಯೋಜಕರಾದ ವಿವಿಯ ಪ್ರಸಾರಾಂಗದ ಪ್ರಭಾರ ನಿರ್ದೇಶಕರಾದ ಪ್ರೊ ತಿಪ್ಪೇರುದ್ರ ಪ್ರಾಸ್ತಾವಿಕವಾಗಿ ಮಾತನಾಡಿದರು. ರಸಾಯನಶಾಸ್ತ್ರ ವಿಭಾಗದ ಪ್ರೊ ಅರುಣ್‌ಕುಮಾರ್ ಲಗಶೆಟ್ಟಿ ಸ್ವಾಗತಿಸಿದರು. ಡಾ ಶಶಿಧರ್ ಕೆಲ್ಲೂರ್ ನಿರೂಪಿಸಿದರು.

ಎರಡು ದಿನಗಳ ಕಮ್ಮಟದಲ್ಲಿ ಒಟ್ಟು 5 ಚರ್ಚಾಗೋಷ್ಠಿಗಳು ನಡೆಯಲಿವೆ. ರಾಜ್ಯದ ವಿವಿಧ ಪ್ರಕಾಶಕರು, ಚಿಂತಕರು, ಉಪನ್ಯಾಸಕರುಗಳು, ವಿದ್ಯಾರ್ಥಿಗಳು ಸೇರಿದಂತೆ ಒಟ್ಟು ನೂರಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ವಿವಿಯ ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರುಗಳು, ಬೋಧಕ-ಬೋಧಕೇತರ ಸಿಬ್ಬಂದಿ ಇದ್ದರು.

# ಸ್ವದೇಶಿ ಉತ್ಪನ್ ಬಳಸಿ ವಿಕಸ ಭಾರತಕ್ಕೆ ಕೈಜೋಡಿಸಿ: ಚರಂತಿಮಠ



ಮಲ್ಲಮ್ಮ ನುಡಿ

ಬಾಗಲಕೋಟೆ: ವಿಕಸಿತ ಭಾರತ ಆಗಬೇಕಾದರೆ ಮೊದಲು ಆತ್ಮನಿರ್ಭರ ಸ್ವಾವಲಂಬಿ ಭಾರತಕ್ಕೆ ಸ್ವದೇಶಿ ಬಳಕೆ ಅಗತ್ಯ ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಹೇಳಿದರು.

ನಗರದ ಕಿಲ್ಲಾ ಓಣಿಯಲ್ಲಿನ ಅಟಲ್ ಬಿಹಾರಿ ವಾಜಪಾಯಿ ಮಹಾಶಕ್ತಿ ಕೇಂದ್ರ ವಾರ್ಡಿನಲ್ಲಿ ಪಕ್ಷದ ಮುಖಂಡರಾದ ಗುಂಡುರಾವ ಶಿಂಧೆ ಅವರ ಮನೆಯಿಂದ ಸ್ವದೇಶಿ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆತ್ಮ ನಿರ್ಭರ ಭಾರತಕ್ಕೆ ಮೊದಲು ದೇಶದ ಜನರು ಸ್ವದೇಶದಲ್ಲಿ ಉತ್ಪಾದಿಸಿದ ವಸ್ತುಗಳನ್ನು ಬಳಸಬೇಕು. ಡಿಜಿಟಲ್ ಕೌಶಲಗಳನ್ನು ಹೆಚ್ಚಿಸಿಕೊಳ್ಳಬೇಕು. ಭಾಷಾ ಸಾಮರ್ಥ್ಯ, ಕೌಶಲ ಕಲಿಯಬೇಕು. ಸ್ವದೇಶಿ ಮೇಳ, ಸ್ವದೇಶಿ ಸಂತೆಗಳಾಗುವಂತೆ ಮಾಡಬೇಕು ಎಂದು ಹೇಳಿದರು.

ಲಕ್ಷ್ಮೀ ನಾರಾಯಣ ಕಾಸಟ್, ಗುಂಡುರಾವ ಶಿಂಧೆ, ಶ್ರೀನಾಥ ಸಜ್ಜನ, ತಾನಾಜಿ ಜಮಖಂಡಿ, ಶ್ರೀಕಾಂತ ಪತ್ತಾರ, ಶಂಕರ ಕದಂಬ, ರಂಗನಾಥ ಜವಳಿ, ರಾಜು ಮೋರೆ, ದಶರಥ ಪಥಂಗೆ, ಚಂದ್ರು ರಾಮವಾಡಗಿ, ರಮೇಶ ಉಪ್ಪಾರ, ಭೀಮಶಿ ಮೋರೆ, ಉಮೇಶ ಪಡಸಲಗಿ, ಸಂತೋಷ ಚಿಲ್ಲಾಳಶೆಟ್ಟಿ, ಸುಜಾತಾ ಶಿಂದೆ, ಜ್ಯೋತಿ ಭಜಂತ್ರಿ, ಶಶಿಕಲಾ ಮಜ್ಜಗಿ, ಸರಸ್ವತಿ ಕುರಬರ, ಬಸವರಾಜ ಯಂಕಂಚಿ, ರವಿ ಧಾಮಜಿ, ಬಸವರಾಜ ಹುನಗುಂದ, ಉಮೇಶ ಹಂಚಿನಾಳ, ಶ್ರೀಧರ ನಾಗರಬೆಟ್ಟ, ರಾಜು ಶಿಂತ್ರೆ ಭಾಗವಹಿಸಿದ್ದರು.

# ಗ್ಯಾರಂಟಿ ಯೋಜನೆ ಉತ್ತಮ ಪ್ರಗತಿ ಸಾಧಿಸಿ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,:**

ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳು ಜನರಲ್ಲಿ ಉತ್ತಮ ಪ್ರತಿಕ್ರಿಯೆ ಪಡೆದಿದ್ದು, ಬಳ್ಳಾರಿ ಜಿಲ್ಲೆಯಾದ್ಯಂತ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉತ್ತಮ ಪ್ರಗತಿ ಸಾಧಿಸಿಬೇಕು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಹೇಳಿದರು. ನಗರದ ಕೋಟೆ ಪ್ರದೇಶದ ಜಿಲ್ಲಾ ಪಂಚಾಯತ್ ನಜೀರ್ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಐದು ಗ್ಯಾರಂಟಿ ಯೋಜನೆಗಳ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರವು ಮಹಿಳೆಯರ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಿದೆ. ಗೃಹಲಕ್ಷ್ಮೀ ಮತ್ತು ಶಕ್ತಿ ಯೋಜನೆಯು ಮಹಿಳೆಯರಿಗೆ ಸ್ವವಲಂಬನೆಯ ಜೀವನ ಕಟ್ಟಿಕೊಳ್ಳಲು ಸಹಾಯ ಮಾಡಿದೆ. ಪಂಚ ಗ್ಯಾರಂಟಿ ಯೋಜನೆಯು ಯಾವುದೇ ಜಾತಿ, ಧರ್ಮಕ್ಕೆ ಸೀಮಿತವಾಗಿರದೇ ಎಲ್ಲಾ ವರ್ಗದ ಜನರಿಗೆ ತಲುಪುತ್ತಿದೆ ಎಂದರು. ಪಂಚಗ್ಯಾರಂಟಿ ಯೋಜನೆಗಳ ಸಕಾಲಿಕ ಜಾರಿಗೆ ಜನರಿಂದ ಉತ್ತಮ ಪ್ರತಿಕ್ರಿಯೆ ದೊರಕಿದ್ದು, ಸರ್ಕಾರದ ಕಲ್ಯಾಣ ಕಾರ್ಯಗಳು ತಲುಪುತ್ತಿರುವುದಕ್ಕೆ ಇದೊಂದು ಸಾಕ್ಷಿಯಾಗಿದೆ. ಅದೇರೀತಿಯಾಗಿ ತಾಪಂ ಮಟ್ಟದಲ್ಲಿಯೂ ಪ್ರಗತಿ ಪರಿಶೀಲನಾ ಸಭೆ ನಡೆಸಬೇಕು ಎಂದು ಸರ್ಕಾರದ ನಿರ್ದೇಶನವಿದ್ದು, ತಾಲ್ಲೂಕು ಅಧ್ಯಕ್ಷರ ನೇತೃತ್ವದಲ್ಲಿ ಎಲ್ಲಾ ತಾಲ್ಲೂಕಿನಲ್ಲಿ 3-4 ಗ್ರಾಮ ಪಂಚಾಯತ್ ಫಲಾನುಭವಿಗಳ ಸಮಸ್ಯೆ ಕುರಿತು ಗ್ರಾಮ ಸಭೆ ಅಥವಾ ಇನ್ನಿತರೆ ಪೂರಕ ಸಭೆ ಜರುಗಿಸಲು ಸೂಕ್ತ ಕಾರ್ಯಯೋಜನೆ ರೂಪಿಸಬೇಕು. ತಾಲ್ಲೂಕು ಸಮಿತಿ ರಚಿಸಬೇಕಿದೆ. ಈ ಕುರಿತು ಸರ್ಕಾರದ ನಿರ್ದೇಶನವಿದೆ ಎಂದರು.

ಗೃಹಲಕ್ಷ್ಮೀ ಯೋಜನೆಯಡಿ ಜಿಲ್ಲೆಯ ಒಟ್ಟು 29,9,004 ಲಕ್ಷ ಫಲಾನುಭವಿಗಳ ಪೈಕಿ 28,9,938 ಫಲಾನುಭವಿಗಳಿಗೆ ಸಹಾಯಧನ ನೆರವು ತಲುಪಿದ್ದು, ಶೇ.96.97 ರಷ್ಟು ಪ್ರಗತಿಯಾಗಿದೆ. ಈವರೆಗೆ ಈ ಯೋಜನೆಯಡಿ ಜಿಲ್ಲೆಗೆ 1259.16 ಕೋಟಿ ರೂ. (2023 ರ ಆಗಸ್ಟ್ ತಿಂಗಳಿನಿಂದ 2025 ಆಗಸ್ಟ್ ವರೆಗೆ) ಸರ್ಕಾರ ಪಾವತಿಸಿದೆ. ಜಿಲ್ಲೆಯಲ್ಲಿ 223 ಲಿಂಗತ್ವ ಅಲ್ಪಸಂಖ್ಯಾತ ಫಲಾನುಭವಿಗಳಿಗೆ ಗೃಹಲಕ್ಷ್ಮೀ ಯೋಜನೆಯಡಿ ಸಹಾಯಧನ ದೊರಕಿದ್ದು, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಅವರನ್ನು ಈ ಯೋಜನೆಯಡಿ ನೋಂದಣಿ ಮಾಡಿಸಲಾಗುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ಅವರು ಸಭೆಗೆ ತಿಳಿಸಿದರು.

ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಒದಗಿಸಲಾಗಿದ್ದು, ಜಿಲ್ಲೆಯಲ್ಲಿ 6 ಘಟಕಗಳಿವೆ. ದಿನಕ್ಕೆ 68 ಸಾವಿರಕ್ಕಿಂತ ಹೆಚ್ಚು ಮಹಿಳಾ ಪ್ರಯಾಣಿಕರು




ಉಚಿತ ಪ್ರಯಾಣ ಮಾಡುತ್ತಿದ್ದಾರೆ. ಈವರೆಗೆ ಒಟ್ಟು 622.50 ಕೋಟಿ ಮಹಿಳೆಯರು ಪ್ರಯಾಣಿಸಿದ್ದಾರೆ. ಯೋಜನೆ ಜಾರಿಯಾದಾಗಿನಿಂದ ಇಲ್ಲಿಯವರೆಗೆ ರೂ.244.47 ಕೋಟಿ (2023 ರ ಜೂನ್ ತಿಂಗಳಿನಿಂದ 2025ರ ಅಕ್ಟೋಬರ್ ವರೆಗೆ) ವೆಚ್ಚವಾಗಿದೆ ಎಂದು ಕೆಕೆಆರ್‌ಟಿಸಿ ಬಳ್ಳಾರಿ ವಿಭಾಗದ ಅಧಿಕಾರಿಗಳು ಸಭೆಗೆ ತಿಳಿಸಿದರು. ಇದಕ್ಕೆ ಬಳ್ಳಾರಿ ತಾಲ್ಲೂಕು ಗ್ಯಾರಂಟಿ ಅಧ್ಯಕ್ಷರು ಪ್ರತಿಕ್ರಿಯಿಸಿ, ಅಧಿಕಾರಿಗಳಿಗೆ ಹೇಳಿದರು. ಗೃಹಜ್ಯೋತಿ ಯೋಜನೆಯಡಿ ನೋಂದಾಯಿಸಿಕೊಂಡ 2.97 ಲಕ್ಷ ಮನೆಗಳಿಗೆ ಉಚಿತ ವಿದ್ಯುತ್ ಪ್ರಯೋಜನ ತಲುಪಿದ್ದು, ಪ್ರಗತಿ ಪ್ರಮಾಣ ಶೇ.98 ಪ್ರಗತಿಯಾಗಿದೆ. ಈ ಯೋಜನೆಗೆ ರೂ.374 ಕೋಟಿ ಜಿಲ್ಲೆಯ ಅರ್ಹ ಫಲಾನುಭವಿಗಳಿಗೆ ವೆಚ್ಚವಾಗಿದೆ ಎಂದು ಜೆಸ್ಕಾಂ ಅಧಿಕಾರಿಗಳು ಸಭೆಗೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧ್ಯಕ್ಷರು ಜಿಲ್ಲೆಯಲ್ಲಿ ಪ್ರತಿ ಮನೆಗೂ ಮೀಟರ್ ಇರುವ ಮತ್ತು ಇಲ್ಲದೆ ಇರುವ ಬಗ್ಗೆ ಮಾಹಿತಿ ನೀಡಬೇಕು. ಮೀಟರ್‌ನ ದರದ ಬಗ್ಗೆ ಮತ್ತು ಪ್ರತಿ ಮನೆಗೆ ಮೀಟರ್ ಅವಳವಡಿಸಿಕೊಳ್ಳುವುದರ ಬಗ್ಗೆ ಭಿತ್ತಿಪತ್ರ ಹೊರಡಿಸಿ ಪ್ರತಿ ತಾಲ್ಲೂಕು ಅಧ್ಯಕ್ಷರಿಗೆ ವಿತರಿಸಿ, ಮೀಟರ್ ಅಳವಡಿಕೆಯ ಬಗ್ಗೆ ಗ್ರಾಮಗಳಲ್ಲಿ ಜಾಗೃತಿ ಮೂಡಿಸಬೇಕು ಎಂದು ಸೂಚಿಸಿದರು. ಜೆಸ್ಕಾಂ ಅಧಿಕಾರಿಗಳು ಇದಕ್ಕೆ ಪ್ರತಿಕ್ರಿಯಿಸಿ ಈಗಾಗಲೇ ಮೀಟರ್ ಅಳವಡಿಕೆಗೆ 2000 ಸಾವಿರದ ಒಳಗೆ ದರ ನಿಗಧಿ ಮಾಡಿದ್ದು, ಪ್ರತಿ ಮನೆಗೂ ಮೀಟರ್ ಅಳವಡಿಸಲಾಗುತ್ತಿದೆ ಹಾಗೂ ವಿದ್ಯುತ್ ಸಂಬಂಧಿತ ಸಮಸ್ಯೆಗಳಿಗೆ 1912 ಸಹಾಯವಾಣಿ ಸಂಖ್ಯೆಯ ಮಾಹಿತಿ ನೀಡಲಾಗುತ್ತಿದೆ. ವಿದ್ಯುತ್ ಸಮಸ್ಯೆ ಪರಿಹರಿಸಲು 24*7 ವಾಹನಗಳು ಇವೆ ಎಂದು ಹೇಳಿದರು. ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯ ಒಟ್ಟು 1.81 ಕೋಟಿ ಪಡಿತರ ಚೀಟಿಗಳ ಫಲಾನುಭವಿಗಳಿಗೆ ಒಟ್ಟು 292.29 ಕೋಟಿ ರೂ. ಡಿಬಿಟಿ ಮೂಲಕ ಹಣ ಪಾವತಿಸಲಾಗಿದ್ದು, 2025 ರ ಫೆಬ್ರವರಿ ತಿಂಗಳಿನಿಂದ ಹಣ ಬದಲಾಗಿ, ಪಡಿತರ ಅಕ್ಕಿ ಮತ್ತು ಜೋಳ ಸಹ ವಿತರಿಸಲಾಗುತ್ತಿದೆ. ಒಟ್ಟು 53 ಲಕ್ಷ ಕ್ವಿಂಟಾಲ್‌ಗೆ 122.65 ಕೋಟಿ ರೂ. ವೆಚ್ಚವಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರವು ತೊಗರಿ ಬೇಳೆ, ಹೆಸರು, ಉಪ್ಪು, ಸಕ್ಕರೆ, ಅಡುಗೆ ಎಣ್ಣೆ ಸೇರಿದ ಆಹಾರ ಕಿಟ್ ವಿತರಿಸಲು ನಿರ್ಧರಿಸಲಾಗಿದ್ದು, 1-2 ಸದ್ಯಸರಿದ್ದರೆ ಅರ್ಧ ಕೆ.ಜಿ ಯಂತೆ ಕಿಟ್, 3-4 ಸದಸ್ಯರಿದ್ದರೆ 1 ಕೆ.ಜಿ ಯಂತೆ ಹಾಗೂ 4-5 ಕ್ಕಿಂತ ಹೆಚ್ಚು ಸದಸ್ಯರಿಗೆ 1 ವರೆ ಕೆ.ಜಿ ಯಂತೆ ವಿತರಿಸಲಾಗುವುದು ಎಂದು ಆಹಾರ ಇಲಾಖೆಯ ಅಧಿಕಾರಿಗಳು ಸಭೆಗೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಪಂ ಸಿಇಒ ಅವರು, ಪಡಿತರ ಚೀಟಿಯಲ್ಲಿ ಮಹಿಳಾ ಮುಖ್ಯಸ್ಥರು ಮರಣ ಹೊಂದಿದ್ದರೆ ಅದರ ಬಗ್ಗೆ ಮಾಹಿತಿಯನ್ನು ಮಹಿಳಾ ಅಭಿವೃದ್ಧಿ ಇಲಾಖೆಗೆ ತಿಳಿಸಬೇಕು. ಇದರಿಂದ ಮರಣ ಹೊಂದಿದ ಮುಖ್ಯಸ್ಥರ ನಂತರ ಇನ್ನೋರ್ವ ಮಹಿಳಾ ಸದಸ್ಯೆಗೆ ಗೃಹಲಕ್ಷ್ಮೀ ಯೋಜನೆ ಪ್ರಯೋಜನ ಸಿಗಲಿದೆ ಎಂದು ಹೇಳಿದರು. ಯುವ ನಿಧಿ ಯೋಜನೆ ಮೂಲಕ 10699 ನೋಂದಾಯಿಸಿಕೊಂಡ ಅರ್ಹ ಅಭ್ಯರ್ಥಿಗಳಿಗೆ ಇಲ್ಲಿಯವರೆಗೆ ರೂ.21.99 ಕೋಟಿ ಹಣಕಾಸು ನೆರವು ತಲುಪಿದ್ದು, ಇದರಿಂದ ನಿರುದ್ಯೋಗ ಯುವಕರಿಗೆ ಸಹಕಾರಿಯಾಗಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿಗಳು ಅವರು ಸಭೆಗೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಪಂ ಸಿಇಒ ಅವರು, ಯುವನಿಧಿ ಯೋಜನೆಗೆ ನೋಂದಾಯಿಸಿಕೊಂಡ ಅಭ್ಯರ್ಥಿಗಳು ಅವರು ಕೆಲಸಕ್ಕೆ ಸೇರಿದ ಬಗ್ಗೆ ವಿಚಾರಿಸಿ ಕೆಲಸ ಸಿಕ್ಕಿದ ನಂತರವು ಯೋಜನೆಯ ಪ್ರಯೋಜನ ಪಡೆಯುತ್ತಿರುವುದರ ಬಗ್ಗೆ ಗಮನ ವಹಿಸಿಬೇಕು. ಉದ್ಯೋಗ ಮೇಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜಾಗೃತಿ ಮೂಡಿಸಬೇಕು ಎಂದರು. ಅದೇರೀತಿಯಾಗಿ ಗೃಹಲಕ್ಷ್ಮೀ ಇಒ ಗಳಿಗೆ ನಿರ್ದೇಶನ ನೀಡಿದ ಅವರು, ಎನ್‌ಪಿಸಿಐ ಲಿಂಕ್ ಮಾಡಿಸದೇ ಇರುವ 904 ಮತ್ತು ಆಧಾರ್ ಇ-ಕೆವೈಸಿ ಮಾಡಿಸದೇ ಇರುವ 109 ಫಲಾನುಭವಿಗಳ ಮಾಹಿತಿ ಪಡೆದು ಕೂಡಲೇ ಪರಿಹರಿಸಬೇಕು ಎಂದು ಹೇಳಿದರು. ಜಿಲ್ಲೆಯಲ್ಲಿ ಆಯೋಜಿಸಲಾಗುವ ಉದ್ಯೋಗ ಮೇಳಗಳಲ್ಲಿ 'ಯುವ ನಿಧಿ' ಯೋಜನೆ ಕುರಿತು ಹೆಚ್ಚು ಪ್ರಚಾರ ನೀಡಬೇಕು ಎಂದು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಂ.ಆಶಾಲತಾ, ಬಳ್ಳಾರಿ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಗೋನಾಳ್ ಎಂ.ನಾಗಭೂಷಣ ಗೌಡ, ಕುರುಗೋಡು ತಾಲ್ಲೂಕು ಅಧ್ಯಕ್ಷ ಜಿ.ಬಸವನಗೌಡ, ಸಿರುಗುಪ್ಪ ತಾಲ್ಲೂಕು ಅಧ್ಯಕ್ಷ ಮಾರುತಿ ವರಪ್ರಸಾದ್ ರೆಡ್ಡಿ, ಸಂಡೂರು ತಾಲ್ಲೂಕು ಅಧ್ಯಕ್ಷ ನೂರುದ್ದೀನ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ಸೇರಿದಂತೆ ತಾಪಂ ಇಒಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಬೀದಿ ನಾಯಿಗಳ ಹಾವಳಿ ತಪ್ಪಿಸಲು ಅಗತ್ಯ ಕ್ರಮಕೈಗೊಳ್ಳಿ: ಜಿಲ್ಲಾಧಿಕಾರಿ ನಿತೀಶ್ ಕೆ.



**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಜಿಲ್ಲೆಯಲ್ಲಿ ಬೀದಿ ನಾಯಿಗಳ ಹಾವಳಿ ತಪ್ಪಿಸಲು ನಗರ ಸ್ಥಳೀಯ ಸಂಸ್ಥೆಗಳು ಅಗತ್ಯ ಕ್ರಮಕೈಗೊಳ್ಳಬೇಕು. ಸಾರ್ವಜನಿಕರಿಗೂ ಜಾಗೃತಿ ಮೂಡಿಸುವ ಕೆಲಸ ಮಾಡಬೇಕೆಂದು ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಡಿಸೆಂಬರ್ 17ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇ-ರಿಯ ವಿಡಿಯೋ ಕಾನ್ಫರೆನ್ಸ್ ಸಭಾಂಗಣದಲ್ಲಿ ಜಿಲ್ಲಾ ಪ್ರಾಣಿದಯಾ ಸಂಘದ ವತಿಯಿಂದ ಬೀದಿ ನಾಯಿಗಳ ಹಾವಳಿ ನಿಯಂತ್ರಣ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬೀದಿ ನಾಯಿಗಳ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ, ರೇಬಿಸ್ ಲಸಿಕೆ ತಿಳುವಳಿಕೆ ಮೂಡಿಸುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಿಲ್ಲೆಯಲ್ಲಿ ಹಮ್ಮಿಕೊಳ್ಳಬೇಕು. ಅಲ್ಲದೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಆದೇಶದಲ್ಲಿನ ಅಂಶಗಳನ್ನು ಕೂಡಲೇ ಕ್ರಿಯಾಶೀಲರಾಗಿ ಸೂಕ್ತ ಕ್ರಮವಹಿಸಬೇಕೆಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಸರ್ಕಾರಿ ಹಾಗೂ ಖಾಸಗಿ ಶೈಕ್ಷಣಿಕ ಸಂಸ್ಥೆಗಳು, ಜಿಲ್ಲಾ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ವೈದ್ಯಕೀಯ ಕಾಲೇಜುಗಳು ಸೇರಿದಂತೆ ಸಾರ್ವಜನಿಕ ಕ್ರೀಡಾಂಗಣಗಳು ಅಥವಾ ಕ್ರೀಡಾ ಸಂಕೀರ್ಣಗಳು, ಬಸ್ ನಿಲ್ದಾಣಗಳು, ಬಸ್ ಡಿಪೋಗಳು, ರೈಲು ನಿಲ್ದಾಣಗಳು ಇತ್ಯಾದಿ ಸಾರ್ವಜನಿಕ ಪ್ರದೇಶಗಳಲ್ಲಿ ಇರುವ ಎಲ್ಲಾ ಬೀದಿ ನಾಯಿಗಳನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳು ಸೆರೆಹಿಡಿದು ಅವುಗಳ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಕ್ರಮ ಕೈಗೊಳ್ಳಬೇಕು. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆದಷ್ಟು ಬೇಗನೆ ಕಾರ್ಯಾಚರಣೆಯನ್ನು ಆರಂಭಿಸಬೇಕೆಂದರು.

ನಾಯಿ ಹಿಡಿಯುವ ತಂಡವು ಸಂಬಂಧಪಟ್ಟ ಸಾರ್ವಜನಿಕ ಸಂಸ್ಥೆಗಳಿಗೆ ಭೇಟಿ ನೀಡುವ ದಿನಾಂಕ ಮತ್ತು ಸಮಯವನ್ನು ಮುಂಚಿತವಾಗಿ ತಿಳಿಸಬೇಕು. ಸಾರ್ವಜನಿಕ ಸ್ಥಳಗಳಿಂದ ಬೀದಿ ನಾಯಿಗಳನ್ನು ಹಿಡಿದ ನಂತರ ಅವುಗಳಿಗೆ ಆಶ್ರಯ ನೀಡಲು ನಿಗದಿತ ಕಟ್ಟಡ ಸ್ಥಳಗಳಿಗೆ ಸ್ಥಳಾಂತರಿಸಬೇಕು. ಅಲ್ಲದೆ ರೇಬೀಸ್ ಪೀಡಿತ ನಾಯಿಗಳನ್ನು ಪ್ರತ್ಯೇಕ ಕಟ್ಟಡ ನಿರ್ವಹಣೆ ಮಾಡಬೇಕು. ಬೀದಿ ನಾಯಿಗಳನ್ನು ಸಂತಾನಹರಣ ಶಸ್ತ್ರಚಿಕಿತ್ಸೆಗೊಳಿಸುವ ಕುರಿತು. ಪ್ರಾಣಿ ಕಲ್ಯಾಣ ಮಂಡಳಿಯಿಂದ ಮಾನ್ಯತೆ ಪಡೆದ ಎನ್.ಜಿ.ಒ. ಗಳಲ್ಲದೇ ಹೆಚ್ಚಿನ ಸಂಸ್ಥೆಗಳಿಂದ ಪ್ರಸ್ತಾವನೆ ಪಡೆದು ನಿಯಮಾನುಸಾರ ಕ್ರಮವಹಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ, ಪಶುಪಾಲನಾ ಮತ್ತು ಪಶುವೈದ್ಯಸೇವಾ ಇಲಾಖೆಯ ಉಪ ನಿರ್ದೇಶಕರಾದ ಫೋಮ್‌ಸಿಂಗ್, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಚಂದ್ರಶೇಖರ, ರಾಯಚೂರು ತಹಶೀಲ್ದಾರ್ ಸುರೇಶ ವರ್ಮ, ರಾಯಚೂರು ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ತಿಮ್ಮಪ್ಪ, ಯುವ ಸಬಲೀಕರಣ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿರೇಶ ನಾಯಕ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರಬಾಬು ಸೇರಿದಂತೆ ವಿಸಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಪುಟ್ಟಮಾದಯ್ಯ, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಜಿಲ್ಲೆಯ ವಿವಿಧ ತಾಲೂಕಿನ ತಹಶೀಲ್ದಾರರು ಇದ್ದರು.

# ಕಿತ್ತಾಟದ ಉತ್ತರ ಕರ್ನಾಟಕವಲ್ಲ, ಪ್ರಗತಿಯ ಕರ್ನಾಟಕ ಬೇಕು



◆ ಡಾ.ಎಂ.ಮಹ್ಮದ್ ಬಾಷ ಗೂಳ್ಯಂ
ಪ್ರಧಾನ ಸಂಪಾದಕ

ಅಧಿವೇಶನ ಅವಲೋಕನ

ಬೆಳಗಾವಿಯ ಚಳಿಗಾಲದ ಅಧಿವೇಶನ ಹಲವು ನಿರೀಕ್ಷೆಗಳಿಗೆ ಸಾಕ್ಷಿಯಾಗಿತ್ತು. ಕೆಲವು ರೋದನೆ, ಕಿರುಚಾಟ ಹಾಗೂ ಸದಭಿರುಚಿಯ ಭಾಷಣಕ್ಕೂ ವೇದಿಕೆ ಆಗಿದ್ದು ಇಲ್ಲಿ ಸ್ಮರಣೀಯ. ವಿಧಾನಮಂಡಲದ ಅಧಿವೇಶನದಲ್ಲಿ ಈ ಬಾರಿ ಪ್ರಾರಂಭದಲ್ಲೇ ಉತ್ತರ ಕರ್ನಾಟಕದ (ಉ.ಕ) ಅಭಿವೃದ್ಧಿ ವಿಚಾರವಾಗಿ ಚರ್ಚೆ ನಡೆದದ್ದು ಈ ಭಾಗದ ಜನರಲ್ಲಿ ಭರವಸೆ ಮೂಡಿಸಿದ್ದು ಖರೆ. ಆದರೆ ಫಲಿತಾಂಶದ ಬಗ್ಗೆ, ಅದರ ಪ್ರಗತಿಯ ಕುರಿತು ಚಿಂತಿಸಿದಾಗ ಮತ್ತದೇ ನಿರಾಸೆ ಮೂಡಿದ್ದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಸಾಮಾನ್ಯವಾಗಿ ಉ.ಕ ಬಗ್ಗೆ ಚರ್ಚೆಯನ್ನು ಕಲಾಪದ ಕೊನೆಯ ದಿನಗಳಲ್ಲಿ ಕೈಗೆತ್ತಿ-ಕೊಂಡು ಇತಿಶ್ರೀ ಹಾಡಿದ ದೀರ್ಘ ಇತಿಹಾಸ ಉಂಟು.

**ಈ ದೇಶದಲ್ಲಿ ಬೀದಿ ಬದಿ ವಡೆ ಮಾರುವವ ತನ್ನ ವಸ್ತುಗೆ ಬೆಲೆ ನಿಗದಿ ಮಾಡುತ್ತಾನೆ. ಇಡೀ ನಾಡಿಗೆ ಅನ್ನಕೊಡುವ ರೈತ ತಾನು ಬೆಳೆದ ಬೆಳೆಗೆ ಬೆಲೆ ನಿಗದಿ ಮಾಡಲಾಗದ ನಿಸ್ಸಹಾಯಕ ಸ್ಥಿತಿಯಲ್ಲಿದ್ದಾನೆ..!**

ಈಸಲ ಉಭಯ ಸದನಗಳಲ್ಲಿ ಉತ್ತರ ಕರ್ನಾಟಕದ ಪ್ರಗತಿಯ ವಿಚಾರವಾಗಿ ಮೊದಲೇ ಚರ್ಚೆಗೆ ಅವಕಾಶ ಸಿಕ್ಕಿದ್ದರ ಹಿಂದೆ ಯಾವ ಕಾರುಣ್ಯ ಇತ್ತೋ..! ಬೆಂಗಳೂರಿನಲ್ಲಿ ನಡೆಯುವ ಅಧಿವೇಶನದಲ್ಲೂ ಉ.ಕ ಸಮಸ್ಯೆಗಳ ಬಗ್ಗೆ ಚರ್ಚಿಸುವುದಕ್ಕೆ ಆದ್ಯತೆ ನೀಡಬೇಕು. ನೀಡಿದ ಭರವಸೆ ಈಡೇರಿಸಿದಾಗ ಈ ಉ.ಕ. ಸಮಸ್ಯೆಗೆ ಶಾಸ್ವತ ಪರಿಹಾರ ಸಾಧ್ಯ.

ರಾಜ್ಯದಲ್ಲಿ ಪ್ರಸ್ತುತ ಅಂಕಿಗೂ ಸಿಗದ ಜ್ವಲಂತ ಸಮಸ್ಯೆಗಳ ಪಟ್ಟಿ ಇದೆ. ಬೀದರ್‌ನಿಂದ ಬೆಂಗಳೂರು ವರೆಗೆ ರಸ್ತೆಗಳ ಅಧೋಗತಿಯ ವಿಷಯ ಇದೆ. ರಾಜ್ಯದ ಶೇ.50ಕ್ಕೂ ಹೆಚ್ಚುಶಾಲೆಗಳಲ್ಲಿ ಶೌಚಾಲಯಗಳೇ ಇಲ್ಲ. ಆಂಡ್ರಾಯ್ಡ್ ಯುಗದಲ್ಲೂ ಅದೆಷ್ಟೋ ಶಾಲೆಗಳಲ್ಲಿ ಏಕೋಪಾಧ್ಯಾಯರೇ ಇದ್ದು ಮಕ್ಕಳಿಗೆ ಗುಣಮಟ್ಟದ ಶಿಕ್ಷಣವೇ ಮರೀಚಿಕೆ ಆಗಿದೆ. ಅತಿವೃಷ್ಟಿ, ಅನಾವೃಷ್ಟಿಗಳಿಂದ ನೇಗಿಲಯೋಗಿ ಬೀದಿಗೆ ಬರುವಂತಾಗಿದೆ. ಇದರ ನಡುವೆ ಹೇಗೋ ಬೆಳೆದ ಬೆಳೆಗೆ ಬೆಲೆಯೇ ಇರಲ್ಲ. ಈ ದೇಶದಲ್ಲಿ ಬೀದಿ ಬದಿ ವಡೆ ಮಾರುವವ ತನ್ನ ವಸ್ತುಗೆ ಬೆಲೆ ನಿಗದಿ ಮಾಡುತ್ತಾನೆ. ಇಡೀ ನಾಡಿಗೆ ಅನ್ನಕೊಡುವ ರೈತ ತಾನು ಬೆಳೆದ ಬೆಳೆಗೆ ಬೆಲೆ ನಿಗದಿ ಮಾಡಲಾಗದ ನಿಸ್ಸಹಾಯಕ ಸ್ಥಿತಿಯಲ್ಲಿದ್ದಾನೆ..! ನಿರುದ್ಯೋಗ ತಾಂಡವ, ಆರೋಗ್ಯ, ಶಿಕ್ಷಣ, ನೀರಾವರಿ..ಹೀಗೆ ಸಮಸ್ಯೆಗಳ ಪಟ್ಟಿ ದೊಡ್ಡದಿದೆ.

ಈ ಕುರಿತು ಯಾವೊಬ್ಬ ಶಾಸಕ, ಸಚಿವ ಟೇಬಲ್‌ಗುದ್ದಿ ಜನತೆ ಪರ ಮಾತನಾಡಿದ್ದು ಕಡಿಮೆ. ಬದಲಿಗೆ ಯಾರಮೇಲೆ ಮಾತಿನ ಮೂಲಕ ಅಟ್ಯಾಕ್ ಮಾಡಿದರೆ ಸುದ್ದಿಯಾಗುತ್ತದೆ, ಯಾವ ಪ್ರಶ್ನೆ ಎತ್ತಿದರೆ ತಮಗೆ ಹಿತವಾಗುತ್ತದೆ, ಯಾಕೆ ನಾವು ಅಧಿವೇಶನಕ್ಕೆ ಹೋಗಬೇಕು ಎನ್ನುವ ಮೆಲೊಡ್ರಾಮಗಳಲ್ಲೇ ಬಹಳಷ್ಟು ಜನಪ್ರತಿನಿಧಿಗಳು ಚಿಂತಿಸುವ ಪರಿಣಾಮ, ಕಲಾಪದಲ್ಲಿ ಬಹಳಷ್ಟು ಕುರ್ಚಿಗಳು ಖಾಲಿ ಖಾಲಿ ಇದ್ದುದನ್ನು ವಿವರಿಸುವುದು ಮೂರ್ಖತನ..!

ಯಾಕೆಂದರೆ ಮುಖ್ಯಮಂತ್ರಿ ಸ್ಥಾನಕ್ಕಾಗಿ ಕಾಂಗ್ರೆಸ್‌ನಲ್ಲಿ ನಡೆದಿರುವ ಕುರ್ಚಿ ಕಿತ್ತಾಟ ಒಂದು ಪುಕ್ಕಟೆ ರಂಜನೆ. ಇದು ಆಡಳಿತಾರೂಢ ಪಕ್ಷ ಹಾಗೂ ಸರಕಾರಕ್ಕೆ ಮುಜುಗರ ತಂದಿದ್ದು ಸುಳ್ಳಲ್ಲ. ಉ.ಕ. ಸಮಸ್ಯೆಗಳನ್ನು ಪರಿಹರಿಸಲು ಸರಕಾರದ ವೈಫಲ್ಯ ಎದ್ದುಕಂಡಿದೆ. ಪ್ರಗತಿಗೆ ಕೈಗೊಳ್ಳಬೇಕಾದ ಕಾರ್ಯಗಳ ಕುರಿತು ಗಮನ ಸೆಳೆಯಲು ಪ್ರತಿಪಕ್ಷಗಳಿಗೆ ವಿಧಾನಮಂಡಲದ ಉಭಯ ಸದನಗಳು ವೇದಿಕೆಯಾಗಿದ್ದು ಸಂತಸಕ್ಕೆ ಕಾರಣ. ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಚರ್ಚೆ ವೇ ಉ.ಕ. ಕುರಿತು ಮಾತನಾಡಿದ್ದು ಉತ್ತಮ ಬೆಳವಣಿಗೆ. ಉ.ಕ ಅಭಿವೃದ್ಧಿಗಾಗಿ ಪ್ರತ್ಯೇಕ ಬಜೆಟ್ ಮಂಡಿಸುವಂತೆ ಜೆಡಿಎಸ್ ಶಾಸಕ ಶರ-ಣಗೌಡ ಕುಂದಕೂರ್, ಉ.ಕ ಪ್ರತ್ಯೇಕ ರಾಜ್ಯ ಸ್ಥಾನಮಾನಕ್ಕೆ ಕಾಗವಾಡ ಶಾಸಕ ರಾಜು ಕಾಗೆ ಬೇಡಿಕೆ ಇಟ್ಟದ್ದು ಇಲ್ಲಿ ದಾಖಲಾರ್ಹ ವಿಚಾರ. ಅಖಂಡ ಕರ್ನಾಟಕ್ಕೆ ಮಡಿದ ಮಹನೀಯರ ಮುಂದೆ ಕಾಗೆ ಅವರ ಬೇಡಿಕೆ ಸಮಂಜಸವಲ್ಲ. ಆದರೆ ಸರ್ಕಾರ ಈ ಕುರಿತ ದನಿಯ ಹಿಂದಿರುವ ನೋವು ಅರಿಯಬೇಕು. ಪ್ರಗತಿಗೆ ಪ್ರತ್ಯೇಕ ಬಜೆಟ್ ರೂಪಿಸಿ ಈ ಭಾಗದ ಜನರ ನೋವಿಗೆ ಮದ್ದರಿಯುವ ಕೆಲಸ ಆಗಲೇ ಬೇಕು. ಇಂಥ ವೈರುಧ್ಯಗಳ ನಡುವೆ ವಿಧಾನ ಪರಿಷತ್ತಿನಲ್ಲಿ ರಾಜ್ಯ ಸರ್ಕಾರ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ಡೇಕೇರ್ ಕಿಮೋಥೆರಪಿ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಿರುವ ವಿಷಯ ಪ್ರಸ್ತಾಪಿಸಿದ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಭರವಸೆ ಮೂಡಿಸಿದ್ದಾರೆ. ಬೆಳಗಾವಿಯಲ್ಲಿ ಕಳೆದ ವರ್ಷ ನಡೆದ ಅಧಿವೇಶನದಲ್ಲಿ 49 ಶಾಸಕರು 13 ಗಂಟೆಗಳ ಕಾಲ ಮಾತಾಡಿದ್ದರು. ಆರೋಗ್ಯ, ಶಿಕ್ಷಣ, ಕೈಗಾರಿಕೆ, ಕೃಷಿ, ನೀರಾವರಿ, ಮೂಲ ಸೌಕರ್ಯಗಳು ಹೀಗೆ ಕಲಬುರಗಿ, ಬೆಳಗಾವಿ ವಿಭಾಗದ 14 ಜಿಲ್ಲೆಗಳ ವಿವಿಧ ವಿಷಯಗಳ ಕುರಿತು ಚರ್ಚೆ ಆಗಿತ್ತು. ಉ.ಕ ನಿರೀಕ್ಷಿಸಿದ ಪ್ರಮಾಣದಲ್ಲಿ ಅಭಿವೃದ್ಧಿಯಾಗುತ್ತಿಲ್ಲ ಎಂಬ ಅಸಮಾಧಾನ ವ್ಯಕ್ತವಾಗಿತ್ತು. ಇಲ್ಲಿನ ಸಮಸ್ಯೆಗಳಿಗೆ ತ್ವರಿತಗತಿಯಲ್ಲಿ ಪರಿಹಾರ ಕಂಡುಕೊಳ್ಳಬೇಕು. ಉತ್ತರ ಕರ್ನಾಟಕ ಅಂದರೆ ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಎರಡೂ ಸೇರಿ ಉತ್ತರ ಕರ್ನಾಟಕ ಆಗಿದೆ. ಸಾಮಾನ್ಯವಾಗಿ ಉ. ಕ ಎಂದಾಕ್ಷಣ ಕಿತ್ತೂರು ಕರ್ನಾಟಕ ಎಂದು ಅನೇಕರು ಭಾವಿಸುತ್ತಾರೆ. ಇದು ಸಲ್ಲ. ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ಎರಡೂ ಸೇರಿ 14 ಜಿಲ್ಲೆಗಳನ್ನು ಒಳಗೊಂಡ ಪ್ರದೇಶವೇ ಉತ್ತರ ಕರ್ನಾಟಕ.

ಈ ಪ್ರದೇಶ ಸ್ವಾತಂತ್ರ್ಯಪೂರ್ವದಿಂದಲೂ ಅನೇಕ ಕಾರಣಗಳಿಂದ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ಕಿತ್ತೂರು ಕರ್ನಾಟಕದ ಅನೇಕ ಪ್ರದೇಶಗಳು ಮುಂಬೈ ಪ್ರಾಂತ್ಯದಲ್ಲಿಯೂ, ಕಲ್ಯಾಣ ಕರ್ನಾಟಕದ ಅನೇಕ ಪ್ರದೇಶಗಳು ನಿಜಾಮರ ಆಳ್ವಿಕೆಗೆ ಒಳಪಟ್ಟಿತ್ತು. ಸ್ವಾತಂತ್ರ್ಯ ಬಳಿಕವೂ ಕನ್ನಡ ಮಾತಾಡುವ ಪ್ರದೇಶಗಳು ಹರಿದು ಹಂಚಿಹೋಗಿದ್ದವು. ಭಾಷಾವಾರು ಪ್ರಾಂತ್ಯಗಳ ರಚನೆಯಾಗಿ ಕರ್ನಾಟಕ ಏಕೀಕರಣವಾದ ಬಳಿಕ ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದ ಪ್ರದೇಶಗಳು ಸೇರಿ ಅಖಂಡ ಮೈಸೂರು ರಾಜ್ಯ ಸ್ಥಾಪನೆಯಾಯಿತು. ಮೈಸೂರು ರಾಜ್ಯ ಕರ್ನಾಟಕ ಎಂದು ಹೆಸರಾಗಿದ್ದೇ ಒಂದು ಚರಿತೆ.

ಉ.ಕದಲ್ಲಿ ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರಗಿ ನಗರಗಳಲ್ಲಿ ಆರ್ಥಿಕ ಚಟುವಟಿಕೆಗಳು ವೇಗಪಡೆದುಕೊಂಡಿವೆ. ಪ್ರಶ್ನೆ ಇರುವುದು ಉ.ಕದ ಎಲ್ಲ ಜಿಲ್ಲೆಗಳಲ್ಲೂ ಇಂತಹ ಅಭಿವೃದ್ಧಿಯ ವೇಗ ಇದೆ-ಯೇ ಎನ್ನುವುದಕ್ಕೆ ಉತ್ತರ ಅಸ್ಪಷ್ಟ. ಅಭಿವೃದ್ಧಿಯನ್ನು ನಿರ್ಲಕ್ಷಿಸಲಾಗಿದೆ ಎಂಬ ಅಸಮಾಧಾನ ದಶಕಗಳಿಂದಲೂ ಉಂಟು. ಹೀಗಾಗಿಯೇ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಕೂಗು ಈಗಲೂ ಕೇಳಿ ಬರುತ್ತಲೇ ಇದೆ. ಬೆಳಗಾವಿ ಅಧಿವೇಶನದ ಸಂದರ್ಭದಲ್ಲೂ ಮಾರ್ದನಿಸುತ್ತದೆ.

ಅಭಿವೃದ್ಧಿ ವಿಚಾರದಲ್ಲಿ ಉ.ಕಕ್ಕೆ ತಾರತಮ್ಯವಾಗಿರುವುದು ಕನ್ನಡಿಯಷ್ಟೇ ಸ್ಪಷ್ಟ. ಇದೇ ವೇಳೆ ಈ ಭಾಗದ ಜನಪ್ರತಿನಿಧಿಗಳು ತಮ್ಮ ಕರ್ತವ್ಯವನ್ನು ಸಮರ್ಥವಾಗಿ ನಿಭಾಯಿಸಬೇಕು. ರಾಜಕೀಯ ಬದಿಗೊತ್ತಿ, ಆಳುವ ಸರಕಾರಗಳ ಮೇಲೆ ನಿರಂತರವಾಗಿ ಒತ್ತಡ ಹೇರಿ ಅಭಿವೃದ್ಧಿ ಕಾರ್ಯಗಳನ್ನು ಆಗುಮಾಡಿಸಿಕೊಳ್ಳಬೇಕು.

ಇಲ್ಲಿ ಅಭಿವೃದ್ಧಿಗೆ ವೆಚ್ಚ ಮಾಡಿದ ಹಣ ಸದ್ವಿನಿಯೋಗ ಆಗುವಂತೆ ನೋಡಿಕೊಳ್ಳಬೇಕು. ಮಾಹಿತಿ ತಂತ್ರಜ್ಞಾನದ ಕಂಪನಿಗಳು ಈ ಭಾಗದಲ್ಲಿ ಹೆಚ್ಚಾಗಿ ಸ್ಥಾಪನೆಯಾಗಲು ಸರಕಾರ ಮೂಲ ಸೌಕರ್ಯ ಕಲ್ಪಿಸಬೇಕು. ಕಲ್ಯಾಣ ಕರ್ನಾಟಕದಲ್ಲಿ 371 ಜೆ ಮೀಸಲು ಅನುಷ್ಠಾನ ಪಾರದರ್ಶಕವಾಗಿರಬೇಕು. ಇದಾಗದೆ ಉ.ಕ ಪ್ರಗತಿಗೆ ಪ್ರತ್ಯೇಕ ರಾಜ್ಯದ ಕೂಗು ಪರಿಹಾರವಲ್ಲ. ಪ್ರತಿಪಕ್ಷದಲ್ಲಿದ್ದಾಗ ಅಭಿವೃದ್ಧಿ ಕುರಿತು ರಾಜಕಾರಣಿಗಳು ಅಧಿಕಾರಕ್ಕೆ ಬಂದಾಗ ನಿರ್ಲಕ್ಷ್ಯ ತೋರುವುದೇ ವಿಚಿತ್ರ.

ಇನ್ನು ಯಾವುದೇ ಸರಕಾರವಿರಲಿ, ಹಳೆಯ ಮೈಸೂರು ಪ್ರಾಂತ್ಯದ ಸಚಿವರು ಉ.ಕ ಕಡೆ ಪ್ರವಾಸ ಮಾಡುವುದು ವಿರಳ. ಸಚಿವರು ರಾಜ್ಯಾದ್ಯಂತ ಪ್ರವಾಸ ಮಾಡದಿದ್ದರೆ ಅವರಿಗೆ ಆಯಾ ಪ್ರದೇಶದ ಜನರ ಸಂಕಷ್ಟಗಳು ಅರಿವು ಅಸಾಧ್ಯ. ಇಂತಹ ತಾಕಿಕ ವಿಚಾರಗಳ ನಡುವೆಯೂ ಬೆಳಗಾವಿಯ ಅಧಿವೇಶನ ಅಂತ್ಯವಾಗುವ ಹಂತದಲ್ಲಿದೆ. ಇನ್ನೂ ಒಂದುವಾರ ಅಧವೇಶನ ನಡೆಸಿ ಅಂತ ಪ್ರತಿಪಕ್ಷ ಒತ್ತಾಯಿಸಿದೆ. ಇಂದು ಮುಗಿಯಬೇಕಿದ್ದ ಕಲಾಪ ಮುಂದುವರಿಸುತ್ತಾರೋ ಬಿಡುತ್ತಾರೊ ಅನ್ನುವುದು ಇಲ್ಲಿ ಮುಖ್ಯವಲ್ಲ. ಬ್ರೇಕ್ ಫಾಸ್ಟ್ ಸಭೆಗಳೂ, ಡಾ.ಯತೀಂದ್ರ ಏನೇಳಿದರು, ಸಿದ್ದರಾಮಯ್ಯ ಹೇಗೆ ಸೀಟು ಭದ್ರಪಡಿಸಿಕೊಂಡರು, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಗ್ಯಾರೆಂಟಿ ಹಣ ಕೊಡದಿರುವ ಬಗ್ಗೆ ಸದನದಲ್ಲಿ ಗದ್ದಲಾಗಿದ್ದು, ಡಿಕೆಶಿವಕುಮಾರ್ ಅವರು ಆ ಸಚಿವೆ ಪರ ವಾದಿಸಿದ್ದೂ ಇಲ್ಲಿ ಲಾಜಿಕ್ಕಾಗಬಹುದು. ಯಾಕೆಂದರೆ ರಾಜ್ಯದ ಸರ್ವಾಂಗೀಣ ಪ್ರಗತಿಗೆ ಸರ್ಕಾರ ಹಾಗೂ ಜನಪ್ರತಿನಿಧಿಗಳು ಎಷ್ಟು ಎಷ್ಟು ಸ್ಪಸಂದಿಸಿದ್ದಾರೆ ಎನ್ನುವುದೇ ಪ್ರಸ್ತುತ.



ಶರಣ ಬಸವೇಶ್ವರ ಶಿಕ್ಷಣ ಸಂಸ್ಥೆ (ಶರಣಬಸಪ್ಪ ಅಪ್ಪಾ ಪಿಯು ಕಾಲೇಜ್ ಪ್ರಿನ್ಸಿಪಾಲ ಸತೀಶ್ ಪರ್ತಾಪುರೆ ಅವರಿಗೆ ಇಂದು ಮಲ್ಲಮ್ಮ ನುಡಿ ಪತ್ರಿಕೆಯನ್ನು ನೀಡಲಾಯಿತು.

## ಚಾಂಪಿಯನ್ ಟ್ರೋಫಿ ಎತ್ತಿದ ಮಣಿಪಾಲ್ ಹಾಸ್ಪಿಟಲ್ಸ್




**ಬೆಂಗಳೂರು:** ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ), ವಿಶ್ವವಿದ್ಯಾಲಯ ಎಂದು ಪರಿಗಣಿತವಾದ ಉತ್ಕೃಷ್ಟ ಸಂಸ್ಥೆ ಆಯೋಜಿಸಿದ್ದ 'ಕಾರ್ಪೊರೇಟ್ ಕ್ರಿಕೆಟ್ ಚಾಂಪಿಯನ್‌ಶಿಪ್-2025' ಭಾನುವಾರ ಮಾಹೆ ಬೆಂಗಳೂರು ಕ್ಯಾಂಪಸ್‌ನಲ್ಲಿ ನಡೆದ ಅದ್ದೂರಿ ಫೈನಲ್ ಪಂದ್ಯದೊಂದಿಗೆ ತೆರೆಕಂಡಿತು. ನವೆಂಬರ್ 16ರಂದು ಆರಂಭವಾಗಿದ್ದ ಈ ಒಂದು ತಿಂಗಳ ಟೂರ್ನಮೆಂಟ್‌ನಲ್ಲಿ 12 ಪ್ರಮುಖ ಕಾರ್ಪೊರೇಟ್ ಸಂಸ್ಥೆಗಳ ತಂಡಗಳು ಭಾಗವಹಿಸಿದ್ದವು. ಈ ಟೂರ್ನಮೆಂಟ್‌ನಲ್ಲಿ ಒಟ್ಟು 16 ರೋಚಕ ಟಿ-20 ಪಂದ್ಯಗಳು ನಡೆದವು.

## ಅನ್ನಭಾಗ್ಯ: 284 ಪಾಕೆಟ್ ಅಕ್ಕಿ ಜಪ್ತಿ, ಪ್ರಕರಣ ದಾಖಲು



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಡವರಿಗೆ ಸೇರಬೇಕಿದ್ದ ಸರ್ಕಾರದ ಅನ್ನಭಾಗ್ಯ ಯೋಜನೆಯ ಅಕ್ಕಿ ಕಾಳಸಂತೆಯಲ್ಲಿ ಮಾರಾಟವಾಗುತ್ತಿದ್ದು, ಈ ಕುರಿತು ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 142 ಕ್ವಿಂಟಾಲ್ 284 ಅಕ್ಕಿ ಪಾಕೆಟ್ ಗಳನ್ನು ವಶಕ್ಕೆ ಪಡೆಯುವಲ್ಲಿ ಆಹಾರ ಇಲಾಖೆ ಅಧಿಕಾರಿಗಳು, ಪೋಲೀಸ್ ರು ಯಶಸ್ವಿಯಾಗಿದ್ದಾರೆ. ಖಚಿತ ಮಾಹಿತಿ ಮೇರೆಗೆ ಆಹಾರ ಇಲಾಖೆಯ ನಿರೀಕ್ಷಕ ಆದಿಶೇಷಸಲು ಅಂಬೇಡ್ಕರ್ ಅವರು ನಗರದ ಇಂಡಸ್ಟ್ರಿಯಲ್ ಏರಿಯಾ 2ನೇ ಹಂತದ ಪ್ರದೇಶದ ಗೋದಾಮು ಒಂದರಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟದ್ದ ಸ್ಥಳಕ್ಕೆ ಆಹಾರ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ, ಅಕ್ಕಿ ಪಾಕೆಟ್ ಗಳನ್ನು ವಶಕ್ಕೆ ಪಡೆದು, ತಪ್ಪಿತಸ್ಥರ ವಿರುದ್ಧ ಎಪಿಎಂಸಿ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಬಡವರ ಹೊಟ್ಟೆ ಸೇರಬೇಕಾಗಿದ್ದ ಅನ್ನಭಾಗ್ಯ ಯೋಜನೆಯ ಅಕ್ಕಿ, ಇತರೇ ಆಹಾರ ಧಾನ್ಯಗಳು ಅಕ್ರಮ ದಂಧೆಕೋರರ ಪಾಲಾಗುತ್ತಿದ್ದು, ಅಧಿಕಾರಿಗಳು ಇದಕ್ಕೆ ಕಡಿವಾಣ ಹಾಕಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

## ಫ್ರೇಮ್‌ಗಳನ್ನು ಇಡಲು ಅನುಮತಿಗಾಗಿ ಮನವಿ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು



ನಗರದ ಬಜಾರ್ ರಸ್ತೆಯಲ್ಲಿ ದ್ವಿಚಕ್ರ ವಾಹನಗಳನ್ನು ಅಂಗಡಿ ಮುಂಭಾಗ ನಿಲ್ಲಿಸುವುದರಿಂದ ಮಾಲೀಕರು ಹಾಗು ವ್ಯವಹಾರಕ್ಕೆ ಬರುವವರು ಅಂಗಡಿಗಳಿಗೆ ಹೋಗಿ ಬರಲು ಸಾಧ್ಯವಾಗದ ಕಾರಣ ಅಂಗಡಿ ಮುಂದೆ 4ಅಡಿ ಅಗಲ 2ಅಡಿ ಉದ್ದದ ಫ್ರೇಮ್ ಗಳನ್ನು ಇಟ್ಟುಕೊಂಡು ವ್ಯವಹಾರಿಸುತ್ತಿದ್ದರು. ಆದರೆ ನಗರ ಸಭೆ ಸಿಬ್ಬಂದಿ ಅವುಗಳನ್ನು ತೆದುಹಾಕುತ್ತಿರುವುದರಿಂದ ವಾಹನ ಸವಾರರು ಅಂಗಡಿ ಮುಂಭಾಗ ವಾಹನಗಳನ್ನು ನಿಲ್ಲಿಸುವುದರಿಂದ ಹೋಗಿ ಬರಲು ಆಗದೆ, ವ್ಯವಹಾರಕ್ಕೆ ತೆ-ಾಂದರೆ ಆಗಿ ವ್ಯಾಪಾರ ಕುಸಿಯುತ್ತಿದೆ. ಬಾಡಿಗೆ ಕೊಡಲಾಗದಷ್ಟು ನಷ್ಟವಾಗುತ್ತಿದೆ. ಅಂಗಡಿ ಮುಂದೆ ಹೋಗಿಬರಲು ಅನುಕೂಲ ಆಗುವಂತೆ ಫ್ರೇಮ್ ಗಳನ್ನು ಇಡಲು ಅನುಮತಿ ನೀಡಬೇಕೆಂದು ನಗರ ಸಭೆಯ ಆಯುಕ್ತರಾದ ಮಾನಸ ರವರಿಗೆ ಬಜಾರ್ ರಸ್ತೆಯ ಅಂಗಡಿ ಮಾಲೀಕರು , ಆಮ್ ಆದ್ಮಿ ಪಕ್ಷದ ತಾಲ್ಲೂಕ್ ಅಧ್ಯಕ್ಷ ರ ಜೆ ಮೋಹಿಯುದ್ದಿನ್ ಮನವಿ ಪತ್ರ ಸಲ್ಲಿಸಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಮೋಹಿಯುದ್ದಿನ್ ವ್ಯಾಪಾರಗಾರರ ಹಿತ ದೃಷ್ಟಿಯಿಂದ ಫ್ರೇಮ್ ಗಳನ್ನು ತಿರುಗಾಡಲು ಅನುಕೂವಾಗುವಂತೆ ಅಳವಡಿಸಿ ಕೊಳ್ಳಲು ನಗರಸಭೆ ಅನುಮತಿ ನೀಡಿ ವ್ಯವಹಾರಕ್ಕೆ ಸಹಕರಿಸಬೇಕು ಎಂದು ನಗರಸಭೆ ಅಧಿಕಾರಿಗಳು ಹಾಗೂ ಆಯುಕ್ತರನ್ನು ಅಂಗಡಿ ಮಾಲೀಕರು ವಿನಂತಿ ಮಾಡಿದ್ದೇವೆ ಎಂದು ತಿಳಿಸಿದ್ದಾರೆ.

## ಮಲ್ಲಾಪುರ ಗೇಟ್ ಬಳಿ ನವಜಾತ ಗಂಡು ಮಗು ಪತ್ತೆ

### ಹೊಳೆಹೊನ್ನೂರು ಠಾಣೆಯಲ್ಲಿ ಪ್ರಕರಣ ದಾಖಲು

• ಮಲ್ಲಮ್ಮ ನುಡಿ ವಾರ್ತೆ ಹೊಳೆಹೊನ್ನೂರು

ಚನ್ನಗಿರಿ ತಾಲೂಕಿನ ಮಲ್ಲಾಪುರ ಗ್ರಾಮದ ಗೇಟ್ ಸಮೀಪ ರಸ್ತೆಬದಿಯಲ್ಲಿ ನವಜಾತ ಗಂಡು ಮಗು ಪತ್ತೆಯಾಗಿರುವ ಘಟನೆ ದಿನಾಂಕ 15/12/2025ರ ರಾತ್ರಿ ನಡೆದಿದೆ.

ಬಸವಪುರ ಗ್ರಾಮ (ದೇಗಾರ ದಳ), ಚನ್ನಗಿರಿ ತಾಲೂಕು, ದಾವಣಗೆರೆ ಜಿಲ್ಲೆಯ ನಿವಾಸಿ ಶ್ರೀ ಕುಶಾ (39), ವಾಲ್ಮೀಕಿ ನಾಯಕರು ನವಚೇತನ ಶಾಲಾ ಶಾಲಾ ಟ್ರಿಪ್ ಚಾಲಕರು, ಅವರು ತಮ್ಮ ಕುಟುಂಬ ಸದಸ್ಯರೊಂದಿಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಸಂಬಂಧಿಯನ್ನು ಚಿಕಿತ್ಸೆಗಾಗಿ ಕರೆದು-ಕೊಂಡು ಹೋಗಿ ವಾಪಸ್ಸಾಗುವ ಸಂದರ್ಭದಲ್ಲಿ ಈ ಘಟನೆ ಬೆಳಕಿಗೆ ಬಂದಿದೆ.

ರಾತ್ರಿ ಸುಮಾರು 10.45 ಗಂಟೆ ಸಮಯದಲ್ಲಿ ಶಿವಮೊಗ್ಗ-ಹೊಳೆಹೊನ್ನೂರು ಮಾರ್ಗವಾಗಿ ಸಾಸ್ವೆಹಳ್ಳಿ ಗ್ರಾಮಕ್ಕೆ ತೆರಳುವಾಗ ಮಲ್ಲಾಪುರ ಗೇಟ್ ಬಳಿ ವಾಹನ ನಿಲ್ಲಿಸಿ ರಸ್ತೆಬದಿಯಲ್ಲಿ ಇದ್ದಾಗ ಮಗು ಅಳುವ ಶಬ್ದ ಕೇಳಿಬಂದಿದೆ. ತಕ್ಷಣ ಸ್ಥಳಕ್ಕೆ ತೆರಳಿ ಮೊಬೈಲ್ ಟಾರ್ಚ್ ಸಹಾಯದಿಂದ ಪರಿಶೀಲಿಸಿದಾಗ, ಪಂಚೆಯಲ್ಲಿ ಸುತ್ತಿಟ್ಟಿದ್ದ ನವಜಾತ ಗಂಡು ಮಗು ಪತ್ತೆಯಾಗಿದೆ. ಮಗು ಹುಟ್ಟಿ ಸುಮಾರು 2-3 ದಿನಗಳಾಗಿರಬಹುದು ಎಂದು ಅಂದಾಜಿಸಲಾಗಿದೆ.



ಸುತ್ತಮುತ್ತ ಯಾರೂ ಕಾಣದ ಕಾರಣ ಹಾಗೂ ರಾತ್ರಿಯ ಸಮಯವಾಗಿದ್ದರಿಂದ ಮಗುವಿನ ಸುರಕ್ಷತೆ ದೃಷ್ಟಿಯಿಂದ ಮಗುವನ್ನು ತಮ್ಮ ಊರಿಗೆ ಕರೆದುಕೊಂಡು ಹೋಗಿ ಆರೈಕೆ ಮಾಡಲಾಗಿದೆ. ನಂತರ ದಿನಾಂಕ 16/12/2025ರಂದು ನವಜಾತ ಮಗುವಿನೊಂದಿಗೆ ಹೊಳೆಹೊನ್ನೂರು ಪೊಲೀಸ್ ಠಾಣೆಗೆ ಹಾಜರಾಗಿ ಮಾಹಿತಿ ನೀಡಿದ್ದಾರೆ.

ಮಗುವನ್ನು ಯಾರೋ ಅಜ್ಞಾತ ವ್ಯಕ್ತಿಗಳು ಆರೈಕೆ ಪೋಷಣೆ ಮಾಡದೇ ಬೀದಿಪಾಲು ಮಾಡುವ ಉದ್ದೇಶದಿಂದ ಬಿಟ್ಟು ಹೋಗಿರುವ ಶಂಕೆ ವ್ಯಕ್ತವಾಗಿದೆ. ಈ ಸಂಬಂಧ ಹೊಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಮಗುವಿನ ಪೋಷಕರ ಪತ್ತೆಗೆ ಹಾಗೂ ಮುಂದಿನ ಕಾನೂನು ಕ್ರಮಕ್ಕೆ ತನಿಖೆ ಆರಂಭಿಸಲಾಗಿದೆ.

## ರಸ್ತೆ ನಿರ್ಮಾಣಕ್ಕೆ ಶಾಸಕ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಯಾಗಿ 17 ವರ್ಷ ಕಳೆದರೂ ಇಂದಿಗೂ ರಸ್ತೆಗಳು ಅಭಿವೃದ್ಧಿ ಕಾಣದೇ ವಾಸಿಸುತ್ತಿರುವ ನಿವಾಸಿಗಳು ನರಕ ಯಾತನೆ ಅನುಭವಿಸುವಂತಾಗಿದೆ.

2008 ರಿಂದ ಇಲ್ಲಿಯವೆರೆಗೂ ಮೂರು ಜನ ಶಾಸಕರು ಆಯ್ಕೆಯಾಗಿದ್ದು ದೊಡ್ಡ ಬಿದರಕಲ್ಲು ಯಾವುದೇ ಅಭಿವೃದ್ಧಿಯಾಗಿಲ್ಲ, ಅದರಲ್ಲೂ ರಸ್ತೆಗಳಂತೂ ಹೇಳ ತೀರದು. ಮಳೆಗಾಲ ಬಂದರಂತೂ ಹೆಂಗಸರು ಮಕ್ಕಳು ಮನೆಯಿಂದ ಆಚೆ ಬಂದು ಓಡಾಡಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ಅನೇಕ ಭಾರಿ ಸಂಭಂದಪಟ್ಟವರ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ಪ್ರತಿಭಟನೆ ಹಮ್ಮಿಕೊಂಡು ಸ್ಥಳೀಯ ಶಾಸಕ ಎಸ್. ಟಿ. ಸೋಮಶೇಖರ್ ವಿರುದ್ಧ ಅಕ್ರೋಶ



ವ್ಯಕ್ತಪಡಿಸಿದರು. ದೊಡ್ಡ ಬಿದರಕಲ್ಲು ವಾರ್ಡ , ತಿಪ್ಪೇನಹಳ್ಳಿಯ ಶ್ರೀ ಲಕ್ಷ್ಮೀ ವೆಂಕಟೇಶ್ವರ ಬಡಾವಣೆ ನಿವಾಸಿಗಳಿಂದ ರಸ್ತೆ ನಿರ್ಮಾಣಕ್ಕೆ ಸರ್ಕಾರ ಹಾಗೂ ಸ್ಥಳೀಯ ಶಾಸಕರ ವಿರುದ್ಧ ನೂರಾರು ನಿವಾಸಿಗಳು ಸೇರಿ ಬೃಹತ್ ಪ್ರತಿಭಟನೆ ನೆಡೆಸಿದರು. ಶ್ರೀ ಲಕ್ಷ್ಮೀ ವೆಂಕಟೇಶ್ವರ ನಿವಾಸಿ ಜಗದೀಶ್ ಮಾತನಾಡಿ ಚುನಾವಣಾ ನೀತಿ ಸಂಹಿತೆ ವೇಳೆ ಓಟಿಗಾಗಿ ಜಲ್ಲಿ ಸುರಿದು ಆಶ್ವಾಸನೆ ನೀಡಿ ಓಟು ಹಾಕಿಸಿಕೊಂಡು ಗೆದ್ದು ಇಲ್ಲಿಯವರೆಗೂ ಅಂದರೆ 3 ವರ್ಷ ಕಳೆದರೂ ತಿರುಗಿನೋಡಿಲ್ಲ. ಚುನಾವಣೆಯಲ್ಲಿ ಎಲ್ಲಿ ಶಾಸಕರಿಗೆ ಓಟು ಬಂದಿದಿಯೋ ಅಲ್ಲಿ ರಸ್ತೆಗೆ ಡಾಂಬರೀಕರಣ ಮಾಡಿದ್ದಾರೆ. ಎಲ್ಲಿ ಬಂದಿಲ್ಲ ಅಲ್ಲಿ ಇಲ್ಲಿಯವರೆಗೂ ರಸ್ತೆ ಅಭಿವೃದ್ಧಿಗೊಳಿಸಿಲ್ಲ.

ಯಾವ ಬಿಬಿಎಂಪಿ ಅಧಿಕಾರಿ ಕಾನೂನು ಭಾಹಿರವಾಗಿ ರಸ್ತಗೆ ಜಲ್ಲಿ ಹರಡಿದ್ದಿರೋ ಜಲ್ಲಿಗಳನ್ನು ತೆಗದುಕೊಂಡು ಹೋಗಲಿ, ಇಲ್ಲವಾದಲ್ಲಿ ನಾವೇ ಜಲ್ಲಿ ತುಂಬಿಕೊಂಡು ಜಿಬಿಎ ಕಛೇರಿ ಮುಂದೆ ಸುರಿದು ಪ್ರತಿಭಟನೆ ಹಮ್ಮಿಕೊಳ್ಳುತ್ತೆವೆ.

ಸಮಸ್ಯೆಗೆ ಕೂಡಲೇ ಸ್ಪಂದಿಸಿ ರಸ್ತೆ ಸರಿ ಮಾಡದೇ ಇದ್ದರೆ ಶಾಸಕರ ವಿರುದ್ಧ ವಿಧಾನಸೌಧದ ಮುಂದೆ ಪ್ರತಿಭಟನೆ ಮಾಡುವ ಎಚ್ಚರಿಕೆಯನ್ನು ಸಾರ್ವಜನಿಕರು ನೀಡಿದರು.

## ವೈಯಕ್ತಿಕ ಕಾಳಜಿ ಸಮಸ್ಯೆಗೆ ಪರಿಹಾರ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ಮುಂದಿನ ಮೂರು ತಿಂಗಳು ಶಿಕ್ಷಕರು ಸೇರಿದಂತೆ ಎಲ್ಲರೂ ಸಮನ್ವಯದಿಂದ ಕಾರ್ಯ ನಿರ್ವಹಿಸುವಂತೆ ಕರ್ನಾಟಕ ಪ್ರೌಢಶಾಲಾ ಮಂಡಳಿ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಅಧ್ಯಕ್ಷರಾದ ಪ್ರಕಾಶ ನಿಟ್ಟಳ್ಳಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಶಾಲಾ ಶಿಕ್ಷಣ ಇಲಾಖೆ ಅವರ ಸಹಯೋಗದಲ್ಲಿ ಬುಧವಾರ ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಫ.ಗು.ಹಳಕಟ್ಟಿ ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗಾಗಿ ವಿಜಯಪುರ-ಬಾಗಲಕೋಟೆಯ ವಿಭಾಗ ಮಟ್ಟದ ಸಂಪನ್ಮೂಲ ಶಿಕ್ಷಕರ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.



ಮಗುವಿನ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಹಾಗೂ ಮನಸ್ಥಿತಿಯನ್ನು ಅರಿತುಕೊಂಡು ಗುಣಾತ್ಮಕ ಮತ್ತು ಪರಿಮಾಣಾತ್ಮಕವಾಗಿ ಬೋಧನಾ ಕ್ರಮಗಳನ್ನು ಅಳವಡಿಸಿಕೊಂಡು ಶಿಕ್ಷಕರು ಬೋಧನೆ ಮಾಡುವ ಮೂಲಕ ಅವರ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಿ ವಿಷಯ ಕರಗತ ಮಾಡಿಸಬೇಕು. ಮುಂದಿನ ಮೂರು ತಿಂಗಳು ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಕಾಳಜಿ ಪೂರಕವಾಗಿ ಶ್ರಮಿಸುವ ಹೊಣೆಗಾರಿಕೆ ನಮ್ಮೆಲ್ಲರದ್ದಾಗಿದೆ ಎಂದು ಅವರು ಹೇಳಿದರು.

ಪರೀಕ್ಷೆಗೆ ಸಂಬಂಧಿಸಿದ ನೀಲನಕ್ಷೆ, ಮಾದರಿ ಪ್ರಶ್ನೆ ಪತ್ರಿಕೆ, ಪರೀಕ್ಷಾ ಉಪಕ್ರಮಗಳನ್ನು ಈಗಾಗಲೇ ಒದಗಿಸಿದೆ. ಅದರಂತೆ ಫಲಿತಾಂಶ ಸುಧಾರಣೆಗಾಗಿ ನೀಡುವ ನಿರ್ದೇಶನಗಳನ್ನು ಅಳವಡಿಸಿಕೊಂಡು, ವಿವಿಧರೀತಿಯ ಪರೀಕ್ಷೆಗಳನ್ನು ಏರ್ಪಡಿಸಿ, ಈ ಪರೀಕ್ಷೆಗಳನ್ನು ಮುಖ್ಯ ಪರೀಕ್ಷೆ ಎಂದೇ ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟು ಅಚ್ಚುಕಟ್ಟಾಗಿ ನಡೆಸಬೇಕು. ಈ ನಿಟ್ಟಿನಲ್ಲಿ ನಮ್ಮ ಹೊಣೆಗಾರಿಕೆ ಹೆಚ್ಚಿಗಿದ್ದು, ಇದನ್ನರಿತು ಈ ದಿಸೆಯಲ್ಲಿ ಕಾರ್ಯನಿರ್ವಹಿಸಬೇಕು. ಎಂದು ತಿಳಿಸಿದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)